ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 4 ಶನಿವಾರ 2023

ಸಂಪುಟ: 43 | ಸಂಚಿಕೆ: 287 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4


ವಿದ್ಯಾರ್ಥಿಗಳ ಕೊರತೆ ಹಿನ್ನೆಲೆ

5124 ಸರ್ಕಾರಿ ಶಾಲೆ ಬಂದ್‌ಗೆ ಶಿಫಾರಸು

ಕರ್ನಾಟಕ ಆಡಳಿತ ಸುಧಾರಣಾ ಆಯೋಗದಿಂದ ಸರ್ಕಾರಕ್ಕೆ ವರದಿ

■3457 ಕಿರಿಯ, 1667 ಹಿರಿಯ ಪ್ರಾಥಮಿಕ ಶಾಲೆಗಳ ವಿಲೀನಕ್ಕೆ ಸಲಹೆ

■2460 ಕಿರಿಯ, 1135 ಹಿರಿಯ ಪ್ರಾಥಮಿಕ ಶಾಲೆ ಸಂಯುಕ್ತ/ಕ್ಲಸ್ಟರ್ ಪ್ರೌಢಶಾಲೆ ಇಲ್ಲವೆ ಕರ್ನಾಟಕ ಪಬ್ಲಿಕ್ ಶಾಲೆಗಳಾಗಿಸಲು ವರದಿ



ಬೆಂಗಳೂರು, ಫೆ. 3 (ಕೆಎಂಶಿ)–ವಿದ್ಯಾರ್ಥಿಗಳ ಕೊರತೆ ಇರುವ 5124 ಸರ್ಕಾರಿ ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳನ್ನು ಮುಚ್ಚುವಂತೆ ಕರ್ನಾಟಕ ಆಡಳಿತಾ ಸುಧಾರಣಾ ಆಯೋಗ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

ಪರಸ್ಪರ ನೂರು ಮೀಟರ್ ಅಂತರದಲ್ಲಿರುವ 3457 ಸರ್ಕಾರಿ ಕಿರಿಯ ಹಾಗೂ 1667 ಹಿರಿಯ ಪ್ರಾಥಮಿಕ ಶಾಲೆಗಳನ್ನು ವಿಲೀನಗೊಳಿಸುವಂತೆ ಹೇಳಿದೆ. ಆಯೋಗದ ಅಧ್ಯಕ್ಷ ವಿಜಯ ಭಾಸ್ಕರ್, ಇಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ, ನಾಲ್ಕು ಮತ್ತು ಐದನೇ ವರದಿಗಳನ್ನು ಸಲ್ಲಿಸಿದರು.

ವರದಿಯಲ್ಲಿ ವಿದ್ಯಾರ್ಥಿಗಳ ಕೊರತೆ ಇರುವ 2460 ಕಿರಿಯ ಪ್ರಾಥಮಿಕ ಶಾಲೆ ಹಾಗೂ 1135 ಹಿರಿಯ ಪ್ರಾಥಮಿಕ ಶಾಲೆಗಳನ್ನು ಸಂಯುಕ್ತ/ಕ್ಲಸ್ಟರ್ ಪ್ರೌಢ ಶಾಲೆಗಳಾಗಿ ಇಲ್ಲವೆ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳಾಗಿ ವಿಲೀನಗೊಳಿಸಬಹುದು ಎಂದಿದ್ದಾರೆ. ಕರ್ನಾಟಕ ಪಬ್ಲಿಕ್ ಸ್ಕೂಲ್ ಮತ್ತು ಕ್ಲಸ್ಟರ್ ಶಾಲೆಗಳಲ್ಲಿ ಒಂದನೇ ತರಗತಿಯಿಂದ 12ನೇ ತರಗತಿಯ ವರೆಗೆ ಮಗುವಿಗೆ ಮೂರು ಭಾರಿ ವರ್ಗಾವಣೆ ಪ್ರಮಾಣ ಪತ್ರ ತೆಗೆದು ಕೊಳ್ಳುವ ಮತ್ತು ಪ್ರವೇಶ ಪಡೆಯಬೇಕಾದ ಅಗತ್ಯವನ್ನೂ ತೆಗೆದು ಹಾಕುವ ಆದೇಶ ಹೊರಡಿಸಬಹುದು. ಸ್ವಂತ ಕಟ್ಟಡ ಹೊಂದಿರದ 6307 ಅಂಗನವಾಡಿ ಕೇಂದ್ರಗಳನ್ನು ಸಮೀಪವಿರುವ ಸರ್ಕಾರಿ ಶಾಲಾ ಕಟ್ಟಡಗಳಿಗೆ ಸ್ಥಳಾಂತರಿಸುವಂತೆ ಹೇಳಿದೆ.

ಡ್ರಾಪ್‌ಔಟ್‌ಗೆ ಹೊಸ ಪರಿಹಾರ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚಿನ ಅನುತೀರ್ಣತೆಯ ಪ್ರಮಾಣ ದಿಂದ ವಿದ್ಯಾರ್ಥಿಗಳು ಮುಂದಿನ ವ್ಯಾಸಂಗದಿಂದ ಡ್ರಾಪ್‌ಔಟ್ ಆಗುತ್ತಿದ್ದಾರೆ. ಇದನ್ನು ತಪ್ಪಿಸಲು ಉತ್ತೀರ್ಣ ರಾಗಲು ಸರಾಸರಿ ಶೇಕಡ 35 ಅಂಕಗಳ ಪೈಕಿ, ಎಸ್‌ಎಸ್‌ಎಲ್‌ಸಿ ಲಿಖಿತ ಪರೀಕ್ಷೆಯಲ್ಲಿ ಕನಿಷ್ಠ 28 ಅಂಕಗಳನ್ನು ಗಳಿಸಬೇಕಾಗಿದ್ದು, ಇದನ್ನು ನೆರೆ ರಾಜ್ಯ ದಂತೆ 20 ಅಂಕಗಳಿಗೆ ಇಳಿಸಬಹುದು. ಸರ್ಕಾರ ಇಂತಹ ನಿರ್ಧಾರ ಕೈಗೊಂಡರೆ, 1ನೇ ಮತ್ತು 2ನೇ ಪಿಯುಸಿ ತರಗತಿಗಳ ನಡುವಿನ ಡ್ರಾಪ್‌ಔಟ್ ಕಡಿಮೆ ಮಾಡಬಹುದು ಎಂದು ವಿವರವಾಗಿ ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ವೈದ್ಯಕೀಯ ಸಂಸ್ಥೆಗಳು ಹಾಗೂ ಸಿಜಿಹೆಚ್‌ಎಸ್‌ನಲ್ಲಿರುವಂತೆ ಎಲ್ಲಾ ಇಲಾಖೆಗಳ ಸರ್ಕಾರಿ ವೈದ್ಯರ ಖಾಸಗಿ ವೃತ್ತಿ (ಪ್ರೈವೇಟ್ ಪ್ರಾಕ್ಟೀಸ್) ನಿಷೇಧಿಸಬಹುದು. ಅಲ್ಲದೆ ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಜೆ ಓಪಿಡಿಗಳನ್ನು ಪ್ರಾರಂಭಿಸಬಹುದು ಎಂದು ವರದಿಯಲ್ಲಿ ತಿಳಿಸಿದೆ. ಎಳೆ ವಯಸ್ಸಿನ ತೀವ್ರ ಅಪೌಷ್ಠಿಕತೆ ಮತ್ತು ಸಾಧಾ ರಣ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ಈಗ ವಾರಕ್ಕೆ ಎರಡು ಮೊಟ್ಟೆಗಳನ್ನು ನೀಡುತ್ತಿದ್ದು, ಇದನ್ನು ಐದು ಮೊಟ್ಟೆಗಳಿಗೆ ಹೆಚ್ಚಿಸಬಹುದು ಎಂದು ಸಲಹೆ ನೀಡಲಾಗಿದೆ.

ಎರಡು ತಿಂಗಳಲ್ಲಿ 400 ಇಂಜಿನಿಯರ್ ನೇಮಕ

- ವರ್ಷದಲ್ಲಿ ಭದ್ರಾ ಮೇಲ್ದಂಡೆ ಯೋಜನೆ ಪೂರ್ಣ
- ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಪ್ರಕಟ
- ಒಂದೆರಡು ದಿನದಲ್ಲಿ ನೇಮಕ ಸಂಬಂಧ ಅಧಿಸೂಚನೆ




ಬೆಂಗಳೂರು, ಫೆ. 3 (ಕೆಎಂಶಿ)– ರಾಜ್ಯದ ನೀರಾವರಿ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು 400 ಇಂಜಿನಿಯರ್ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಲಾಗುವುದು. ಮಧ್ಯ ಕರ್ನಾಟಕಕ್ಕೆ ನೀರುಣಿಸುವ ಮಹತ್ವದ ಭದ್ರಾ ಮೇಲ್ದಂಡೆ ಯೋಜನೆಯನ್ನು ಒಂದು ವರ್ಷದಲ್ಲಿ ಪೂರ್ಣಗೊಳಿಸುವುದಾಗಿ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೆರಿಟ್ ಮತ್ತು ಮೀಸಲಾತಿಯ ಆಧಾರದ ಮೇಲೆ ನೇಮಕಾತಿ ಮಾಡಲು ತೀರ್ಮಾನಿಸಿದ್ದು, ಒಂದೆರಡು ದಿನದಲ್ಲೇ ಆದೇಶ ಹೊರ ಬೀಳಲಿದೆ. ನೀರಾವರಿ ಯೋಜನೆಗಳು ಪ್ರಗತಿಪಥದಲ್ಲಿದ್ದರೂ ಅವನ್ನು ತ್ವರಿತವಾಗಿ ಪೂರ್ಣಗೊಳಿಸಲು ಖಾಲಿ ಇರುವ ಇಂಜಿನಿಯರುಗಳ ಭರ್ತಿ ಅವಶ್ಯವಿದೆ. ಇಲಾಖೆಯಲ್ಲಿ ಒಂದು ಸಾವಿರ ಇಂಜಿನಿಯರ್ ಹುದ್ದೆಗಳು ಖಾಲಿ ಇದ್ದು, ಅವನ್ನು ಭರ್ತಿ ಮಾಡಲು ಹಣಕಾಸು ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ನಮ್ಮ ಪ್ರಸ್ತಾವನೆಯನ್ನು ಪರಿಶೀಲಿಸಿದ ಹಣಕಾಸು ಇಲಾಖೆ ನಾಲ್ಕು ನೂರು ಮಂದಿ ಇಂಜಿನಿಯರ್ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಿಕೊಳ್ಳಲು ಒಪ್ಪಿಗೆ ನೀಡಿದೆ. ಒಂದೆರಡು ದಿನಗಳಲ್ಲಿ ನೇಮಕಾತಿ ಸಂಬಂಧ ಅಧಿಸೂಚನೆ ಪ್ರಕಟವಾಗಲಿದೆ ಎಂದರು. ಭರ್ತಿಯಾಗಲಿರುವ ಹುದ್ದೆಗಳ ಪೈಕಿ ಮುನ್ನೂರು ಮಂದಿ ಜೂನಿಯರ್ ಇಂಜಿನಿಯರುಗಳು, ನೂರು ಮಂದಿ ಸಹಾಯಕ ಇಂಜಿನಿಯರುಗಳಿರುತ್ತಾರೆ. ಇನ್ನೆರಡು ತಿಂಗಳಲ್ಲಿ ಈ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳಲಿದ್ದು ನೇಮಕಗೊಂಡ ಇಂಜಿನಿಯರುಗಳಿಗೆ ಮೈಸೂರಿನ ಕೆ.ಇ.ಆರ್.ಎಸ್ ಹಾಗೂ ಧಾರವಾಡದ ಸಂಸ್ಥೆಯಲ್ಲಿ ತರಬೇತಿ ನೀಡಲಾಗುವುದು ಎಂದರು. ನಾವು ಅಧಿಕಾರಕ್ಕೆ ಬಂದ ನಂತರ ಕೃಷ್ಣಾ ಮೇಲ್ದಂಡೆ ▶ 6ನೇ ಪುಟಕ್ಕೆ

'ಸುಪ್ರೀಂ' ನಿರ್ದೇಶನದ ನಂತರವೇ ಮೇಕೆದಾಟು ಜಾರಿ



ಬೆಂಗಳೂರು, ಫೆ.3– ಹಿಂದಿನ ಸರ್ಕಾರದ ತಪ್ಪಿನಿಂದ ಮೇಕೆದಾಟು ಯೋಜನೆ ಪ್ರಾರಂಭದಲ್ಲೇ ಅಂತರರಾಜ್ಯ ವಿವಾದದಲ್ಲಿ ಸಿಲುಕಿದೆ. ಸುಪ್ರೀಂ ಕೋರ್ಟ್ ಮುಂದೆ ಮಾರ್ಚ್‌ನಲ್ಲಿ ವಿಚಾರಣೆಗೆ ಬರಲಿದ್ದು, ಕೋರ್ಟ್ ನಿರ್ದೇಶನದಂತೆ ಯೋಜನೆ ಅನುಷ್ಠಾನಕ್ಕೆ ಕ್ರಮ ವಹಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ಯೋಜನೆಗೆ ಬಜೆಟ್‌ನಲ್ಲಿ ▶ 9ನೇ ಪುಟಕ್ಕೆ

ಕೃಷ್ಣ ರಾಜಕೀಯ ನಡೆ ಅನುಸರಿಸಿದ ಡಿಕೆಶಿ

- ಮುಳಬಾಗಿಲಿನ ಕೂಡುಮಲೆ ಗಣಪತಿ ದೇವಸ್ಥಾನದಿಂದ ಬಸ್ ಯಾತ್ರೆ
- ಹಿಂದೆ ಕೃಷ್ಣರೂ ಇಲ್ಲಿಂದಲೇ ಪಾಂಚಜನ್ಯ ಯಾತ್ರೆ ಮಾಡಿ ಮುಖ್ಯಮಂತ್ರಿ ಆಗಿದ್ದರು



ಬೆಂಗಳೂರು, ಫೆ. 3 (ಕೆಎಂಶಿ)–ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಮ್ಮ ನಾಯಕ ಎಸ್.ಎಂ. ಕೃಷ್ಣ ಅವರ ಮಾರ್ಗದಲ್ಲೇ ಅಧಿಕಾರದ ಚುಕ್ಕಾಣಿ ಹಿಡಿಯಲು ಹೊರಟಿದ್ದಾರೆ. ಕೃಷ್ಣ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಕೋಲಾರ ಜಿಲ್ಲೆಯ ಮುಳಬಾಗಿಲಿನ ಕೂಡುಮಲೆ ಗಣಪತಿ ದೇವಾಲಯಕ್ಕೆ ಭೇಟಿ ನೀಡಿ ಪ್ರಾರ್ಥನೆ ಮಾಡಿ ರಾಜ್ಯದ ಸಂಕಷ್ಟಗಳಿಗೆ ಪರಿಹಾರ ನೀಡುವಂತೆ ಪ್ರಾರ್ಥನೆ ಮಾಡಿ ಪಾಂಚಜನ್ಯ ಯಾತ್ರೆ ಆರಂಭಿಸಿದ್ದರು. ನಂತರ ಅವರು ರಾಜ್ಯದ ಮುಖ್ಯಮಂತ್ರಿಯಾದರು.

ಮುಖ್ಯಮಂತ್ರಿ ಕನಸು ಕಾಣುತ್ತಿರುವ ಡಿ.ಕೆ. ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿ ಕೃಷ್ಣ ಅವರ ಹಾದಿಯಲ್ಲೇ ಸಾಗಿದ್ದು, ಇಂದು ಅದೇ ಗಣಪತಿ ದೇವಾಲಯಕ್ಕೆ ಭೇಟಿ ನೀಡಿ, ಬಸ್ ಯಾತ್ರೆಗೆ ಚಾಲನೆ ನೀಡಿದರು. ರಾಜ್ಯದ ಮೂಡಣಬಾಗಿಲು ಎಂದೇ ಕರೆಯಲ್ಪಡುವ ಮುಳಬಾಗಿಲು ಬಹಳ ವಿಶೇಷವಾದ ಸ್ಥಳ. ನಮ್ಮ ಸಂಸ್ಕೃತಿಯಲ್ಲಿ ದೇವ ಮೂಲೆಗೆ ವಿಶೇಷ ಸ್ಥಾನಮಾನವಿದೆ. ನಾವು ಬೇರೆ ಧರ್ಮ ಸಂಸ್ಕೃತಿಯನ್ನು ಗೌರವಿಸಿ, ಸಂವಿಧಾನದ ಆಶಯದಂತೆ ನಡೆಯುತ್ತಿದ್ದೇವೆ ಎಂದು ಶಿವಕುಮಾರ್ ಇದೇ ಸಂದರ್ಭದಲ್ಲಿ ತಿಳಿಸಿದರು.

ಯಾತ್ರೆ ಆರಂಭಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಕೂಡ ರಾಜ್ಯದ ಪ್ರಜೆಗಳ ಧ್ವನಿಯಾಗಿರುವ ಪ್ರಜಾಧ್ವನಿ ಯಾತ್ರೆಯನ್ನು ಈ ಪವಿತ್ರವಾದ ಸ್ಥಳದಲ್ಲಿ ಆರಂಭಿಸುತ್ತಿದ್ದೇನೆ.

ಮತ್ತೊಂದೆಡೆ ಸಿದ್ದರಾಮಯ್ಯ ಅವರು ಬಸವಣ್ಣನವರ ಭೂಮಿ ಬಸವಕಲ್ಯಾಣದಲ್ಲಿ ಯಾತ್ರೆ ಆರಂಭಿಸುತ್ತಿದ್ದಾರೆ. ಪಕ್ಷದಲ್ಲಿ ಯಾವುದೇ ಗುಂಪುಗಾರಿಕೆ ಇಲ್ಲ. ನಮ್ಮಲ್ಲಿ ಯಾವುದೇ ಅಸಮಾಧಾನ ಇಲ್ಲ. ಎಲ್ಲಾ ನಾಯಕರು ಈ ಯಾತ್ರೆಯಲ್ಲಿ ಭಾಗವಹಿಸುತ್ತಿದ್ದಾರೆ. ನಮ್ಮಲ್ಲಿ ವ್ಯಕ್ತಿಗಿಂತ ಪಕ್ಷ ಮುಖ್ಯ. ನಮ್ಮಲ್ಲಿ ಇರುವುದು ಒಂದೇ ಗುಂಪು ಅದು ಕಾಂಗ್ರೆಸ್ ಗುಂಪು ಎಂದು ತಿಳಿಸಿದರು.

ಡಿಕೆಶಿ ಭೇಟಿ ಮಾಡಿದ ನಟ ಸುದೀಪ್

- ಕಾಂಗ್ರೆಸ್ ಸೇರುವ ವದಂತಿ
- ಭೇಟಿ ಗುಟ್ಟು ಬಿಟ್ಟುಕೊಡದ ದಿಗ್ಗಜರು



ಬೆಂಗಳೂರು, ಫೆ.3(ಕೆಎಂಶಿ)–ಚಿತ್ರನಟ ಸುದೀಪ್, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿರುವುದು ಭಾರೀ ಕುತೂಹಲ ಕೆರಳಿಸಿದೆ.

ಸುದೀಪ್ ಕಾಂಗ್ರೆಸ್ ಪಕ್ಷ ಸೇರ್ಪಡೆ ಆಗುತ್ತಾರೆ ಎನ್ನುವ ವದಂತಿ ಬೆನ್ನಲ್ಲೆ ಈ ಭೇಟಿ ಮಹತ್ವ ಪಡೆದುಕೊಂಡಿದೆ. ಕಾಂಗ್ರೆಸ್, ಬಿಜೆಪಿ ಸೇರಿದಂತೆ ಎಲ್ಲಾ ಪಕ್ಷಗಳ ನಾಯಕರ ಜೊತೆ ಉತ್ತಮ ಬಾಂಧವ್ಯ ಮತ್ತು ಒಡನಾಟ ಹೊಂದಿರುವ ಸುದೀಪ್ ಇಂದು ಶಿವಕುಮಾರ್ ಅವರನ್ನು ಭೇಟಿ ಮಾಡಿ ಮುಖಾಮುಖಿ ಚರ್ಚೆ ನಡೆಸಿದರು. ಪ್ರತಿಬಾರಿ ವಿಧಾನಸಭೆ ಚುನಾವಣೆ ಎದುರಾದಾಗಲೆಲ್ಲ ▶ 9ನೇ ಪುಟಕ್ಕೆ

ಮೈಸೂರು ವಿಭಾಗದ ವಿವಿಧ ರೈಲ್ವೆ ಅಭಿವೃದ್ಧಿ ಕಾಮಗಾರಿಗೆ 1200 ಕೋಟಿ ಅನುದಾನ ಹಂಚಿಕೆ

- ಮೈಸೂರು ವಿಭಾಗದ ಹೆಚ್ಚುವರಿ ವಿಭಾಗೀಯ ವ್ಯವಸ್ಥಾಪಕಿ ಇ.ವಿಜಯಾ ವಿವರಣೆ
- ನೈರುತ್ಯ ರೈಲ್ವೆಗೆ ದಾಖಲೆ ಪ್ರಮಾಣದ 9200 ಕೋಟಿ ಅನುದಾನ
- ಐದು ಹೊಸ ಮಾರ್ಗ ನಿರ್ಮಾಣಕ್ಕೆ ಅನುದಾನ ಹಂಚಿಕೆ
- ಮೈಸೂರು ರೈಲ್ವೆ ನಿಲ್ದಾಣ ಮಾದರಿ ಹಾಸನ, ಚಾ.ನಗರ, ಸಕಲೇಶಪುರ, ಸುಬ್ರಹ್ಮಣ್ಯ ನಿಲ್ದಾಣ ಸೇರಿದಂತೆ 15 ರೈಲು ನಿಲ್ದಾಣ ಅಭಿವೃದ್ಧಿ
- ಭವಿಷ್ಯದಲ್ಲಿ ಕೊಳ್ಳೆಗಾಲ ಸೇರಿ 3ನೇ ಹಂತದ ನಗರಗಳಿಗೂ ರೈಲ್ವೆ ಸಂಪರ್ಕ

ಮೈಸೂರು, ಫೆ.3(ಎಂಕೆ)– 2023–24ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ನೈರುತ್ಯ ರೈಲ್ವೆಗೆ ಬರೋಬ್ಬರಿ 9,200 ಕೋಟಿ ರೂ. ದೊರೆತಿದೆ. ಕಳೆದ ಸಾಲಿಗಿಂತ ಶೇ.33ರಷ್ಟು ಹೆಚ್ಚಳವಾಗಿದ್ದು, ಮೈಸೂರು ವಿಭಾಗದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ 1,200 ಕೋಟಿ ರೂ. ಹಂಚಿಕೆಯಾಗಿದೆ ಎಂದು ನೈರುತ್ಯ ರೈಲ್ವೆ ಮೈಸೂರು ವಿಭಾಗದ ಹೆಚ್ಚುವರಿ ವಿಭಾಗೀಯ ವ್ಯವಸ್ಥಾಪಕಿ ಇ.ವಿಜಯಾ ತಿಳಿಸಿದರು.

ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕರ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ವಿಭಾಗದ ವ್ಯಾಪ್ತಿಯ ನಿಗಧಿತ ಜೋಡಿ ಮಾರ್ಗಗಳ(ಡಬಲ್ ಟ್ರ್ಯಾಕ್) ನಿರ್ಮಾಣ ಕಾರ್ಯ ಸಂಪೂರ್ಣಗೊಂಡಿರುವುದರಿಂದ ಬಹುತೇಕ ಹಣವು ಹೊಸ ಮಾರ್ಗಗಳ ನಿರ್ಮಾಣಕ್ಕೆ ಹಂಚಿಕೆಯಾಗಲಿದೆ ಎಂದು ಮಾಹಿತಿ ನೀಡಿದರು.

5 ಹೊಸ ಮಾರ್ಗ: ತುಮಕೂರು–ಚಿತ್ರದುರ್ಗ–ದಾವಣಗೆರೆ ನಡುವಿನ ಹೊಸ ಮಾರ್ಗಕ್ಕೆ 420 ಕೋಟಿ ರೂ., ತುಮಕೂರು–ರಾಯನದುರ್ಗ ನಡುವಿನ ಮಾರ್ಗಕ್ಕೆ 350 ಕೋಟಿ ರೂ., ಶಿವಮೊಗ್ಗ–ಶಿಕಾರಿಪುರ–ರಾಣಿಬೆನ್ನೂರು ನಡುವಿನ ಹೊಸ ಮಾರ್ಗಕ್ಕೆ 150 ಕೋಟಿ ರೂ., ಕಡೂರು–ಚಿಕ್ಕಮಗಳೂರು–ಸಕಲೇಶಪುರ ಮಾರ್ಗಕ್ಕೆ 145 ಕೋಟಿ ರೂ. ಹಾಗೂ ಹಾಸನ–ಬೇಲೂರು ನಡುವಿನ ಹೊಸ ಮಾರ್ಗಕ್ಕೆ 60 ಕೋಟಿ ರೂ. ಹಂಚಿಕೆ ಮಾಡಲಾಗುವುದು. ಹಾಗೆಯೇ ಹಾವೇರಿ–ದೇವರಗುಡ್ಡ ನಡುವೆ ಜೋಡಿ ಮಾರ್ಗ ಮಾಡಲಾಗಿದ್ದು, ಇದೀಗ ಹುಬ್ಬಳ್ಳಿ–ಚಿಕ್ಕಜಾಜೂರು ನಡುವಿನ ಹೊಸ ಜೋಡಿ ಮಾರ್ಗಕ್ಕೆ 150 ಕೋಟಿ ರೂ. ಮೀಸಲಿಡಲಾಗಿದೆ. 2 ವರ್ಷದಲ್ಲಿ ಸಮೀಕ್ಷೆ ಮುಗಿಯಲಿದ್ದು, ಡಿಪಿಆರ್ ಸಿದ್ಧಪಡಿಸಿ ಹೊಸ ಮಾರ್ಗಗಳಿಗೆ ಅನುದಾನ ▶ 9ನೇ ಪುಟಕ್ಕೆ



ಡಿಸೆಂಬರ್ ಅಂತ್ಯಕ್ಕೆ ದೇಶದ ಮೊದಲ ಹೈಡ್ರೋಜನ್ ರೈಲು ಸಂಚಾರ...

2023ರ ಡಿಸೆಂಬರ್ ಅಂತ್ಯದ ವೇಳೆಗೆ ಭಾರತವು ತನ್ನ ಮೊದಲ ಹೈಡ್ರೋಜನ್ ರೈಲನ್ನು ಸ್ಥಳೀಯವಾಗಿ ತಯಾರಿಸಲಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದರು.

ಮೊದಲ ಹೈಡ್ರೋಜನ್ ರೈಲು ಕಲ್ಕಾ–ಶಿಮ್ಲಾ ಮಾರ್ಗದಲ್ಲಿ ಸಂಚರಿಸಲಿದೆ. ಹೈಡ್ರೋ ಜನ್–ಚಾಲಿತ ರೈಲು ತಂತ್ರಜ್ಞಾನವು ಇನ್ನೂ ಶೈಶಾವಸ್ಥೆಯಲ್ಲಿದೆ. ಕೆಲವೇ ದೇಶಗಳು ಇದನ್ನು ಸೀಮಿತ ಆಧಾರದಲ್ಲಿ ಬಳಸುತ್ತಿವೆ. ಭಾರತದ ಆರಂಭಿಕ ಅಳವಡಿಕೆಯು ಹಸಿರು ಉಪಕ್ರಮಗಳ ಕಡೆಗೆ ಮಹತ್ವದ ಹೆಜ್ಜೆ ಎಂದು ಪರಿಗಣಿಸಲಾಗಿದೆ. ಮುಂಬರುವ ಹೈಡ್ರೋ ಜನ್ ಚಾಲಿತ ರೈಲುಗಳನ್ನು ವಂದೇ ಮೆಟ್ರೋ ಎಂದು ಕರೆಯಲಾಗುತ್ತದೆ. ಇದು ಆರಂಭ ದಲ್ಲಿ ಡಾರ್ಜಿಲಿಂಗ್ ಹಿಮಾಲಯನ್ ರೈಲ್ವೇ, ನೀಲಗಿರಿ ಮೌಂಟೇನ್ ರೈಲ್ವೇ, ಕಲ್ಕಾ ಶಿಮ್ಲಾ ರೈಲ್ವೇ, ಮಾಥೆರಾನ್ ಹಿಲ್ ರೈಲ್ವೇ, ಕಂಗ್ರಾ ಕಣಿವೆ, ಬಿಲ್ಮೋರಾ ವಾಘೈ ಮತ್ತು ಮಾರ್ವಾರ್–ದೇವಗಢ್ ಮದ್ರಿಯ ಸೇರಿದಂತೆ ಐತಿಹಾಸಿಕ ನ್ಯಾರೋ ಗೇಜ್ ಮಾರ್ಗಗಳಲ್ಲಿ ಚಲಿಸುತ್ತದೆ ಎಂದರು.

ರೈಲ್ವೆ ಬಜೆಟ್‌ನಲ್ಲಿ ರಾಜ್ಯಕ್ಕೆ ದಕ್ಕಿದ್ದು 7561 ಕೋಟಿ ಭಾರೀ ಅನುದಾನ

ನವದೆಹಲಿ, ಫೆ.3– ಕೇಂದ್ರ ಬಜೆಟ್‌ನಲ್ಲಿ ರೈಲ್ವೆಗೆ ನೀಡಿದ 2.40 ಲಕ್ಷ ಕೋಟಿ ರೂ. ನಲ್ಲಿ ಕರ್ನಾಟಕ ರಾಜ್ಯಕ್ಕೆ 7,561 ಕೋಟಿ ರೂ. ನೀಡಲಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದರು.

ವಿಡಿಯೋ ಕಾನ್ಫರೆನ್ಸ್ ಮೂಲಕ ಸುದ್ದಿಗೋಷ್ಠಿ ನಡೆಸಿದ ಸಚಿವರು, ರೈಲ್ವೆಗೆ ಇಷ್ಟು ಪ್ರಮಾಣದ ಅನುದಾನ ಇದುವರೆಗೂ ಸಿಕ್ಕಿರಲಿಲ್ಲ. 2009 ರಿಂದ 2014ವರೆಗೂ ಕರ್ನಾಟಕಕ್ಕೆ ಪ್ರತಿ ವರ್ಷ 850 ಕೋಟಿ ರೂ. ನೀಡಲಾಗುತ್ತಿತ್ತು. ಆದರೆ ಕೇಂದ್ರ ಬಿಜೆಪಿ ಸರ್ಕಾರ ಒಂಭತ್ತು ಪಟ್ಟು ಅಧಿಕ ಹಣ ಹಂಚಿಕೆ ಮಾಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಎಲ್ಲಾ ಇಲಾಖೆಯಲ್ಲೂ ಬದಲಾವಣೆ ಬಯಸಿದ್ದು, ಸಾರಿಗೆಯಲ್ಲೂ ಸಾಕಷ್ಟು ಬದಲಾವಣೆ ನಿರೀಕ್ಷೆ ಮಾಡಿದ್ದಾರೆ ಎಂದು ಹೇಳಿದ್ದಾರೆ.

ಬೆಂಗಳೂರಿನ ಸರ್.ಎಂ.ವಿಶ್ವೇಶ್ವರಯ್ಯ ರೈಲ್ವೆ ನಿಲ್ದಾಣದ ಬ್ಲೂಪ್ರಿಂಟ್ ದೇಶಕ್ಕೆ ಮಾದರಿಯಾಗಿದೆ. ಬೇರೆ ಕಡೆಗೂ ಅದೇ ಮಾದರಿಯನ್ನು ಬಳಸಿಕೊಳ್ಳಲಾಗುವುದು. ಭೂಸ್ವಾಧೀನ ಸೇರಿ ಎಲ್ಲ ಹಂತಗಳಲ್ಲೂ ರಾಜ್ಯ ಸರ್ಕಾರ ನೆರವು ನೀಡುತ್ತಿದೆ. ರೈಲ್ವೆ ಗಳಲ್ಲಿ ಸ್ಥಳೀಯ ಆಹಾರವನ್ನು ನೀಡಲು ನಿರ್ಧಾರ ಮಾಡಿದೆ. ಮುಂದಿನ ಒಂದೂ ವರೆ ವರ್ಷದಲ್ಲಿ ಸ್ಥಳೀಯ ಆಹಾರಕ್ಕೆ ಆದ್ಯತೆ ನೀಡಲಾಗುವುದು ಎಂದರು. ▶ 9ನೇ ಪುಟಕ್ಕೆ



ಮೈಸೂರು ಪಾಲಿಕೆ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನೆನೆಗುದಿಗೆ

ತಕ್ಷಣ ಚುನಾವಣೆಗೆ ಆಗ್ರಹಿಸಿ ಕಾಂಗ್ರೆಸ್ ಪ್ರತಿಭಟನೆ

- ಮೇಯರ್ ಸರ್ವಾಧಿಕಾರಿ ಧೋರಣೆಯಲ್ಲಿ ಮನಬಂದಂತೆ ಆಡಳಿತ ನಿರ್ವಹಣೆ
- ನಿಯಮಾವಳಿಗಳ ಧಿಕ್ಕರಿಸಿದ ಮೇಯರ್ ವಿರುದ್ಧ ಪ್ರಾದೇಶಿಕ ಆಯುಕ್ತರಿಗೆ ಮನವಿ: ಅಂತಿಮವಾಗಿ ಕೋರ್ಟ್‌ಗೆ ಹೋಗುವ ಎಚ್ಚರಿಕೆ

ಮೈಸೂರು, ಫೆ.3(ಎಸ್‌ಬಿಡಿ)– ಮೈಸೂರು ನಗರ ಪಾಲಿಕೆ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಆಯ್ಕೆ ಚುನಾವಣೆಯನ್ನು ದಿಢೀರ್ ಮುಂದೂಡಿದ್ದನ್ನು ಖಂಡಿಸಿ ಕಾಂಗ್ರೆಸ್ ನಗರ ಘಟಕದ ನೇತೃತ್ವದಲ್ಲಿ ನಗರ ಪಾಲಿಕೆ ಮುಂಭಾಗ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೇಯರ್ ಹಾಗೂ ಬಿಜೆಪಿ ವಿರುದ್ಧ ಘೋಷಣಾ ಫಲಕಗಳನ್ನು ಹಿಡಿದು ಪ್ರತಿಭಟಿಸಿದ ಪಾಲಿಕೆಯ ಕಾಂಗ್ರೆಸ್ ಸದಸ್ಯರು ಹಾಗೂ ಮುಖಂಡರು, ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಚುನಾವಣೆ ನಡೆಸದೆ ಬಿಜೆಪಿ ಮೇಯರ್ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದ್ದಾರೆ. ನಿಯಮಗಳನ್ನು ಗಾಳಿಗೆ ತೂರಿ ಮನಬಂದಂತೆ ಅಧಿಕಾರ ನಡೆಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದೇ ವೇಳೆ ಬಿಜೆಪಿ ವಿರುದ್ಧವೂ ಹರಿಹಾಯ್ದರಲ್ಲದೆ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಆಯ್ಕೆ ಚುನಾವಣೆ ಸಂಬಂಧ ಪ್ರಾದೇಶಿಕ ಆಯುಕ್ತರಿಗೆ ಮನವಿ ಸಲ್ಲಿಸಿ, ಅವರೂ ಕ್ರಮ ವಹಿಸದಿದ್ದರೆ ನ್ಯಾಯಾಲಯದ ಮೊರೆ ಹೋಗುವುದಾಗಿ ಎಚ್ಚರಿಕೆ ನೀಡಿದರು. ಈ ವೇಳೆ ಮಾಜಿ ಮೇಯರ್ ಅಯೂಬ್ ಖಾನ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಸ್ಥಾಯಿ ಸಮಿತಿಗಳ ಅಧ್ಯಕ್ಷರ ಆಯ್ಕೆ ಚುನಾವಣೆಯನ್ನು ಏಕಾಏಕಿ ಮುಂದೂಡಿದ್ದನ್ನು ▶ 9ನೇ ಪುಟಕ್ಕೆ



ಕೌನ್ಸಿಲ್ ಸಭೆ ಮುಂದೂಡಿಕೆ

ಮೈಸೂರು, ಫೆ.3(ಎಸ್‌ಬಿಡಿ)–ಶುಕ್ರವಾರ ನಿಗದಿಯಾಗಿದ್ದ ಮೈಸೂರು ನಗರ ಪಾಲಿಕೆ ಕೌನ್ಸಿಲ್ ಸಭೆಯನ್ನು ಮುಂದೂಡಲಾಗಿದೆ. ಪಾಲಿಕೆಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಸಾಮಾನ್ಯ ಕೌನ್ಸಿಲ್ ಸಭೆ ನಿಗದಿಪಡಿಸಲಾಗಿತ್ತು. ಆದರೆ ಮೇಯರ್‌ಗೆ ಆರೋಗ್ಯ ಸರಿಯಿಲ್ಲದ ಕಾರಣ ಕೌನ್ಸಿಲ್ ಮುಂದೂಡಲು ನಿನ್ನೆ(ಫೆ.2)ಯೇ ಆಯುಕ್ತರಿಗೆ ಪತ್ರ ನೀಡಿದ್ದು, ಅದರಂತೆ ಕೌನ್ಸಿಲ್ ಮುಂದೂಡಲಾಗಿದೆ. ಮುಂದಿನ ದಿನಾಂಕವನ್ನು ತಿಳಿಸುವುದಾಗಿ ಪಾಲಿಕೆ ಕೌನ್ಸಿಲ್ ಕಾರ್ಯದರ್ಶಿ ತಿಳಿಸಿದ್ದಾರೆ.

ಪ್ರತಿಭಟನೆ ಬಿಸಿ ಕಾರಣವೇ?: ನಗರ ಪಾಲಿಕೆ ನಾಲ್ಕು ಸ್ಥಾಯಿ ಸಮಿತಿಗಳಿಗೆ ಸದಸ್ಯರ ಆಯ್ಕೆಯಾಗಿದ್ದು, ಅವರಲ್ಲಿ ಅಧ್ಯಕ್ಷರ ಆಯ್ಕೆ ಮಾತ್ರ ಈವರೆಗೂ ಸಾಧ್ಯವಾಗಿಲ್ಲ. ಹಳೇ ಕೌನ್ಸಿಲ್ ಸಭಾಂಗಣದಲ್ಲಿ ನಿನ್ನೆ ಸ್ಥಾಯಿ ಸಮಿತಿ ಅಧ್ಯಕ್ಷರ ಆಯ್ಕೆ ಚುನಾವಣೆ ನಡೆಯಬೇಕಿತ್ತು. ಆದರೆ ದಿಢೀರ್ ಮುಂದೂಡಿದ್ದರಿಂದ ಕಾಂಗ್ರೆಸ್ ಸದಸ್ಯರು ಆಕ್ರೋಶಿತರಾದರು. ಆಯುಕ್ತರ ಕಚೇರಿಗೆ ಬೀಗ ಜಡಿದು, ಮೇಯರ್ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ್ದರಲ್ಲದೆ ಹೋರಾಟ ಮುಂದುವರೆಸುವುದಾಗಿ ತಿಳಿಸಿದ್ದರು. ಅಂತೆಯೇ ಇಂದು ಕೌನ್ಸಿಲ್‌ನಲ್ಲಿ ಕಾಂಗ್ರೆಸ್ ಸದಸ್ಯರು ಹಾಗೂ ಪಾಲಿಕೆ ಹೊರಗಡೆ ನಗರ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿತ್ತು. ಗದ್ದಲದಲ್ಲಿ ಕೌನ್ಸಿಲ್ ಸಭೆ ನಡೆಸಲು ಸಾಧ್ಯವಿಲ್ಲ ಎಂದು ಮುಂದೂಡಲಾಗಿದೆ ಎಂದು ಹೇಳಲಾಗುತ್ತಿದೆ.

— ಸಿವಿಲ್ ಇಂಜಿನಿಯರ್‌ಗಳು ಮಾನವ ಕುಲಕ್ಕೆ ಅತ್ಯವಶ್ಯ ಮೂಲಸೌಕರ್ಯದ ಸೃಷ್ಟಿಕರ್ತರು —

ದೇಶದ ನಿರ್ಮಾಣ ಕ್ಷೇತ್ರ ಮತ್ತಷ್ಟು ಸುಸ್ಥಿರಗೊಳಿಸುವ ಮಹತ್ತರ ಜವಾಬ್ದಾರಿ ಸಿವಿಲ್ ಇಂಜಿನಿಯರ್ಸ್ ಮೇಲಿದೆ

- ಎಸಿಸಿಇ (ಐ) ರಾಷ್ಟ್ರೀಯ ಅಧ್ಯಕ್ಷ ವಿಜಯ್‌ಕುಮಾರ್ ಕಿಸಾನ್ ಸನಪ್ ಅಭಿಮತ
- ಮೈಸೂರಲ್ಲಿ 'ರೇಸ್-23' ಶೀರ್ಷಿಕೆಯ ಎರಡು ದಿನಗಳ ವಿಚಾರ ಸಂಕಿರಣಕ್ಕೆ ಚಾಲನೆ





ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್‌ನ ಸಭಾಂಗಣದಲ್ಲಿ ಶುಕ್ರವಾರ ರೇಸ್–23 ರಾಷ್ಟ್ರೀಯ ವಿಚಾರ ಸಂಕಿರಣದ ಉದ್ಘಾಟನಾ ಸಮಾರಂಭದಲ್ಲಿ ವಿಚಾರ ಸಂಕಿರಣದ ತಾಂತ್ರಿಕ ಸಂಚಿಕೆ ಬಿಡುಗಡೆ ಮಾಡಲಾಯಿತು. ಎಡದಿಂದ ರೇಸ್–23ರ ಕಾರ್ಯದರ್ಶಿ ಡಾ.ಪಿ.ನಂಜುಂಡಸ್ವಾಮಿ, ಎಸಿಸಿಇ (ಐ) ಉಪಾಧ್ಯಕ್ಷ ಸಂದೀಪ್ ಶರದ್ ಶಿರ್ಖೇಡ್ಕರ್ (ಪಶ್ಚಿಮ), ಕೆ.ರಾಜ್‌ಕುಮಾರ್ (ದಕ್ಷಿಣ), ರಾಷ್ಟ್ರೀಯ ಅಧ್ಯಕ್ಷ ವಿಜಯ್‌ಕುಮಾರ್ ಕಿಸಾನ್ ಸನಪ್, ಮೈಸೂರು ಕೇಂದ್ರದ ಅಧ್ಯಕ್ಷ ಹೆಚ್.ಎಸ್.ದೀಪಕ್, ಹೆಚ್‌ಕ್ಯೂ ಖಜಾಂಚಿ ಆರ್.ಶ್ರೀನಿವಾಸನ್, ರೇಸ್–23ರ ಅಧ್ಯಕ್ಷ ಡಾ.ಜಿ.ಪಿ.ಚಂದ್ರಧರ, ನವದೆಹಲಿಯ ಪರ್ಸನ್ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಡಾ.ಸಂಜಯ್ ರಾಣಾ, ಎಸಿಸಿಇ (ಐ) ಮೈಸೂರು ಕೇಂದ್ರದ ಕಾರ್ಯದರ್ಶಿ ಎಸ್.ಶಶಿರಾಜ್ ಚಿತ್ರದಲ್ಲಿದ್ದಾರೆ. ಬಲ ಚಿತ್ರದಲ್ಲಿ ವಿಚಾರ ಸಂಕಿರಣದಲ್ಲಿ ಭಾಗವಹಿಸಿರುವ ಪ್ರತಿನಿಧಿಗಳನ್ನು ಕಾಣಬಹುದು.

ಮೈಸೂರು,ಫೆ.3(ಪಿಎಂ)–ಸಿವಿಲ್ ಇಂಜಿನಿಯರ್‌ಗಳು ಮಾನವಕುಲಕ್ಕೆ ಅತ್ಯವಶ್ಯ ಮೂಲಸೌಕರ್ಯದ (ಕಟ್ಟಡ ನಿರ್ಮಾಣ) ಸೃಷ್ಟಿಕರ್ತರು. ದೇಶದ ನಿರ್ಮಾಣ ಕ್ಷೇತ್ರ ಮತ್ತಷ್ಟು ಸುಸ್ಥಿರಗೊಳಿಸುವ ಮಹತ್ತರ ಜವಾಬ್ದಾರಿ ಸಿವಿಲ್ ಇಂಜಿನಿಯರ್ಸ್ ಮೇಲಿದೆ ಎಂದು ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ (ಇಂಡಿಯಾ) ರಾಷ್ಟ್ರೀಯ ಅಧ್ಯಕ್ಷ ವಿಜಯ್‌ಕುಮಾರ್ ಕಿಸಾನ್ ಸನಪ್ ಅಭಿಪ್ರಾಯಪಟ್ಟರು.

ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್‌ನ ಸಭಾಂಗಣದಲ್ಲಿ ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ (ಇಂಡಿಯಾ) ಮೈಸೂರು ಕೇಂದ್ರದ (ಎಸಿಸಿಇ–ಐ) ವತಿಯಿಂದ ರೇಸ್–23 (ರಿಸೆಂಟ್ ಅಡ್ವಾನ್ಸ್ ಇನ್ ಸಿವಿಲ್ ಇಂಜಿನಿಯರಿಂಗ್) ಶೀರ್ಷಿಕೆಯಡಿ 'ಇನ್ನೋವೇಟಿವ್ ಇನ್ಫ್ರಾ ಇನ್ ಸಿವಿಲ್ ಇಂಜಿನಿಯರಿಂಗ್' ಕುರಿತು ಹಮ್ಮಿಕೊಂಡಿರುವ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಶುಕ್ರವಾರ ಉದ್ಘಾಟಿಸಿ, ಇದೇ ವೇಳೆ ವಿಚಾರ ಸಂಕಿರಣದಲ್ಲಿ ಸಂಪನ್ಮೂಲ ವ್ಯಕ್ತಿಗಳು ವಿಚಾರ ಮಂಡಿಸುವ ಕುರಿತಂತೆ ಹೊರತಂದಿರುವ ತಾಂತ್ರಿಕ ಸಂಚಿಕೆ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಮೂಲಸೌಕರ್ಯದಲ್ಲಿ (ನಿರ್ಮಾಣ) ಭಾರತ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದ್ದು, ಇದಕ್ಕಾಗಿ ಭಾರೀ ಪ್ರಮಾಣದ ವೆಚ್ಚಗಳನ್ನು ಮಾಡಲಾಗುತ್ತಿದೆ. ಆರ್ಥಿಕ ಮಿತವ್ಯಯದಲ್ಲಿ ಉತ್ತಮ ಮೂಲಸೌಕರ್ಯದ ಕಾಮಗಾರಿ ಕೈಗೊಳ್ಳಲು ಇಂಜಿನಿಯರ್‌ಗಳು ಸಮರ್ಥ ಕಾರ್ಯನಿರ್ವಹಣೆ ಅಗತ್ಯವಾಗಿದೆ. ಕಳೆದ 8 ವರ್ಷಗಳಿಂದ ಭಾರತದಲ್ಲಿ ಮೂಲಸೌಕರ್ಯ ಕ್ಷೇತ್ರವು ಪ್ರವರ್ಧಮಾನಕ್ಕೆ ಬಂದಿದೆ. ಇಂಜಿನಿಯರ್‌ಗಳ ಕಾರ್ಯನಿರ್ವಹಣೆ ಮತ್ತು ಜವಾಬ್ದಾರಿಯತ್ತ ಸಮಾಜದ ಗಮನ ಕೇಂದ್ರೀಕರಿಸಿದೆ ಎಂದರು.

ಎಸಿಸಿಇ (ಐ) ಮೈಸೂರು ಕೇಂದ್ರವು ಬೆಂಗಳೂರು, ಹೈದರಾಬಾದ್ ಮತ್ತು ನಾಗ್ಪುರದ ಕೇಂದ್ರಗಳಿಗೆ ಸಮಾನವಾಗಿ ಕಾರ್ಯನಿರ್ವಹಿಸುವ ಮೂಲಕ ಅತ್ಯಂತ ಸಕ್ರಿಯ ಕೇಂದ್ರವಾಗಿ ಮುನ್ನಡೆಯುತ್ತಿದೆ. ನಿರ್ಮಾಣ ಕ್ಷೇತ್ರದ ಇತ್ತೀಚಿನ ಪ್ರವೃತ್ತಿ ಅರಿಯಲು ಮತ್ತು ಚರ್ಚಿಸಲು ರೇಸ್ ಎಂಬ ವಿಚಾರ ಸಂಕಿರಣ ಆಯೋಜಿಸುತ್ತಾ ಬರುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಪನ್ಮೂಲ ಸಂರಕ್ಷಣೆ ಪಾತ್ರ: ಪ್ರಾಸ್ತಾವಿಕವಾಗಿ ಮಾತನಾಡಿದ ರೇಸ್–23ರ ಅಧ್ಯಕ್ಷ ಡಾ.ಜಿ.ಪಿ.ಚಂದ್ರಧರ, ಸಿವಿಲ್ ಇಂಜಿನಿಯರಿಂಗ್ ಸಮುದಾಯವು ತನ್ನ ಕ್ಷೇತ್ರದಲ್ಲಿನ ಆವಿಷ್ಕಾರ ಮತ್ತು ಪ್ರಗತಿಗಳ ಬಗ್ಗೆ ಅರಿಯಲು ಪೂರಕವಾಗಿ ಈ ವಿಚಾರ ಸಂಕಿರಣ ಆಯೋಜಿಸಲಾಗಿದೆ. ಇದು ವೃತ್ತಿ ಕ್ಷೇತ್ರದಲ್ಲಿನ ಹೊಸ ವಿಚಾರಗಳನ್ನು ಅರಿತು ಉನ್ನತ ಬದಲಾವಣೆ ತಂದುಕೊಳ್ಳಲು ಪೂರಕವಾಗಲಿದೆ ಎಂದು ಹೇಳಿದರು. ಸಿವಿಲ್ ಇಂಜಿನಿಯರ್ಸ್ ಯಾವಾಗಲೂ ಉತ್ತಮ ನಿರ್ಮಾಣ ಸಾಮಗ್ರಿಗಳನ್ನು ಬಯಸುತ್ತಾರೆ. ಯೋಜನೆಯ ಗುಣಮಟ್ಟ, ಪರಿಣಾಮ, ಬಾಳಿಕೆ ಮತ್ತು ಸುಸ್ಥಿರತೆ ಸಾಧಿಸಲು ಸಿವಿಲ್ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಆವಿಷ್ಕಾರಗಳು ಬಹುಮುಖ್ಯ. ವಿನ್ಯಾಸ ಮತ್ತು ನಿರ್ಮಾಣದಲ್ಲಿ ವ್ಯಾಪಕ ಅನುಭವ ಹೊಂದಿರುವ ತಜ್ಞರು ರೇಸ್ 23ರಲ್ಲಿ ಕಟ್ಟಡ ಮತ್ತು ರಚನೆಗಳಲ್ಲಿನ ತಾಂತ್ರಿಕ ನಾವಿನ್ಯತೆ ಮೇಲೆ ಬೆಳಕು ಚೆಲ್ಲಲಿದ್ದಾರೆ. ನೈಸರ್ಗಿಕ ಸಂಪನ್ಮೂಲಗಳನ್ನು ಭವಿಷ್ಯದ ಪೀಳಿಗೆಗೆ ಸಂರಕ್ಷಿಸಬೇಕಿದ್ದು, ಈ ನಿಟ್ಟಿನಲ್ಲಿ ಸಿವಿಲ್ ಇಂಜಿನಿಯರಿಂಗ್ ಪಾತ್ರ ಪ್ರಮುಖವಾಗಿದೆ ಎಂದು ತಿಳಿಸಿದರು.

ಬಳಿಕ ನಡೆದ ತಾಂತ್ರಿಕ ಉಪನ್ಯಾಸದಲ್ಲಿ 'ಅಪ್ಲಿಕೇಶನ್ ಆಫ್ ಜಿಯೋಫಿಸಿಕಲ್ ಟೆಕ್ನಿಕ್ಸ್ ಇನ್ ಸಿವಿಲ್ ಇಂಜಿನಿಯರಿಂಗ್ ಪ್ರಾಜೆಕ್ಟ್ಸ್' ಕುರಿತು ವಿಚಾರ ಮಂಡಿಸಿದ ನವದೆಹಲಿಯ ಪರ್ಸನ್ ಓವರ್‌ಸೀಸ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಡಾ.ಸಂಜಯ್ ರಾಣಾ, ಉನ್ನತ ಮಟ್ಟದ ಇಂಜಿನಿಯರಿಂಗ್ ಅನ್ವೇಷಣೆಗಳ ಹೊರತಾಗಿ ಪ್ರಸ್ತುತದ ಪ್ರಮುಖ ಬೃಹತ್ ನಿರ್ಮಾಣಗಳನ್ನು ಊಹಿಸಲೂ ಸಾಧ್ಯವಿಲ್ಲ. ಅನ್ವೇಷಣೆಗಳು ಆರ್ಥಿಕ ಮಿತವ್ಯಯ ಸಾಧಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿವೆ ಎಂದು ಹೇಳಿದರು.

ಐಐಟಿ ರೂರ್ಕಿಯದ ಹಳೇಯ ವಿದ್ಯಾರ್ಥಿಯೂ ಆದ ಡಾ.ಸಂಜಯ್ ಅವರು ಭಾರತ ಮತ್ತು ಹಲವು ದೇಶಗಳಲ್ಲಿ 2 ಸಾವಿರಕ್ಕೂ ಹೆಚ್ಚು ಯೋಜನೆಗಳಲ್ಲಿ ಭೂ ಭೌತಶಾಸ್ತ್ರದ ಸಂಶೋಧನೆಗಳನ್ನು ನಡೆಸಿದ್ದಾರೆ. 'ನಿರ್ಮಾಣದ ವಿನ್ಯಾಸಕ್ಕಾಗಿ ಭೂಗರ್ಭದ ಸಮಗ್ರವಾದ ಉತ್ತಮ ಗುಣಮಟ್ಟದ ಮಾಹಿತಿ ಸಂಗ್ರಹಿಸುವುದು ಅಗತ್ಯ. ಯಾವುದೇ ಪ್ರಮುಖ ನಿರ್ಮಾಣವು ಸಮಯ ಮತ್ತು ಹಣಕಾಸಿನ ದೃಷ್ಟಿಯಿಂದ ಉತ್ತಮ ನಿರ್ಮಾಣ ವಿಧಾನಗಳನ್ನು ಬಯಸುತ್ತದೆ. ಜೊತೆಗೆ ಜಿಯೋಟೆಕ್ನಿಕಲ್ ಪರಿಸ್ಥಿತಿಗಳ ಜ್ಞಾನವೂ ಮುಖ್ಯವಾಗುತ್ತದೆ' ಎಂದು ಡಾ.ಸಂಜಯ್ ತಿಳಿಸಿದರು. ಎಸಿಸಿಇ (ಐ) ಉಪಾಧ್ಯಕ್ಷರಾದ ಸಂದೀಪ್ ಶರದ್ ಶಿರ್ಖೇಡ್ಕರ್ (ಪಶ್ಚಿಮ), ಕೆ.ರಾಜ್‌ಕುಮಾರ್ (ದಕ್ಷಿಣ), ಹೆಚ್‌ಕ್ಯೂ ಖಜಾಂಚಿ ಆರ್.ಶ್ರೀನಿವಾಸನ್, ಮೈಸೂರು ಕೇಂದ್ರದ ಅಧ್ಯಕ್ಷ ಹೆಚ್.ಎಸ್.ದೀಪಕ್, ಕಾರ್ಯದರ್ಶಿ ಎಸ್.ಶಶಿರಾಜ್, ರೇಸ್–23ರ ಅಧ್ಯಕ್ಷ ಡಾ.ಜಿ.ಪಿ.ಚಂದ್ರಧರ, ಕಾರ್ಯದರ್ಶಿ ಡಾ.ಪಿ.ನಂಜುಂಡಸ್ವಾಮಿ ಮತ್ತಿತರರು ಹಾಜರಿದ್ದರು.

ನಿರ್ಮಾಣ ಕ್ಷೇತ್ರದ ಬಗ್ಗೆ ತಜ್ಞರಿಂದ ವಿಚಾರ ಮಂಡನೆ

ಎಸಿಸಿಇ (ಐ) ಮೈಸೂರು ಕೇಂದ್ರದ ವತಿಯಿಂದ ದ್ವೈವಾರ್ಷಿಕವಾಗಿ 'ರೇಸ್' ಶೀರ್ಷಿಕೆಯಡಿ ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸುತ್ತ ಬರಲಾಗಿದೆ. 2017ರಲ್ಲಿ ಆರಂಭಗೊಂಡ ರೇಸ್, ಇದೀಗ ನಾಲ್ಕನೇ ವರ್ಷದಲ್ಲಿ ನಡೆಯುತ್ತಿದ್ದು, ರಾಜ್ಯವೂ ಸೇರಿದಂತೆ ದೇಶದ ವಿವಿಧ ಭಾಗಗಳ ಸಿವಿಲ್ ಇಂಜಿನಿಯರ್ಸ್ ಹಾಗೂ ವಿದ್ಯಾರ್ಥಿಗಳು ಇದರಲ್ಲಿ ಪಾಲ್ಗೊಂಡಿದ್ದಾರೆ. ಎಸಿಸಿಇ (ಐ) ಸದಸ್ಯರು, ಖಾಸಗಿ, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು ಸೇರಿದಂತೆ 200 ಸಿವಿಲ್ ಇಂಜಿನಿಯರ್‌ಗಳು, ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ 150 ಸಿವಿಲ್ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 350 ಮಂದಿ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದಾರೆ. 9 ಮಂದಿ ತಜ್ಞರು ಇಂದು ಮತ್ತು ನಾಳೆ ನಿರ್ಮಾಣ ಕ್ಷೇತ್ರದ ಇತ್ತೀಚಿನ ಸಂಶೋಧನೆ, ಸುಧಾರಣೆ ಮತ್ತು ಪ್ರವೃತ್ತಿಗಳ ಮೇಲೆ ಬೆಳಕು ಚೆಲ್ಲಲಿದ್ದಾರೆ. ಸಭಾಂಗಣದ ಹೊರಾವರಣದಲ್ಲಿ ನಿರ್ಮಾಣ ಕ್ಷೇತ್ರಕ್ಕೆ ಸಂಬಂಧಿಸಿದ ಉತ್ಪನ್ನ ಮತ್ತು ತಂತ್ರಜ್ಞಾನ ಕುರಿತಂತೆ 10 ಮಳಿಗೆಗಳಲ್ಲಿ ವಸ್ತು ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.



ಆದಿ ಕರ್ನಾಟಕ ಮಹಾಸಂಸ್ಥೆಯ ವತಿಯಿಂದ ಮಾಜಿ ಕೇಂದ್ರ ಸಚಿವ, ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರನ್ನು ಅವರ ನಿವಾಸದಲ್ಲಿ ಸನ್ಮಾನಿಸಲಾಯಿತು. ಆದಿ ಕರ್ನಾಟಕ ಮಹಾಸಂಸ್ಥೆಯ ನೂತನ ಅಧ್ಯಕ್ಷ ಪಿ.ಸಿದ್ದರಾಜು (ಸುನಿಲ್), ಉಪಾಧ್ಯಕ್ಷ ಶಿವಸ್ವಾಮಿ, ಕಾರ್ಯದರ್ಶಿ ರಾಜ್ ಮೊಗ, ಕೃಷ್ಣಮೂರ್ತಿ ಹಾಗೂ ಮಹಾಲಿಂಗಯ್ಯ ಅವರನ್ನು ಚಿತ್ರದಲ್ಲಿ ಕಾಣಬಹುದು.

ಸಾಲ ಕೊಡುವುದಾಗಿ ಹೇಳಿ ಆನ್‌ಲೈನ್‌ನಲ್ಲಿ ಮಹಿಳೆಗೆ 8.28 ಲಕ್ಷ ವಂಚನೆ

ಮೈಸೂರು, ಫೆ. 3– ಲೋನ್ ಕೊಡುವುದಾಗಿ ಕರೆ ಮಾಡಿ ಮಹಿಳೆ ಯೋರ್ವರಿಗೆ ಆನ್‌ಲೈನ್ ಮೂಲಕ 8.28 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಗೋಕುಲಂ 3ನೇ ಹಂತದ ನಿವಾಸಿ ಮಮತಾ ಪಿ. ನವೀನ್(44) ವಂಚನೆಗೊಳಗಾದವರಾಗಿದ್ದು, ಜನವರಿ 24ರಂದು ಇವರ ಮೊಬೈಲ್‌ಗೆ ಬಜಾಜ್ ಫೈನಾನ್ಸ್‌ನಿಂದ ಮಾತನಾಡುತ್ತಿರುವುದಾಗಿ ಕರೆ ಮಾಡಿದ ವಂಚಕ ಮಮತಾ ಅವರಿಗೆ ಲೋನ್ ಮಂಜೂರು ಆಗಿರುವುದಾಗಿ ಹೇಳಿ ಅವರ ಫೋಟೋ, ಪಾನ್ ಕಾರ್ಡ್ ಮತ್ತಿತರ ದಾಖಲೆಗಳನ್ನು ವಾಟ್ಸಾಪ್ ಮಾಡಿಸಿಕೊಂಡ. ನಂತರ ವಿವಿಧ ಶುಲ್ಕಗಳೆಂದು 8,28,135 ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾನೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾಮಾನ್ಯ ಕೌನ್ಸಿಲ್ ಸಭೆ ಮುಂದೂಡಿಕೆ

ಮೈಸೂರು, ಫೆ.3– ಮೈಸೂರು ಮಹಾನಗರ ಪಾಲಿಕೆಯ ವತಿಯಿಂದ ಫೆ.3 ರಂದು ಮಧ್ಯಾಹ್ನ 3 ಗಂಟೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜನವರಿ ಮಾಹೆಯ ಸಾಮಾನ್ಯ ಕೌನ್ಸಿಲ್ ಸಭೆಯನ್ನು ಕಾರಣಾಂತರಗಳಿಂದ ಮುಂದೂಡಲಾಗಿದ್ದು, ಸದರಿ ಸಭೆಯ ದಿನಾಂಕವನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದೆಂದು ನಗರ ಪಾಲಿಕೆಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಲವಾಲ ಬಳಿ ಚಿರತೆ ಸೆರೆ



ಮೈಸೂರು, ಫೆ.3(ಎಂಟಿವೈ)– ಮೈಸೂರು ತಾಲೂಕಿನ ಇಲವಾಲ ಹೋಬಳಿ ಮೈದನಹಳ್ಳಿ ಸೇರಿದಂತೆ ಸುತ್ತ– ಮುತ್ತಲಿನ ಗ್ರಾಮಗಳಲ್ಲಿ ಕಾಣಿಸಿ ಕೊಂಡು ಆತಂಕ ಮೂಡಿಸಿದ್ದ ಚಿರತೆಯೊಂದು ಅರಣ್ಯ ಇಲಾಖೆಯ ಬೋನ್‌ಗೆ ಬಿದ್ದಿದೆ.

ಕಳೆದ ಕೆಲವು ತಿಂಗಳಿಂದ ಕಾಣಿಸಿಕೊಂಡು ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿತ್ತು. ಕುರಿ, ಮೇಕೆ ಸೇರಿದಂತೆ ಜಾನು ವಾರುಗಳ ಮೇಲೆ ದಾಳಿ ನಡೆಸುತ್ತಿದ್ದ ಚಿರತೆ ಸೆರೆಗೆ ಗ್ರಾಮಸ್ಥರು ಒತ್ತಾಯಿಸಿದ್ದರು. ಗ್ರಾಮಸ್ಥರ ಕೋರಿಕೆ ಮೇರೆಗೆ ಗ್ರಾಮದ ಜಮೀನೊಂದರಲ್ಲಿ ಬೋನ್ ಇಡಲಾಗಿತ್ತು. ಬೋನ್‌ನಲ್ಲಿದ್ದ ನಾಯಿಯ ತಿನ್ನಲು ಮುಂದಾಗಿ ಸೆರೆ ಸಿಕ್ಕಿದೆ. ಇದು ಹೆಣ್ಣು ಚಿರತೆಯಾಗಿದ್ದು, 2 ವರ್ಷದ್ದಾಗಿದೆ. ಆರೋಗ್ಯದಿಂದಿರುವ ಈ ಚಿರತೆಯನ್ನು ಅರಣ್ಯಕ್ಕೆ ಬಿಡಲಾಗಿದೆ.

ಡಿಸಿಎಫ್ ಬಸವರಾಜು ಮಾತನಾಡಿ, ಇಲವಾಲ ಹೋಬಳಿಯ ಮೈದನಹಳ್ಳಿಯಲ್ಲಿ ಹೆಣ್ಣು ಚಿರತೆಯನ್ನು ಸೆರೆ ಹಿಡಿಯಲಾಗಿದೆ. ಶುಕ್ರವಾರ ಮುಂಜಾನೆ ಸೆರೆ ಸಿಕ್ಕಿದೆ. ತಕ್ಷಣ ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಚಿರತೆಯನ್ನು ವಶಕ್ಕೆ ಪಡೆದು, ಕಾಡಿಗೆ ಬಿಟ್ಟಿದ್ದಾರೆ ಎಂದು ತಿಳಿಸಿದ್ದಾರೆ.

ನಿಧನ



ಬಿಮ್ಲಾ ಚಕ್ರವರ್ತಿ

ಮೈಸೂರು, ಫೆ.3–ಮೈಸೂರಿನ ಗೋಕುಲಂ ನಿವಾಸಿ ಬಿಮ್ಲಾ ಚಕ್ರವರ್ತಿ (61) ಫೆ1ರಂದು ಕೊಲ್ಕತ್ತಾದ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತಿ ಮಲಯ ಚಕ್ರವರ್ತಿ, ಪುತ್ರ ಮ್ರಿನ್‌ಮಾಯ್ ಚಕ್ರವರ್ತಿ, ಸೊಸೆ ಕಂಕಣ ಚಕ್ರವರ್ತಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕೊಲ್ಕತ್ತಾದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೇವಮ್ಮ




ಮೈಸೂರು, ಫೆ.3– ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಆಪ್ತ, ಎಂಎಸ್‌ಐಎಲ್ ಮಾಜಿ ನಿರ್ದೇಶಕ ಗುಣಶೇಖರ್ ಅವರ ತಾಯಿ ದೇವಮ್ಮ(85) ಶುಕ್ರವಾರ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರ ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 12 ಗಂಟೆಗೆ ಮೈಸೂರಿನ ಹೈವೇ ವೃತ್ತದ ಬಳಿಯಿರುವ ಜೋಡಿ ತೆಂಗಿನ ಮರ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಶ್ರೀಮತಿ ಕಮಲಾ ಬಾಯಿ

ಮೈಸೂರು, ಫೆ. 3–ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿರುವ ಬ್ಲಾಕ್ ಬೆರ್ರಿ ಬಟ್ಟೆ ಅಂಗಡಿ ಮಾಲೀಕ ಸುಮೆರ್‌ಮಲ್ ಜೈನ್ ಅವರ ಪತ್ನಿ ಶ್ರೀಮತಿ ಕಮಲಾ ಬಾಯಿ(71) ಅವರು ಇಂದು ನಿಧನರಾದರು. ಮೃತರು ಪತಿ, ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಚಾಮುಂಡಿಬೆಟ್ಟದ ತಪ್ಪಲಲ್ಲಿರುವ ರುದ್ರಭೂಮಿಯಲ್ಲಿ ಇಂದು ಸಂಜೆ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

4.2.2023 ಶನಿವಾರ, ಮಳೆ ನಕ್ಷತ್ರ: ಶ್ರವಣ, 24.01.2023ರಿಂದ 05.02.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ಪುನರ್ವಸು, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ತ್ರಿಣೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಸಂಜೆ 6.30ಕ್ಕೆ ಬಲಿಪ್ರಧಾನ ಉತ್ಸವ, ಗಿರಿಜಾ ಕಲ್ಯಾಣ ಮಹೋತ್ಸವ ನಂತರ ವೃಷಭ ವಾಹನೋತ್ಸವ, ಸ್ಥಳ: ಶ್ರೀ ತ್ರಿಣೇಶ್ವರಸ್ವಾಮಿ ದೇವಸ್ಥಾನ, ಮೈಸೂರು ಅರಮನೆ ಆವರಣ.

■ **ಜೆಎಸ್‌ಎಸ್ ನರ್ಸಿಂಗ್ ಕಾಲೇಜು :** ವಿಶ್ವ ಕ್ಯಾನ್ಸರ್ ದಿನಾಚರಣೆ ಪ್ರಯುಕ್ತ ಕ್ಯಾನ್ಸರ್ ತಡೆಗಟ್ಟುವ ಕುರಿತು ಜಾಗೃತಿ ಜಥಾ, ಉದ್ಘಾಟನೆ : ಮೇಯರ್ ಶಿವಕುಮಾರ್, ಮುಖ್ಯ ಅತಿಥಿಗಳು : ವೈದ್ಯಕೀಯ ಅಧೀಕ್ಷಕ ಡಾ. ಸಿ.ಪಿ. ಮಧು, ಡಾ. ರವಿಕೃಷ್ಣಪ್ಪ, ಡಾ. ಕಿರಣ, ಲೋಕೇಶ್, ಪ್ರೊ. ಅಶ್ವತಿದೇವಿ, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಆವರಣದಿಂದ, ಬೆಳಗ್ಗೆ 9ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ :** ರಾಷ್ಟ್ರೀಯ ಏಕೀಕರಣ ಶಿಬಿರ, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ, ಬೆಳಗ್ಗೆ 8.30ಕ್ಕೆ ಶ್ರಮಧಾನ, ಬೆಳಗ್ಗೆ 11.30ಕ್ಕೆ ಡಾ. ಕೃತಿಕಾ ಮತ್ತು ಮಹಾಮಿತ್ರ ಅವರಿಂದ ರಕ್ತ ಕ್ಯಾನ್ಸರ್ ಬಗ್ಗೆ ಅರಿವು ಮತ್ತು ಜೀವ ರಕ್ಷಕರ ಅವಶ್ಯಕತೆ ಕುರಿತು ಉಪನ್ಯಾಸ, ಸಂಜೆ 4 ರಿಂದ ಪ್ರೊ. ನಟರಾಜ್ ಹುಳಿಯಾರ್ ಅವರಿಂದ ಜಾತ್ಯಾತೀತತೆ ಕುರಿತು ಉಪನ್ಯಾಸ, ಸಂಜೆ 5.30ಕ್ಕೆ ಕ್ರೀಡೆ, 6.30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಎನ್‌ಎಸ್‌ಎಸ್ ಭವನ, ಸಾಹುಕಾರ್ ಚನ್ನಯ್ಯ ರಸ್ತೆ, ಸರಸ್ವತಿಪುರಂ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಜೆಎಸ್‌ಎಸ್ ಮಹಿಳಾ ಪ್ರಥಮ ದರ್ಜೆ ಕಾಲೇಜು :** ಅನುಭವ ಮಂಟಪದ ಅನುಭಾವ ಗೋಷ್ಠಿ, ದತ್ತಿ ಕಾರ್ಯಕ್ರಮ, ಉದ್ಘಾಟನೆ : ನಿವೃತ್ತ ಮುಖ್ಯ ಅಭಿಯಂತರ ಶಂಕರ್ ದೇವನೂರು, ಸಂವಾದದ ವಿದ್ವಾಂಸರು : ಹಿರಿಯ ಸಾಹಿತಿ ಪ್ರೊ. ಓ.ಎಲ್. ನಾಗಭೂಷಣಸ್ವಾಮಿ, ಸಾಹಿತಿ ಡಾ. ಕವಿತಾ ರೈ, ಸಾಹಿತಿ ಡಾ. ಜ್ಯೋತಿ ಶಂಕರ್, ಉಪನ್ಯಾಸಕ ದಿಲೀಪ್ ಕುಮಾರ್, ಅಧ್ಯಕ್ಷತೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರೊ. ಮಲೆಯೂರು ಗುರುಸ್ವಾಮಿ, ಸ್ಥಳ:ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗ :** ವಿಶ್ವ ಕ್ಯಾನ್ಸರ್ ದಿನಾಚರಣೆ ಅಂಗವಾಗಿ ಕ್ಯಾನ್ಸರ್ ಮತ್ತು ಅದರ ನಿರ್ವಹಣೆ ಕುರಿತು ಉಚಿತ ಕಾರ್ಯಾಗಾರ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ. ಹೆಚ್. ರಾಜಶೇಖರ್, ಮುಖ್ಯ ಅತಿಥಿಗಳು : ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ನಾಗಮಲ್ಲೇಶ್, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ

■ **ಕರ್ನಾಟಕ ಇನ್ಸ್‌ಟಿಟ್ಯೂಟ್ ಫಾರ್ ಲಾ ಅಂಡ್ ಪಾರ್ಲಿಮೆಂಟರಿ ರಿಫಾರ್ಮ್, ವಿದ್ಯಾವಿಕಾಸ ಎಜುಕೇಷನಲ್ ಟ್ರಸ್ಟ್ :** ಅಂತರ ರಾಜ್ಯ ಗಡಿ ಮತ್ತು ಜಲ ವಿವಾದವನ್ನು ನಿಯಂತ್ರಿಸುವ ಕಾನೂನು ಕುರಿತು ಉಪನ್ಯಾಸ, ಉದ್ಘಾಟನೆ : ಮಾಜಿ ಮುಖ್ಯಮಂತ್ರಿ ಡಾ. ಎಂ. ವೀರಪ್ಪ ಮೊಯ್ಲಿ, ಮುಖ್ಯ ಅತಿಥಿಗಳು : ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ಅಧ್ಯಕ್ಷತೆ : ಕೆಐಎಲ್‌ಪಿಎಆರ್ ನಿರ್ದೇಶಕ ಕೆ. ದ್ವಾರಕನಾಥ್ ಬಾಬು, ಗೌರವ ಅತಿಥಿಗಳು : ವಿವಿಇಟಿ ಅಧ್ಯಕ್ಷ ವಾಸು, ಕಾರ್ಯದರ್ಶಿ ಕವೀಶ್‌ಗೌಡ, ಪ್ರೊ. ಪಿ. ಈಶ್ವರ ಭಟ್, ಸ್ಥಳ: ಲಲಿತಾ ಸ್ಮಾರಕ ಭವನ, ವಿವಿಇಟಿ, ಬೆಳಗ್ಗೆ 10ಕ್ಕೆ.

■ **ಓಶೋಕೈ ಎಜುಕೇಷನಲ್ ಮತ್ತು ಚಾರಿಟಬಲ್ ಟ್ರಸ್ಟ್, ಭಾರತ್ ಕ್ಯಾನ್ಸರ್ ಆಸ್ಪತ್ರೆ, ಯೂತ್ ಫಾರ್ ಸೇವಾ :** ಓಶೋಕೈ ವಾರ್ಷಿಕೋತ್ಸವ ಮತ್ತು ಕ್ಯಾನ್ಸರ್ ಅರಿವು ಕಾರ್ಯಕ್ರಮ, ಅಧ್ಯಕ್ಷತೆ : ಓಶೋಕೈ ಸ್ಥಾಪಕ ಡಾ. ಡಿ. ಮುನಿರುದ್ದೀನ್ ಷರೀಫ್, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಸಂಗೀತ ವಿವಿ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ವಿಶೇಷ ಅತಿಥಿಗಳು : ಭಾರತ್ ಕ್ಯಾನ್ಸರ್ ಆಸ್ಪತ್ರೆಯ ಡಾ. ಎಸ್.ಆರ್. ರಕ್ಷಿತ್, ಸೋಮಶೇಖರ, ಭಾರ್ಗವ ರೆಡ್ಡಿ, ಹರೀಶ್ ಶೆಣೈ, ಸ್ಥಳ: ಮುಡಾ ಕ್ರೀಡಾಂಗಣ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ :** ಅನ್ವೇಷಣೆ–2023 ರಾಜ್ಯ ಮಟ್ಟದ ಪ್ರತಿಭಾ ಪ್ರೋತ್ಸಾಹ ವೇದಿಕೆ, ಮುಖ್ಯ ಅತಿಥಿಗಳು : ಎನ್‌ಇಪಿ ಅನುಷ್ಠಾನ ಕಾರ್ಯಪಡೆ ಅಧ್ಯಕ್ಷ ಎಂ. ಮದನ್‌ಗೋಪಾಲ್, ಅಧ್ಯಕ್ಷತೆ : ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಪ್ರಾದೇಶಿಕ ಮುಖ್ಯಸ್ಥ ಕೆ.ಎಸ್. ಜಯಂತ, ಸ್ಥಳ: ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ವರ್ತುಲ ರಸ್ತೆ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ :** ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ ದತ್ತಿ ಉಪನ್ಯಾಸ, ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅವರಿಂದ 'ಜಿ20 ನಾಯಕತ್ವ: ಭಾರತದ ಅವಕಾಶಗಳು' ಕುರಿತು ಉಪನ್ಯಾಸ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಜೆ.ಪಿ.ನಗರ :** ಉಚಿತ ಕಣ್ಣಿನ ಪೊರೆ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಜೆ.ಪಿ.ನಗರ ಮತ್ತು ಹೂಟಗಳ್ಳಿ, ಬೆಳಗ್ಗೆ 11 ರಿಂದ.

■ **ಮೈಸೂರು ಇಂಗ್ಲಿಷ್ ಥಿಯೇಟರ್ ಫೋರಂ :** ಕಾಲೇಜು ಇಂಗ್ಲಿಷ್ ನಾಟಕೋತ್ಸವ, ಸೇಂಟ್ ಜೋಸೆಫ್ ಬಿ.ಎಡ್. ಕಾಲೇಜು ವಿದ್ಯಾರ್ಥಿಗಳಿಂದ ಲಾ ವೈಯಲೆನ್ಸಿಯಾ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಮಧ್ಯಾಹ್ನ 3ಕ್ಕೆ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಮಧ್ವ–ಪುರಂದರ ನಮನ, ಸಂಜೆ 4.30 ರಿಂದ ಭಜನೆ, ಸಂಜೆ 5.30 ರಿಂದ ಉದ್ಘಾಟನೆ ಮತ್ತು ಸನ್ಮಾನ, ಶ್ರೀ ಅನಂತಾಚಾರ್ಯ ಕಟಗೇರಿ ದಾಸರಿಗೆ ಸನ್ಮಾನ, ಸಂಜೆ 7 ರಿಂದ ಪಂಡಿತ್ ಬಾದರಾಯಣಾಚಾರ್ಯ ಅವರಿಂದ ಮಧ್ವಾಚಾರ್ಯರ ಪವಾಡಗಳು ಕುರಿತು ಪ್ರವಚನ, ಸಂಜೆ 6.30 ರಿಂದ ಗಾಯಕರಾದ ಗಣೇಶ್ ದೇಸಾಯಿ ಮತ್ತು ಶ್ರೀಮತಿ ಮೇಘನಾ ವೆಂಕಟೇಶ್ ಅವರಿಂದ ದಾಸಮಂಜರಿ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ.

■ **ಶ್ರೀ ಅವಧೂತ ದತ್ತಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 80ನೇ ವರ್ಷದ ಜನ್ಮದಿನೋತ್ಸವದ ಪ್ರಯುಕ್ತ ಬೆಳಗ್ಗೆ 7 ಗಂಟೆಗೆ ಪ್ರಧಾನ ಯಾಗ – ಆಶಿಷ್ಯ ಹೋಮ ಮತ್ತು ಲಕ್ಷ್ಮೀನಾರಾಯಣ ಹೋಮ, ಬೆಳಗ್ಗೆ 10 ಗಂಟೆಗೆ ಪೂರ್ಣಾಹುತಿ, ರಾಜ್ಯ ಅವೇಕ್ಷಣ ದಶದಾನ, 11ಗಂಟೆಗೆ ಮಹಾ ಅಭಿಷೇಕ (ಸ್ವರ್ಣ, ಕನಕ ಅಭಿಷೇಕ) ಪರಮಪೂಜ್ಯ ಗಣಪತಿ ಸ್ವಾಮೀಜಿ ಅವರಿಗೆ ಪೂಜ್ಯ ಶ್ರೀ ಬಾಲ ಸ್ವಾಮೀಜಿಯವರಿಂದ. ಸಂಜೆ 4 ಗಂಟೆಗೆ ಪುಣ್ಯ ವಾಚನ, ಸಂಜೆ 6ಕ್ಕೆ ಗುರುಪೂಜೆ ಹಾಗೂ ಸ್ವಾಮೀಜಿಯವರಿಂದ ವಿಶೇಷ ಸಂದೇಶ, ರಾತ್ರಿ 8ಕ್ಕೆ ಪೂರ್ಣ ಚಂದ್ರನ ದರ್ಶನ. ಸ್ಥಳ: ಆಶ್ರಮದ ಆವರಣ, ಊಟಿ ರಸ್ತೆ.

■ **ಶ್ರೀ ಚಿಕ್ಕಲಿಂಗೇಶ್ವರಸ್ವಾಮಿ ದೇವಸ್ಥಾನ :** ಶ್ರೀ ಮದ್ರಾಜಯೋಗಿ ಶ್ರೀ ಶ್ರೀ ಚಿಕ್ಕಲಿಂಗಣ್ಣಸ್ವಾಮಿಗಳವರ 86ನೇ ವರ್ಷದ ಆರಾಧನಾ ಮಹೋತ್ಸವ, ಸಂಜೆ 5.30 ರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6.30 ರಿಂದ ಡಾ. ಕೆ. ಅನಂತರಾಮು ಅವರಿಂದ ಶ್ರೀಮದ್ಭಗವದ್ಗೀತೆ ಕುರಿತು ಕುರಿತು ಪ್ರವಚನ, ಸ್ಥಳ: ಶ್ರೀಚಿಕ್ಕಲಿಂಗೇಶ್ವರಸ್ವಾಮಿ ದೇವಸ್ಥಾನ, ಮಂಡಿ ಮೊಹಲ್ಲಾ.

■ **ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ಧರ್ಮ ಸಂಸ್ಥೆ ಟ್ರಸ್ಟ್ :** 76ನೇ ಜಾತ್ರೋತ್ಸವ, ಬೆಳಗ್ಗೆ ಗಣಪತಿ ನವಗ್ರಹ, ಶ್ರೀ ಪರಶುರಾಮ, ಪಂಚಾಮೃತಾಭಿಷೇಕ, ಹೋಮಗಳು, ಪೂರ್ಣಾಹುತಿ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಅನ್ನಸಂತರ್ಪಣೆ, ಸ್ಥಳ: ಶ್ರೀ ಎಲ್ಲಮ್ಮಾಂಬ ಚಂದ್ರಗುಪ್ತಾಂಬ ಧರ್ಮಸಂಸ್ಥೆ ಟ್ರಸ್ಟ್ ಆವರಣ, ಮಂಡಿ ಮೊಹಲ್ಲಾ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಉಪಾಧ್ಯಾಯರಿಗೆ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮ, ಅಧ್ಯಕ್ಷತೆ : ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಗೌರವ ಅತಿಥಿಗಳು : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಎಂ.ಪಿ. ವಿಜಯೇಂದ್ರ ಕುಮಾರ್, ಸ್ಥಳ: ಗೋಲ್ಡನ್ ಜ್ಯೂಬಿಲಿ ಹಾಲ್, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ಚುನಾವಣೆ : ಎಐಸಿಸಿ ವೀಕ್ಷಕರ ಸಭೆ, ಉಪಸ್ಥಿತರು : ಎಐಸಿಸಿ ವೀಕ್ಷಕ ಎಂ.ಕೆ. ರಾಘವನ್, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್, ಗ್ರಾಮಾಂತರ ಜಿಲ್ಲಾಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಮಾಜಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಶಾಸಕರಾದ ಡಾ. ಯತೀಂದ್ರ, ಹೆಚ್.ಪಿ. ಮಂಜುನಾಥ್, ಅನಿಲ್ ಚಿಕ್ಕಮಾದು, ಡಾ. ಡಿ. ತಿಮ್ಮಯ್ಯ, ಮಾಜಿ ಸಚಿವ ಧರ್ಮಸೇನಾ, ಸ್ಥಳ: ಜಿಲ್ಲಾ ಕಾಂಗ್ರೆಸ್ ಸಮಿತಿ, ರೈಲ್ವೆ ನಿಲ್ದಾಣದ ಸಮೀಪ, ಮಧ್ಯಾಹ್ನ 2ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಅನಿರುದ್ಧಾಚಾರ್ ಪಾಂಡುರಂಗಿ ಅವರಿಂದ ಪದ್ಮ ಪುರಾಣ ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ಭಾರತ್ ಕ್ಯಾನ್ಸರ್ ಆಸ್ಪತ್ರೆ, ಸೈಕಲ್ ಪ್ಯೂರ್ ಅಗರಬತ್ತಿ :** ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಪಂಜಿನ ಮೆರವಣಿಗೆ, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಸಂಜೆ 5.30ಕ್ಕೆ.

■ **ಮಾಲಿನಿ ನೃತ್ಯಶಾಲೆ ಮತ್ತು ಸಾಂಸ್ಕೃತಿಕ ಕೇಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಹರಿಕಥಾ ವಿದುಷಿ ಡಾ. ವಿ.ಮಾಲಿನಿ ಅವರಿಂದ ಹರಿಕಥೆ, ಮುಖ್ಯ ಅತಿಥಿಗಳು : ವೆಂಕಟೇಶ್‌ದಾಸ್, ಸ್ಥಳ: ಶ್ರೀ ಸುಬ್ರಾಯದಾಸ ವೆಂಕಟರಮಣ ಸ್ವಾಮಿ ದೇವಸ್ಥಾನ, ದೇವರಾಜ ಮೊಹಲ್ಲಾ, ಸಂಜೆ 6ಕ್ಕೆ.


■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ವಿಪ್ರಾನಂದ ಅವರಿಂದ ಉಪನಿಷತ್ತುಗಳ ಸಾರ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಕದಂಬ ರಂಗ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು :** ಕದಂಬ ರಾಜ್ಯ ಮಟ್ಟದ ಏಕವ್ಯಕ್ತಿ ಮಹಿಳಾ ನಾಟಕೋತ್ಸವ, ಬೆಂಗಳೂರಿನ ಕ್ಲೌನ್ಸ್ ರಿವರಿ ತಂಡದಿಂದ ರಂಗನಾಯಕಿ ನಾಟಕ ಪ್ರದರ್ಶನ, ನಿರ್ದೇಶನ : ಅಪೂರ್ವ ನಾಗರಾಜ್, ರಚನೆ : ಅನಘ ನರಸಿಂಹ, ಸಂಗೀತ : ಡಾ. ವೆಂಕಟೇಶ್ ಭಟ್, ರೂಪಕ್ ಕಲ್ಲೂರ್‌ಕರ್, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ.

■ **ಶ್ರೀ ರಾಜರಾಜೇಶ್ವರಿ ದೇವಸ್ಥಾನ :** ತ್ರಿಗುಣಾತ್ಮಿಕ ಶ್ರೀ ರಾಜರಾಜೇಶ್ವರಿ ದೇವತಾ ಉತ್ಸವಮೂರ್ತಿ ಚರ ಪ್ರತಿಷ್ಠಾಪನಾ ಮತ್ತು ಕುಂಭಾಭಿಷೇಕ ಮಹೋತ್ಸವ, ಬೆಳಗ್ಗೆ ಗಣಪತಿ ಪೂಜೆ, ಗಂಗಾ ಪೂಜೆ, ಪುಣ್ಯಾಹ, ಋತ್ವಿಗ್ವರಣ ವಿಹಿತ ಕಳಸ ಸ್ಥಾಪನೆ, ಗ್ರಹ ಯಜ್ಞ ಅಧಿವಾಸಗಳು, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6.30 ರಿಂದ ಸ್ಥಾಪಿತ ದೇವತಾ ಪೂಜೆ, ವಿಹಿತ ಹೋಮಗಳು, ಅಧಿವಾಸಗಳು, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ರಾಜರಾಜೇಶ್ವರಿನಗರ.

■ **ಶ್ರೀ ಎಲ್ಲಮ್ಮತಾಯಿ ಅಮ್ಮನವರ ದೇವಸ್ಥಾನ :** 19ನೇ ವರ್ಷದ ಪೂಜಾ ಮಹೋತ್ಸವ, ಬೆಳಗ್ಗೆ 6ಕ್ಕೆ ಅಭಿಷೇಕ, 9 ರಿಂದ ಶ್ರೀ ಗಣಹೋಮ, ನವಗ್ರಹ ಹೋಮ, ಶ್ರೀ ರೇಣುಕಾದೇವಿ ಹೋಮ, ಶ್ರೀ ದುರ್ಗಾಹೋಮ, ಶ್ರೀ ಮೃತ್ಯುಂಜಯ ಹೋಮ, ಪೂರ್ಣಾಹುತಿ, ಶ್ರೀ ಸತ್ಯನಾರಾಯಣಸ್ವಾಮಿ ಪೂಜೆ, ಶ್ರೀ ಎಲ್ಲಮ್ಮ ಚರಿತ್ರೆ ಮತ್ತು ಚೌಡಿಕೆ ನಾದ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ, ಸ್ಥಳ: 822, ಶ್ರೀ ರಾಜರಾಜೇಶ್ವರಿ ನಿಲಯ, ರಾಮಾನುಜ ರಸ್ತೆ, ಕೆ.ಆರ್. ಮೊಹಲ್ಲಾ.

ಒಂದನೇ ವರ್ಷದ ಸವಿನೆನಪು



ನಾರಾಯಣ್‌ಗೌಡ
ಸದಾ ನಿಮ್ಮ ನೆನಪಿನಲ್ಲಿರುವ, ಪತ್ನಿ ಗೀತಮ್ಮ ಮತ್ತು ಕುಟುಂಬವರ್ಗದವರು

ಪುರಸಭೆ ಕಾರ್ಯಾಲಯ, ವಿರಾಜಪೇಟೆ, ಕೊಡಗು ಜಿಲ್ಲೆ-571218

ದೂರವಾಣಿ ಸಂಖ್ಯೆ: 08274-257332 | ಇ-ಮೇಲ್: itstaff_ulb_virajpet@yahoo.com
ವೆಬ್ ಸೈಟ್: www.virajpettown.mrc.gov.in

ಕ್ರಸಂ.ನಂ.ಪು.ವಿ/ಆ.ನಿ.ನ/ಟಿ-02/2022-23 ದಿನಾಂಕ: 02.02.2023

ಟೆಂಡರ್ ಪ್ರಕಟಣೆ

ವಿರಾಜಪೇಟೆ ಪುರಸಭೆ ವ್ಯಾಪ್ತಿಯ 2021-22ನೇ ಸಾಲಿನ ಅಮೃತ ನಿರ್ಮಲ ನಗರ ಯೋಜನೆಯ ಉಳಿಕೆ ಅನುದಾನದಡಿಯಲ್ಲಿ ಘನತ್ಯಾಜ್ಯ ವಿಲೇವಾರಿ ವಾಹನಗಳಿಗೆ ಜಿ.ಪಿ.ಎಸ್ ಅಳವಡಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000 ಹಾಗೂ ತಿದ್ದುಪಡಿ ನಿಯಮ 2001ಕ್ಕೆ ಒಳಪಟ್ಟು ನೋಂದಾಯಿತ ತಯಾರಕರು/ ಸರಬರಾಜುದಾರರಿಂದ ಕೆ.ಡಬ್ಲ್ಯು-1 ನಿಯಮಗಳಿಗಾನುಸಾರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಟೆಂಡರ್‌ಗಳನ್ನು ನಿಗಧಿತ ಇ.ಎಂ.ಡಿಯೊಂದಿಗೆ ಮೊಹರು ಮಾಡಿದ ಲಕೋಟೆಯಲ್ಲಿಟ್ಟು ಈ ಕೆಳಕಾಣಿಸಿದ ನಿಗದಿತ ದಿನಾಂಕದೊಳಗೆ ಮುಖ್ಯಾಧಿಕಾರಿಗಳು ಪುರಸಭೆ ವಿರಾಜಪೇಟೆ ಇವರಿಗೆ ತಲುಪಿಸತಕ್ಕದ್ದು. ಟೆಂಡರ್ ಸಲ್ಲಿಸುವ ವಿವರಗಳು ಈ ಕೆಳಕಂಡಂತಿದ್ದು ಷರತ್ತುಗಳು ಹಾಗೂ ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು..

1. ಖಾಲಿ ಟೆಂಡರ್ ಫಾರಂಗಳಿಗಾಗಿ ಅರ್ಜಿ ಸಲ್ಲಿಸಲು ಹಾಗೂ ಟೆಂಡರ್ ಫಾರಂಗಳನ್ನು ಪಡೆಯಲು ದಿನಾಂಕ: 03.02.2023 ರಿಂದ 17.02.2023 ಸಂಜೆ 17.00 ಗಂಟೆಯವರೆಗೆ
2. ಭರ್ತಿ ಮಾಡಿದ ಮೊಹರು ಟೆಂಡರ್‌ಗಳನ್ನು ಟೆಂಡರ್ ಬಾಕ್ಸ್‌ನಲ್ಲಿ ಹಾಕುವ ಕೊನೆಯ ದಿನಾಂಕ ಮತ್ತು ಸ್ಥಳ: 17.02.2023 ಸಂಜೆ 17.30ಗಂಟೆಯವರೆಗೆ ವಿರಾಜಪೇಟೆ ಪಟ್ಟಣ ಪಂಚಾಯಿತಿಯಲ್ಲಿ.
3. ಸ್ವೀಕರಿಸಲಾದ ಮೊಹರಾದ ಟೆಂಡರುಗಳನ್ನು ತೆರೆಯುವ ದಿನಾಂಕ ಮತ್ತು ಸ್ಥಳ: 20.02.2023 ರಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ನಂತರದ ದಿನದಲ್ಲಿ ಪುರಸಭೆ ವಿರಾಜಪೇಟೆ.

ಕಾಮಗಾರಿಗಳ ವಿವರ, ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್ ಸೈಟ್ : www.virajpettown.mrc.gov.in ನಲ್ಲಿ ಮತ್ತು ಕಛೇರಿಯ ಸೂಚನಾ ಫಲಕವನ್ನು ನೋಡಬಹುದಾಗಿದೆ.

ಸಹಿ/-	ಸಹಿ/-	ಸಹಿ/-	ಸಹಿ/-
(ಶ್ರೀಮತಿ ಸುಶ್ಮಿತಾ ಟಿ.ಆರ್), ಅಧ್ಯಕ್ಷರು, ಪುರಸಭೆ, ವಿರಾಜಪೇಟೆ	(ಶ್ರೀ ವಿನಯ್ ಕುಟ್ಟಪ್ಪ), ಉಪಾಧ್ಯಕ್ಷರು, ಪುರಸಭೆ, ವಿರಾಜಪೇಟೆ	(ಶ್ರೀಮತಿ. ಟಿ.ಕೆ.ಯಶೋಧ), ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ವಿರಾಜಪೇಟೆ	(ಶ್ರೀ ಚಂದ್ರಕುಮಾರ್.ಎ), ಮುಖ್ಯಾಧಿಕಾರಿ, ಪುರಸಭೆ, ವಿರಾಜಪೇಟೆ

ಸತ್ಯಾನೇಶ್ವರ ಕೃಪೆ



ಹುಟ್ಟುಹಬ್ಬದ ಶುಭಾಶಯಗಳು
ವಿಹಾನ್ ಆರ್ಯನ್.ಕೆ
ಶುಭಾಶಯ ಕೋರುವವರು :
ತಂದೆ: ಕೃಷ್ಣಾ, ತಾಯಿ: ಚಂದ್ರಕಲಾ

43 ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಹಸಿರು ನಮ್ಮ ಉಸಿರು

ಕರ್ನಾಟಕ ರಾಜ್ಯ ಸಣ್ಣ ಬೀಡಿ-ಸಿಗರೇಟ್ ಮಾರಾಟಗಾರರ ಸಂಘ ರಿ.

ನಂ.1, ಬಿ.ಆರ್.ಡಿ ಭವನ್, 6ನೇ ಅಡ್ಡರಸ್ತೆ, 8ನೇ ಮುಖ್ಯರಸ್ತೆ ಮಲ್ಲೇಶ್ವರಂ, ಬೆಂಗಳೂರು- 560003

ಸಮಸ್ತ ಗ್ರಾಹಕರ ಗಮನಕ್ಕೆ

ದಿನಾಂಕ 01.02.2023ರಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ರವರು ಮಂಡಿಸಿರುವ 2023-24ನೇ ಸಾಲಿನ ಬಜೆಟ್‌ನಲ್ಲಿ ಸಿಗರೇಟ್ ಮೇಲಿನ 16% ತೆರಿಗೆ ಹೆಚ್ಚಳ ಸಿಗರೇಟ್ ದರದ ಬೆಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಈ ತೆರಿಗೆ ಹೆಚ್ಚಳವು ಹಲವು ತಂಬಾಕು ಕಚ್ಚಾ ಪದಾರ್ಥಗಳಿಗೆ ಸಂಬಂಧಿಸಿದೆ.

ಸಿಗರೇಟ್ ಮೇಲಿನ GST ತೆರಿಗೆ ಹೋಲಿಸಿದರೆ ಶೇಕಡ ಒಂದಕ್ಕಿಂತ ಕಡಿಮೆ ಇದ್ದು ಸಿಗರೇಟ್ ಕಂಪನಿಗಳಿಗೆ ಯಾವುದೇ ನಷ್ಟವಾಗುವುದಿಲ್ಲ. ಆದುದರಿಂದ ಸಿಗರೇಟ್ ಮಾರಾಟ ದರದಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲವೆಂದು, ಕರ್ನಾಟಕ ಚಿಲ್ಲರೆ ಮಾರಾಟಗಾರರ ಸಂಘದ ಅಧಿಕಾರಿಗಳು ತಿಳಿಸಿದ್ದಾರೆ. ಕೆಲವು ಮಾಧ್ಯಮಗಳಲ್ಲಿ ತಿಳಿಸಿರುವಂತೆ ಸಿಗರೇಟ್ ದರದಲ್ಲಿ ಯಾವುದೇ ಹೆಚ್ಚಳವಾಗುವುದಿಲ್ಲವೆಂದು ಗ್ರಾಹಕರಿಗೆ ಸಂಘದ ಅಧಿಕಾರಿಗಳು ಖಚಿತಪಡಿಸಿದ್ದಾರೆ.

ಶ್ರೀ ಬಿ.ಎನ್.ಮುರಳಿ ಕೃಷ್ಣ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸಣ್ಣ ಬೀಡಿ-ಸಿಗರೇಟ್ ಮಾರಾಟಗಾರರ ಸಂಘ ರಿ., ಬೆಂಗಳೂರು.

ನಕ್ಕರೆ ಅದೇ ಸ್ವರ್ಗ

ಆತ : ನನ್ನ ಹೆಂಡತಿ ಒಂದು ಬಟ್ಟೆ ಒಗೆಯೋ ಯಂತ್ರ ಖರೀದಿಸಿದ್ರೆ ಚೆನ್ನಾಗಿತ್ತು ಅಂತಿರ್ತಾಳೆ ಕಣಯ್ಯಾ...

ಈತ : ನೀನು ಭಾಗ್ಯವಂತ ಕಣಯ್ಯಾ. ನನ್ನ ಹೆಂಡತಿ ಅಂಥದೊಂದು ಯಂತ್ರದೊಂದಿಗೆ ಮದುವೆಯಾಗಿದ್ದಿದ್ರೆ ಚೆನ್ನಾಗಿತ್ತು ಅಂತಿರ್ತಾಳೆ...

ಮೈಸೂರು ಮಿತ್ರ

ಶನಿವಾರ, 4 ಫೆಬ್ರವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಗಂಡಾಂತರ ಅನಿರೀಕ್ಷಿತವಾಗಿ ಅನಿರೀಕ್ಷಿತ ಸ್ಥಳಗಳಲ್ಲಿ ನಮಗೆ ಕಾದಿರುತ್ತವೆ. ಆದ್ದರಿಂದ ಪ್ರತಿ ಹೆಜ್ಜೆಯನ್ನು ಎಚ್ಚರದಿಂದ ಇಡಬೇಕು. –ಗಂಟುಟೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದೇಶಾಂತ್ರ ಹೋದ್ರೂ ಸ್ವತಂತ್ರವಾಗಿ ಹೋಗು

ನಿಮ್ಮ ಪತ್ರಗಳು

ಆರೋಗ್ಯಕರ ಸಮಾಜ ನಿರ್ಮಾಣದ ಬಗ್ಗೆ ಯೋಚಿಸಿ

ಮಾನ್ಯರೆ,

ಕರ್ನಾಟಕ ರಾಜ್ಯ ವಿಧಾನಸಭೆಯ ಅವಧಿಯು 2023ರ ಮೇನಲ್ಲಿ ಮುಗಿಯಲಿದೆ. ಹೀಗಾಗಿ ರಾಜ್ಯದ ಅಧಿಕಾರ ಚುಕ್ಕಾಣಿಯನ್ನು ಹಿಡಿಯಲು ವಿವಿಧ ಪಕ್ಷಗಳ ದೊಂಬರಾಟ ಶುರುವಾಗಿದೆ. ಹತ್ತು ಹಲವು ಆಶ್ವಾಸನೆ, ಆಮಿಷಗಳ ಮಹಾಪೂರವೇ ಹರಿದು ಬರುತ್ತಿದೆ. ಪರಸ್ಪರ ಕಿತ್ತಾಟ, ಘೋಷಣೆ ಮತ್ತು ವೈಯಕ್ತಿಕ ತೇಜೋವಧೆಯ ಮೂಲಕ ರಾಜಕೀಯ ಕೆಸರೆರಚಾಟ ಪಾರಂಭವಾಗಿದೆ. ರಾಜ್ಯದಲ್ಲಿ ಹತ್ತು ಹಲವು ವಿಭಿನ್ನ ರೀತಿಯ ಸಮಸ್ಯೆಗಳಿಂದ ರಾಜ್ಯದ ಜನರು ಬಳಲುತ್ತಿದ್ದಾರೆ. ನಿರುದ್ಯೋಗ, ಮಿತಿಮೀರಿದ ಜನಸಂಖ್ಯೆ, ಅನೈರ್ಮಲ್ಯ, ಶಿಕ್ಷಣದ ಸಮಸ್ಯೆ, ಆರೋಗ್ಯದ ಸಮಸ್ಯೆ, ಸಮಾನ ಕೆಲಸಕ್ಕೆ ಸಮಾನ ವೇತನ, ಲಿಂಗ ಅಸಮಾನತೆ, ಸ್ವಚ್ಛ ಆಡಳಿತ ಇವೆಲ್ಲಾ ಕನಸಾಗೇ ಉಳಿದಿದೆ.

ಕೇವಲ ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪೂರ್ವದ ಪ್ರಣಾಳಿಕೆಯಲ್ಲಿ ಹೊರಡಿಸಿದ ಜನಪರ ಘೋಷಣೆಗಳಲ್ಲಿ ಯಾವುದನ್ನೂ ಜನರಿಗೆ ತಲುಪಿಸಲು ಸಾಧ್ಯವಾಗದೇ ಇರುವುದು ನಾಚಿಕೆಗೇಡಿನ ಸಂಗತಿ. ಜಾತಿ, ಮತ, ಪಂಥ ಆಧಾರಿತ ಮೀಸಲಾತಿಗಳು, ಈ ಮೀಸಲಾತಿಗಾಗಿ ಪ್ರಭಾವಿಗಳ ಹೋರಾಟ... ಇವೆಲ್ಲಾ ತಮ್ಮ ಅಸ್ತಿತ್ವಕ್ಕಾಗಿ ಹೊಡೆದಾಡುತ್ತಿವೆ. ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ಸಾಮಾಜಿಕ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಯಾವುದೇ ಸ್ಥಾಪಿತ ಸರ್ಕಾರಗಳು ಯೋಚಿಸದಿರುವುದು ದುರಂತವೇ ಸರಿ. ವೈಯಕ್ತಿಕ ಹಿತಾಸಕ್ತಿಗಳು ಹೆಚ್ಚಾಗಿ ಎಲ್ಲಾ ವಿಭಾಗಗಳಲ್ಲೂ ಮಿತಿ ಮೀರಿದ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಹೀಗಾಗಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಯೋಗ್ಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ. **ಚುನಾವಣೆ ಹತ್ತಿರ ಬಂದಂತೆ ಮನೆಗೆ ಬಂದು ಹಣ, ವಸ್ತು, ಒಡವೆ ಇನ್ನಿತರ ಆಮಿಷಗಳನ್ನು ನೀಡಿ ನಿಮ್ಮ ಮತವನ್ನು ಖರೀದಿಸುವವರ ಹಿಡಿದು ಚುನಾವಣಾ ಆಯೋಗಕ್ಕೆ ದೂರು ನೀಡಿ. ಯಾವುದೇ ಅಭ್ಯರ್ಥಿಗಳು ನಿಮಗೆ ಯೋಗ್ಯರಲ್ಲದಿದ್ದರೇ ನಿಮ್ಮ ಮತವನ್ನು ಯಾರಿಗೂ ಮತ ಚಲಾವಣೆ ಆಗದೇ ಇರುವ NOTA (NONE OF THE ABOVE) ಬಟನ್ ಒತ್ತಬಹುದಾಗಿರುತ್ತದೆ.**

ದಯಮಾಡಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಯೋಗ್ಯ, ಸಮರ್ಥ ಅಭ್ಯರ್ಥಿಗಳನ್ನು ಚುನಾಯಿಸುವ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಯೋಚಿಸಿ ನಿಮ್ಮ ಸಾರ್ವಭೌಮ, ಸಾಂವಿಧಾನಿಕ ಹಕ್ಕಾದ ಮತವನ್ನು ಚಲಾಯಿಸಿ ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತದ ಅಖಂಡತೆ, ವಿವಿಧತೆ ಮತ್ತು ಏಕತೆಯನ್ನು ಜಗತ್ತಿಗೆ ಸಾರಬೇಕೆಂದು ಈ ಮೂಲಕ ತಮ್ಮಲ್ಲಿ ಕೋರುತ್ತೇನೆ.

–ವೇಣು ಬೀರಿಹುಂಡಿ, ಮೈಸೂರು

ರಾಜಕಾರಣಿಗಳಿಗೆ ಕಾಣದ ನಿರುದ್ಯೋಗ ಸಮಸ್ಯೆ

ಮಾನ್ಯರೆ,

ಯಾವುದೇ ಒಂದು ದೇಶದ ಅಭಿವೃದ್ಧಿಯನ್ನು ನಿರ್ಧರಿಸುವುದು ಅಲ್ಲಿಯ ಉದ್ಯೋಗ ಸಾಮರ್ಥ್ಯದ ಮೇಲೆ. ದೇಶದಲ್ಲಿ ತುಂಬಿರುವ ನಿರುದ್ಯೋಗ ಆ ದೇಶದ ಆರ್ಥಿಕ ಪರಿಸ್ಥಿತಿಯ ತೊಡಕಿನ ಮೂಲ ಕಾರಣವಾಗಿದೆ. ಭಾರತದಲ್ಲಿ ನಿರುದ್ಯೋಗ ಪರಿಸ್ಥಿತಿ ದಿನೇ ದಿನೆ ಹೆಚ್ಚಾಗುತ್ತಿದೆ. ಇದಕ್ಕೆ ಮೂಲ ಕಾರಣವೆಂದರೆ ಶಿಕ್ಷಣ ನೀತಿಯಲ್ಲಿರುವ ದೋಷ; ಅಧಿಕಾರಕ್ಕೆ ಬಂದ ಸರ್ಕಾರಗಳು. ಯುವಕರ ಸಾಮರ್ಥ್ಯವನ್ನು ನಿರ್ಲಕ್ಷಿಸಿ ಒಂದೇ ಬಾರಿಗೆ ಬಹಳ ಮುಂದುವರೆಯಬೇಕು ಎಂಬ ಅತ್ಯುತ್ಸಾಹದಿಂದ ನಮ್ಮ ದೇಶ ಇನ್ನೂ ಮುಂದುವರೆಯುತ್ತಿರುವ ದೇಶವಾಗಿಯೇ ಉಳಿದಿರುವುದು. ನಮ್ಮ ಕಾಲೇಜುಗಳ ವಿಶ್ವವಿದ್ಯಾಲಯಗಳು ಕೇವಲ ಪದವಿ ಸರ್ಟಿಫಿಕೇಟ್‌ಗಳನ್ನು ನೀಡಿ ನಿರುದ್ಯೋಗಿಗಳನ್ನೂ ಸೃಷ್ಟಿಸುವ ಕಾರ್ಖಾನೆಗಳು ಆಗಿವೆ. ವಿದ್ಯಾರ್ಥಿಗಳು ನಿರುದ್ಯೋಗದ ಸಮಸ್ಯೆಯಿಂದಾಗಿ ತಮ್ಮ ಬದುಕು ನಡೆಸುವ ಸಲುವಾಗಿ ಕಾನೂನು ವಿರೋಧಿ ಕೆಲಸಕ್ಕೂ ಕೈ ಹಾಕುತ್ತಾರೆ. ಪ್ರತಿ ವರ್ಷ ಆತ್ಮಹತ್ಯೆಯಂತಹ ಪ್ರಕರಣಗಳು ಹೆಚ್ಚುತ್ತಿರುವುದಕ್ಕೂ ನಿರುದ್ಯೋಗವೇ ಮೂಲ ಕಾರಣ. ಆದರೆ ನಮ್ಮ ದೇಶದ ರಾಜಕಾರಣಿಗಳು ಚುನಾವಣೆ ಸಮೀಪಿಸುತ್ತಿರುವ ಸಮಯದಲ್ಲಿ ಮಾತ್ರ, ದೇಶದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆ ಎಂದು ಪೊಳ್ಳು ಆಶ್ವಾಸನೆ ಕೊಟ್ಟು ಅಧಿಕಾರಕ್ಕೆ ಬರುತ್ತಾರೆ. ಆದರೆ ಇಂತಹ ಪೊಳ್ಳು ಸರ್ಕಾರಗಳು ಅಧಿಕಾರಕ್ಕೆ ಬರಲು ನಮ್ಮಂತಹ ಜನಸಾಮಾನ್ಯರು ಬಿಡಬಾರದು. ಯಾಕೆಂದರೆ ಮುಂದೊಂದು ದಿನ ನಮ್ಮ ದೇಶ ಶ್ರೀಲಂಕಾ ಮತ್ತಿತರ ದೇಶದಂತೆ ದಿವಾಳಿಯಾಗಬಾರದು.

–ಶಶಿ ಆರ್.ಎಸ್., ಮಹಾರಾಜ ಕಾಲೇಜು, ಮೈಸೂರು.

ಆನ್‌ಲೈನ್ ಮೂಲಕ ನೀರಿನ ಬಿಲ್ ಪಾವತಿಗೆ ಅವಕಾಶ ಕಲ್ಪಿಸಿ

ಮಾನ್ಯರೆ,

ನೀರಿನ ಬಿಲ್ಲನ್ನು ಆನ್‌ಲೈನ್‌ನಲ್ಲಿ ಪಾವತಿ ಮಾಡುವ ಅನುಕೂಲ ತಪ್ಪಿ ಎಂಟು ತಿಂಗಳಾಗಿದೆ. ಪುನಃ ಈ ಸೌಲಭ್ಯ ಕಲ್ಪಿಸುವಂತೆ ಪತ್ರಿಕೆಗಳಲ್ಲಿ ಬರೆದು ಸಾಕಾಯಿತು. ಏನು ಪ್ರಯೋಜನವಾಗಲಿಲ್ಲ. ಈ ಹಿಂದೆ google pay ಆಪ್‌ನಲ್ಲಿ ಪಾವತಿ ಮಾಡುತ್ತಿದ್ದೆ. ಅದರಲ್ಲಿ link ಮಾಡಲು ಪ್ರಯತ್ನಿಸಿದೆ, ಆಗಲಿಲ್ಲ. ಇದೂ ಆಗಬೇಕಾಗಿದೆ. ಸಂಬಂಧಪಟ್ಟವರು ಇದನ್ನು ಸರಿಪಡಿಸಿದರೆ ಕಚೇರಿ ಸಿಬ್ಬಂದಿಗೆ ಕೆಲಸದ ಒತ್ತಡ ಕಡಿಮೆ ಆಗುವುದಿಲ್ಲವೇ?

–ಅಕ್ಕಿಹೆಬ್ಬಾಳು ವೆಂಕಟೇಶ್, ಕುವೆಂಪುನಗರ

ಮುಕ್ತ ವಿವಿಯಲ್ಲಿ ಕಲಿಕೆಗೆ ಮುಕ್ತ ಅವಕಾಶ

ಮಾನ್ಯರೆ

'ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ' ಎಂಬ ಧ್ಯೇಯದೊಂದಿಗೆ 1996ರಲ್ಲಿ ಸ್ಥಾಪನೆಯಾಗಿ, 18 ವರ್ಷದಿಂದ 80 ವರ್ಷ ವಯೋಮಾನದವರೆಗಿನ ಲಕ್ಷಾಂತರ ಮಂದಿಗೆ ವಿದ್ಯೆ ನೀಡಿ, ಅವರ ಬದುಕಿಗೆ ಹೊಸ ದಾರಿ ತೋರಿದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಕೆಲವು ಕಾರಣಗಳಿಂದ ಮೊದಲಿನ ಲಯ ಕಳೆದುಕೊಂಡಿತ್ತು. ಆದರೀಗ, ಮುಕ್ತ ವಿವಿಯು ಹಲವಾರು ತೊಡಕುಗಳನ್ನು ಹಂತ ಹಂತವಾಗಿ ಸರಿಪಡಿಸಿಕೊಂಡು ಹೊಸ ಹೊಸ ಯೋಜನೆಗಳನ್ನೊಳಗೊಂಡ ಹತ್ತು ಹಲವು ವಿಶೇಷತೆಗಳುಳ್ಳ ಕೌಶಲ್ಯಾಧಾರಿತ ಕೋರ್ಸ್‌ಗಳೂ ಸೇರಿದಂತೆ ಹಲವಾರು ವಿದ್ಯಾರ್ಥಿ ಸ್ನೇಹಿ ಶೈಕ್ಷಣಿಕ ವಿಷಯಗಳಿಗೆ 23–24ನೇ ಸಾಲಿನ ಪ್ರವೇಶಾತಿಯನ್ನು ಪ್ರಾರಂಭಿಸಿದೆ. ಬಹು ಮುಖ್ಯವಾಗಿ ಇಲ್ಲಿ ವಿದ್ಯಾರ್ಥಿಗಳು ಗಮನಿಸಬೇಕಾದ ಅಂಶವೆಂದರೆ ಪ.ಜಾ, ಪ.ಪ, ಓಬಿಸಿ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಶುಲ್ಕ ಪಾವತಿಸಿ ಪ್ರವೇಶಾತಿ ಪಡೆದ ನಂತರ ಸ್ಟೇಟ್ ಸ್ಕಾಲರ್‌ಶಿಪ್ ಪೋರ್ಟಲ್ (SSP) ಮುಖಾಂತರ ಸಮಾಜ ಕಲ್ಯಾಣ ಇಲಾಖೆಯಿಂದ ಪೂರ್ಣ ಶುಲ್ಕವನ್ನು ಮರುಭರಿಕೆ ಮಾಡಿಕೊಳ್ಳಬಹುದಾಗಿದೆ. ಅಷ್ಟೇ ಅಲ್ಲದೆ ಬಿಪಿಎಲ್ ಕಾರ್ಡ್ ಹೊಂದಿರುವ ಮಹಿಳಾ ಅಭ್ಯರ್ಥಿಗೆ, ಮಿಲಿಟರಿ ಸೇವೆಯಲ್ಲಿರುವ ಮಾಜಿ ಸೈನಿಕರಿಗೆ, ಆಟೋ, ಕ್ಯಾಬ್ ಚಾಲಕರು ಅವರ ಪತ್ನಿ, ಮಕ್ಕಳಿಗೆ, ಕೆಎಸ್‌ಆರ್‌ಟಿಸಿ, ಬಿಎಂಟಿಸಿ ನೌಕರರಿಗೆ ಬೋಧನಾ ಶುಲ್ಕದಲ್ಲಿ ರಿಯಾಯಿತಿ ಹಾಗೂ ತೃತೀಯ ಲಿಂಗಕ್ಕೆ ಸೇರಿದ ಹಾಗೂ ಕೋವಿಡ್‌ನಿಂದ ಮೃತಪಟ್ಟ ತಂದೆ, ತಾಯಿ, ಅವರ ಮಕ್ಕಳಿಗೆ, ದೃಷ್ಟಿ ದೋಷವುಳ್ಳ ಅಭ್ಯರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ ನೀಡುತ್ತಿದೆ. ಹೀಗಾಗಿ, ಪದವಿ ಪೂರ್ವ, 10+2 ವಿದ್ಯಾರ್ಹತೆ ಹೊಂದಿರುವ ಎಲ್ಲಾ ಅಭ್ಯರ್ಥಿಗಳು ಈ ಅವಕಾಶವನ್ನು ಸದುಪಯೋಗ ಪಡೆದುಕೊಳ್ಳಲು ಮನವಿ.

–ಬಿ. ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.



ಕಾರ್ಕಳ ಆನಂದಭಟ್
ಮೊ. 7676554198

ದಿಕ್ಕುದೆಸೆ

ವಿದೇಶಗಳಲ್ಲಿ ಅನಿವಾಸಿ ಭಾರತೀಯರ ಸಾಧನೆ

ವಿದೇಶಿ ಮಣ್ಣಲ್ಲಿ ಪ್ರವಾಸಿ ಭಾರತೀಯರದು ದೇಶದ ರಾಯಭಾರಿಗಳ ಪಾತ್ರವಾಗಿದೆ. ಭಾರತದ ಯೋಗ, ಆಯುರ್ವೇದ, ಗುಡಿ ಕೈಗಾರಿಕೆ, ಕರಕುಶಲ ಕಲೆಗಳು, ಸಿರಿಧಾನ್ಯಗಳು ಎಲ್ಲದಕ್ಕೂ ಬ್ರಾಂಡ್ ಅಂಬಾಸಿಡರ್‌ಗಳಾಗಿರುತ್ತಾರೆ. ಜನವರಿ 9 ರಂದು ಮಧ್ಯಪ್ರದೇಶದ ಇಂಡೋರ್‌ನಲ್ಲಿ ನಡೆದ ಪ್ರವಾಸಿ ಭಾರತೀಯ ದಿವಸ್ ಸಮಾವೇಶದಲ್ಲಿ ಭಾಗವಹಿಸಿದ್ದ ಭಾರತೀಯರನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಪ್ರಧಾನಿ ಮೋದಿಯವರು ಈ ಮಾತುಗಳನ್ನು ಉಲ್ಲೇಖಿಸಿದ್ದರು.

ಜಗತ್ತಿನ ಎಲ್ಲ ಶ್ರೀಮಂತ ದೇಶಗಳು ಭಾರತೀಯರಿಗೆ ತಮ್ಮ ದೇಶಗಳ ಪೌರತ್ವವನ್ನು ನೀಡುವ ಸ್ಪರ್ಧೆಯಲ್ಲಿವೆ. ಈ ಸಂಗತಿ ಭಾರತೀಯರಾದ ನಮಗೆ ಹೆಮ್ಮೆಪಡುವ ವಿಷಯವಾಗಿದೆ. ವಿದೇಶಗಳಲ್ಲಿರುವ ಸುಮಾರು ಮೂರು ಕೋಟಿಗಿಂತ ಅಧಿಕ ಅನಿವಾಸಿ ಭಾರತೀಯ ಮೂಲದವರು ತಾವು ಪಡೆದ ಉನ್ನತ ಸಂಸ್ಕಾರ, ಶಿಕ್ಷಣ, ಪ್ರಾಮಾಣಿಕತೆ, ಕೌಶಲ್ಯ, ಪರಿಶ್ರಮ, ಕರ್ತವ್ಯ ಪರತೆಯಂತಹ ಗುಣಗಳಿಂದ ವಿದೇಶಗಳಲ್ಲಿ ತಮ್ಮ ವಾಸ್ತವ್ಯವನ್ನು ಸಾರ್ಥಕಗೊಳಿಸಿದ್ದಾರೆ. ಈ ದೇಶಗಳ ಅರ್ಥ ವ್ಯವಸ್ಥೆ ಸದೃಢಗೊಳಿಸುವಲ್ಲಿ ತಮ್ಮ ಕೊಡುಗೆ ನೀಡಿದ್ದಾರೆ. ವಿಶೇಷವಾಗಿ ಅಮೇರಿಕಾ, ಕೆನಡಾ, ಬ್ರಿಟನ್, ಸಿಂಗಾಪುರ, ಜಪಾನ್, ಆಸ್ಟ್ರೇಲಿಯಾ ಸಹಿತ ಅನೇಕ ವಿಕಸಿತ ದೇಶಗಳು ಇಂದಿನ ದಿನಗಳಲ್ಲಿ ಭಾರತೀಯರಿಂದ ಅದೆಷ್ಟು ಪ್ರಭಾವಿತರಾಗಿದ್ದಾರೆಂದರೆ ತಮ್ಮ ದೇಶಗಳ ರಾಜಕೀಯ ಕ್ಷೇತ್ರದಲ್ಲೂ ಭಾರತೀಯರಿಗೆ ಅವಕಾಶ ನೀಡುವ ಬಗ್ಗೆ ಯೋಚನೆಗಳಾಗುತ್ತಿವೆ. ಈ ರೀತಿ ರಾಜಕೀಯದಲ್ಲಿ ಭಾರತೀಯರಿಗೆ ಪ್ರತಿನಿಧಿತ್ವ ನೀಡುವ ಮೂಲಕ ಅಲ್ಲಿನ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಸ್ಥಿತಿ ಸುಧಾರಿಸಬಹುದೆಂಬ ವಿಶ್ವಾಸ ಹೊಂದಿದ್ದಾರೆ. ಪ್ರಸ್ತುತ ಮೂರು ಕೋಟಿ ಭಾರತೀಯರು ವಿಶ್ವದ 146ಕ್ಕೂ ಅಧಿಕ ದೇಶಗಳಲ್ಲಿದ್ದಾರೆ. ಇವರಲ್ಲಿ 1.3 ಕೋಟಿ ಅನಿವಾಸಿ ಭಾರತೀಯರಾಗಿದ್ದು 1.7 ಕೋಟಿ ಭಾರತೀಯರು ಆಯಾ ದೇಶಗಳ ಪೌರತ್ವ ಪಡೆದಿರುತ್ತಾರೆ. ಕೆರೆಬಿಯನ್, ಫಿಜಿ ದ್ವೀಪ ರಾಷ್ಟ್ರಗಳು ಸುರಿನಾಂ, ದಕ್ಷಿಣ–ಪೂರ್ವ ಆಫ್ರಿಕಾ ದೇಶಗಳು ಹಾಗೂ ಮಲೇಷಿಯಾ ಮೊದಲಾದ ಕೆಲವು ದೇಶಗಳಿಗೆ 200 ವರ್ಷಗಳ ಹಿಂದೆಯೇ ವಲಸೆ ಹೋಗಿ ಅಲ್ಲಿನ ಮೂಲ ನಿವಾಸಿಗಳಂತೆ ಆಗಿದ್ದರೂ ತಮ್ಮ ಮೂಲ ಭಾರತೀಯ ಪದ್ಧತಿ, ಸಂಪ್ರದಾಯ, ನಂಬಿಕೆಗಳನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಕೊಲ್ಲಿ ರಾಷ್ಟ್ರಗಳಲ್ಲಿ ಕಚ್ಚಾತೈಲ ದೊರೆತ ನಂತರ ಅಲ್ಲಿಗೂ ಉದ್ಯೋಗ ನಿಮಿತ್ತ ತೆರಳುತ್ತಿದ್ದಾರೆ. ಈ ದೇಶಗಳ ಆರ್ಥಿಕತೆಗೆ ಶಕ್ತಿ ಹಾಗೂ ವೇಗ ತುಂಬುವ ಕಾರ್ಯ ಮಾಡುತ್ತಿದ್ದಾರೆ.

1965ರ ನಂತರ ಅಮೇರಿಕ, ಬ್ರಿಟನ್, ಕೆನಡಾ, ಆಸ್ಟ್ರೇಲಿಯಾ ಹಾಗೂ ಸಿಂಗಾಪುರದಂತಹ ಶ್ರೀಮಂತ ದೇಶಗಳಲ್ಲಿ ಭಾರತೀಯರು ತಮ್ಮಲ್ಲಿರುವ ಅಸಾಧಾರಣ ಸಾಮರ್ಥ್ಯವನ್ನು ಪರಿಚಯಿಸುವಲ್ಲಿ ಯಶಸ್ವಿಯಾಗಿದ್ದಾರೆ. ವಿಶೇಷವಾಗಿ ಕಂಪ್ಯೂಟರ್ ತಂತ್ರಜ್ಞಾನ, ಸ್ವಾಸ್ಥ್ಯ, ವಿಜ್ಞಾನದಂತಹ ಕ್ಷೇತ್ರಗಳ ಅಭಿವೃದ್ಧಿಯಲ್ಲಿ ತಮ್ಮ ಅಮೂಲ್ಯ ಯೋಗದಾನ ನೀಡಿದ್ದಾರೆ.

ಅತ್ಯಧಿಕ ವೇತನ ಪಡೆಯುತ್ತಿರುವ ಭಾರತೀಯರು

ಅಮೇರಿಕದಲ್ಲಿ ಏಷ್ಯಾ ಮೂಲದ ನಾಗರಿಕರ ಜನಸಂಖ್ಯೆ ಕಳೆದ ಮೂರು ದಶಕಗಳಲ್ಲಿ ಮೂರು ಪಟ್ಟು ಏರಿಕೆ ದಾಖಲಿಸಿದೆ ಮತ್ತು ಏಷ್ಯಾ ಮೂಲದವರಲ್ಲಿ ಭಾರತೀಯರು ಅತೀ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಪ್ರಸ್ತುತ ಅಮೇರಿಕದಲ್ಲಿ 40 ಲಕ್ಷ ಭಾರತೀಯರಿದ್ದಾರೆ. ಅಮೇರಿಕದ ಒಟ್ಟು ಜನಸಂಖ್ಯೆಯ ಶೇ.1.2 ರಷ್ಟಿದ್ದಾರೆ. ಇವರು ಅಮೇರಿಕದ ಆರ್ಥಿಕತೆಗೆ ಅಪಾರ ಕೊಡುಗೆ ನೀಡುತ್ತಿದ್ದಾರೆ. ಭಾರೀ ಸಂಖ್ಯೆಯ ಭಾರತೀಯ ಮೂಲದ ಇಂಜಿನಿಯರ್‌ಗಳು, ತಂತ್ರಜ್ಞರು, ವೈದ್ಯರು, ಸಂಶೋಧಕರು ಅಮೇರಿಕದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅಮೇರಿಕದಲ್ಲಿರುವ ಅನಿವಾಸಿಗಳಲ್ಲಿ ಭಾರತೀಯ ಮೂಲದವರು ಅತೀ ಹೆಚ್ಚು ವೇತನ ಪಡೆಯುತ್ತಿದ್ದಾರೆ. ಅಮೇರಿಕನ್ನರು ವಾರ್ಷಿಕ ವೇತನ 70 ಸಾವಿರ ಡಾಲರ್ ಆದರೆ ಭಾರತೀಯರು 1.30 ಲಕ್ಷ ಡಾಲರ್ ಪಡೆಯುತ್ತಿದ್ದಾರೆ. 2030ರ ವೇಳೆಗೆ ಅಮೇರಿಕಾದಲ್ಲಿ ಚೀನಿಯರನ್ನು ಹಿಂದಿಕ್ಕಿ ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ. ಪ್ರಸ್ತುತ ಎಚ್–1 ಬಿ ವೀಸಾ ಪಡೆದವರಲ್ಲಿ ಭಾರತೀಯರು ಅತ್ಯಧಿಕ ಸಂಖ್ಯೆಯಲ್ಲಿದ್ದು, ಮುಂದೆ ಇವರಿಗೆ ಅಮೇರಿಕದ ಖಾಯಂ ಪೌರತ್ವ ಲಭಿಸಲಿದೆ. ಪ್ರತಿ ವರ್ಷ 55 ರಿಂದ 60 ಸಾವಿರದಷ್ಟು ಭಾರತೀಯರಿಗೆ ಎಚ್–1 ಬಿ ವೀಸಾ ನೀಡಲಾಗುತ್ತದೆ. ಅರ್ಥಾತ್ ಭಾರತೀಯರಿಗೆ ಅಸ್ಥಾಯಿ ರೂಪದಲ್ಲಿ ಅಮೇರಿಕದಲ್ಲಿ ವಾಸಿಸಲು ಅವಕಾಶ ನೀಡಲಾಗುತ್ತದೆ.

ಅಮೇರಿಕದಲ್ಲಿ ಭಾರತೀಯ ವೈದ್ಯರು ಶೇ.9 ರಷ್ಟಿದ್ದಾರೆ. ಅಮೇರಿಕದಲ್ಲಿ ಪ್ರತಿ ಏಳನೇ ವ್ಯಕ್ತಿ ಭಾರತೀಯ ಮೂಲದ ವೈದ್ಯರಿಂದ ಚಿಕಿತ್ಸೆ ಪಡೆಯುತ್ತಾನೆ. ಅಮೇರಿಕದ ಸಿಲಿಕಾನ್ ಕಣಿವೆಯಲ್ಲಂತೂ ಭಾರತೀಯರ ಪಾರಮ್ಯವೇ ಮೆರೆಯುತ್ತಿದೆ.

ಸಿಲಿಕಾನ್ ಕಣಿವೆಯಲ್ಲಿ ಕೆಲಸ ಮಾಡುವ ಪ್ರತಿ ಹತ್ತರಲ್ಲಿ ಓರ್ವ ಭಾರತೀಯ ತಂತ್ರಜ್ಞನಾಗಿದ್ದಾನೆ. ಅದೇ ರೀತಿ ಅಮೇರಿಕಾದಲ್ಲಿ ಪ್ರಾರಂಭವಾಗುವ ಪ್ರತಿ ಮೂರು ಸ್ಟಾರ್ಟ್‌ಅಪ್‌ನಲ್ಲಿ ಒಂದು ಭಾರತದವನದ್ದಾಗಿರುತ್ತದೆ. ಅಮೇರಿಕಾದಲ್ಲಿ ಸ್ಥಾಪಿತವಾಗುವ ಟೆಕ್ ಕಂಪನಿಗಳಲ್ಲಿ ಶೇ.8 ರಲ್ಲಿ ಭಾರತೀಯ ಮೂಲದವರು ಸಂಸ್ಥಾಪಕ ಸದಸ್ಯರಾಗಿರುತ್ತಾರೆ. ಅಲ್ಲಿನ ವೃತ್ತಿಪರ ಕಾಲೇಜುಗಳು ಸಂಸ್ಥಾನಗಳಲ್ಲಿ ಭಾರತೀಯ ಮೂಲದವರೆ ಅಧಿಕ ಸಂಖ್ಯೆಯಲ್ಲಿದ್ದು, ಕೆಲವರು ಡೀನ್, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬ್ಯಾಂಕಿಂಗ್ ಹಾಗೂ ವಿತ್ತೀಯ ಕಂಪನಿಗಳು ಭಾರತೀಯರ ಪ್ರಾಬಲ್ಯದಿಂದ ಹೊರತಾಗಿಲ್ಲ. ಪ್ರಸ್ತುತ ಅಮೇರಿಕದ ಅನೇಕ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಭಾರತೀಯ ಮೂಲದವರು ಸಿಇಓ ಸಹಿತ ಉನ್ನತ ಹುದ್ದೆಗಳಲ್ಲಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಭಾರತೀಯರು ಅಮೇರಿಕದ ರಾಜಕಾರಣಕ್ಕೂ ಪ್ರವೇಶಿಸಿದ್ದಾರೆ. 2020ರಲ್ಲಿ ಅಮೇರಿಕದ ರಾಜಕೀಯ ವ್ಯವಸ್ಥೆಯ ವಿವಿಧ ಸ್ತರಗಳಲ್ಲಿ ಅರವತ್ತು ಭಾರತೀಯರು ಚುನಾವಣೆಗಳಲ್ಲಿ ಸ್ಪರ್ಧಿಸಿದ್ದಾರೆ.



> **"ಪ್ರಪಂಚದ ನೂರಾರು ದೇಶಗಳಿಗೆ ಉದ್ಯೋಗ, ವ್ಯವಹಾರ, ಸಂಶೋಧನೆ, ಸೇವಾ ಮನೋಭಾವದಿಂದ ವಲಸೆ ಹೋಗುತ್ತಿರುವ ಭಾರತೀಯರು ತಮಗೆ ಆಶ್ರಯ ನೀಡಿದ ದೇಶಗಳ ಅಭಿವೃದ್ಧಿಗೆ ಮೌಲ್ಯಯುತ ಕೊಡುಗೆ ನೀಡುವುದರೊಂದಿಗೆ ಭಾರತಕ್ಕೂ ಆರ್ಥಿಕ ಶಕ್ತಿ ನೀಡಿದ್ದಾರೆ. ಇತ್ತೀಚೆಗೆ ವಿಶ್ವ ಬ್ಯಾಂಕ್ ಪ್ರಕಟಿಸಿದ ವರದಿಯಲ್ಲಿ 2021 ರಲ್ಲಿ ಭಾರತೀಯರು 89.40 ಬಿಲಿಯನ್ ಡಾಲರ್ ಭಾರತಕ್ಕೆ ವಿದೇಶಿ ವಿನಿಮಯ ನೀಡಿದರೆ, 2022 ರಲ್ಲಿ ಶೇ.12 ರಷ್ಟು ಏರಿಕೆಯಾಗಿದೆ. ಜಗತ್ತಿನಲ್ಲಿ ಅತೀ ಹೆಚ್ಚು ವಿದೇಶಿ ವಿನಿಮಯ ತಮ್ಮ ಮಾತೃಭೂಮಿ ತರುವವರಲ್ಲಿ ಭಾರತೀಯರು ಅಗ್ರಸ್ಥಾನದಲ್ಲಿದ್ದಾರೆ.**

ವಿದೇಶಕ್ಕೆ ವಲಸೆ ಹೋಗುವ ಪ್ರಮಾಣ ಹೆಚ್ಚಳ

ಭಾರತದ ಆರ್ಥಿಕತೆ ಸುಧಾರಣೆಯಾಗಿರುವ ಕಾರಣ ಲಕ್ಷಾಂತರ ಭಾರತೀಯರು ಉನ್ನತ ಶಿಕ್ಷಣ, ಕೌಶಲ್ಯಯುಕ್ತ ಕ್ಷೇತ್ರಗಳಲ್ಲಿ ಉದ್ಯೋಗ ಹೊಂದಲು, ಉದ್ಯಮ ಆರಂಭಿಸಲು ವಿಕಸಿತ ದೇಶಗಳಿಗೆ ವಲಸೆ ಹೋಗಲಾರಂಭಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರಕಾರವು ಇತ್ತೀಚೆಗೆ ಚಕಿತಗೊಳಿಸುವ ಅಂಕಿ ಸಂಖ್ಯೆಗಳನ್ನು ಪ್ರಕಟಿಸಿದೆ. ಉದ್ಯೋಗಕ್ಕಾಗಿ 2019ರಲ್ಲಿ 25,25,328, ವರ್ಷ 2020ರಲ್ಲಿ ಕೊರೊನಾ ನಿಮಿತ್ತ ಕುಸಿತಗೊಂಡ ಸಂಖ್ಯೆ 715733, ವರ್ಷ 2021ರಲ್ಲಿ 833880, 2022 ಅಕ್ಟೋಬರ್ ಅಂತ್ಯಕ್ಕೆ 2143873 ಭಾರತೀಯರು ವಿದೇಶಗಳಿಗೆ ತೆರಳಿದ್ದಾರೆ. ಅದೇ ರೀತಿ ಹೊಸ ಉದ್ಯಮ ಆರಂಭಿಸಲು, ಉದ್ಯಮಗಳನ್ನು ವಿಸ್ತರಿಸಲು 2019ರಲ್ಲಿ 14,67,537 ಮಂದಿ, 2020ರಲ್ಲಿ 265433, ವರ್ಷ 2021ರಲ್ಲಿ 126611, ವರ್ಷ 2022ರ ಅಕ್ಟೋಬರ್ ಅಂತ್ಯಕ್ಕೆ 464275 ಭಾರತೀಯರು ಅಭಿವೃದ್ಧಿ ದೇಶಗಳಿಗೆ ವಲಸೆ ಹೋಗಿದ್ದಾರೆ.

ಪ್ರತಿ ವರ್ಷ ಅಭಿವೃದ್ಧಿ ದೇಶಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಲಕ್ಷಾಂತರ ವಿದ್ಯಾರ್ಥಿಗಳು ಭಾರತದಿಂದ ತೆರಳುತ್ತಿದ್ದಾರೆ. ಉನ್ನತ ಶಿಕ್ಷಣಕ್ಕಾಗಿ 2019ರಲ್ಲಿ 586329 ವಿದ್ಯಾರ್ಥಿಗಳು, 2020ರಲ್ಲಿ 259644, 2021ರಲ್ಲಿ 444574 ಹಾಗೂ 2022 ಅಕ್ಟೋಬರ್‌ವರೆಗೆ 6,48,678 ವಿದ್ಯಾರ್ಥಿಗಳು ವಿಕಸಿತ ದೇಶಗಳಿಗೆ ಹೋಗಿರುತ್ತಾರೆ. ಪ್ರಪಂಚದ ನೂರಾರು ದೇಶಗಳಿಗೆ ಉದ್ಯೋಗ, ವ್ಯವಹಾರ, ಸಂಶೋಧನೆ, ಸೇವಾ ಮನೋಭಾವದಿಂದ ವಲಸೆ ಹೋಗುತ್ತಿರುವ ಭಾರತೀಯರು ತಮಗೆ ಆಶ್ರಯ ನೀಡಿದ ದೇಶಗಳ ಅಭಿವೃದ್ಧಿಗೆ ಮೌಲ್ಯಯುತ ಕೊಡುಗೆ ನೀಡುವುದರೊಂದಿಗೆ ಭಾರತಕ್ಕೂ ಆರ್ಥಿಕ ಶಕ್ತಿ ನೀಡಿದ್ದಾರೆ. ಇತ್ತೀಚೆಗೆ ವಿಶ್ವ ಬ್ಯಾಂಕ್ ಪ್ರಕಟಿಸಿದ ವರದಿಯಲ್ಲಿ 2021 ರಲ್ಲಿ ಭಾರತೀಯರು 89.40 ಬಿಲಿಯನ್ ಡಾಲರ್ ಭಾರತಕ್ಕೆ ವಿದೇಶಿ ವಿನಿಮಯ ನೀಡಿದರೆ, 2022ರಲ್ಲಿ ಶೇ.12 ರಷ್ಟು ಏರಿಕೆಯಾಗಿದೆ. ಜಗತ್ತಿನಲ್ಲಿ ಅತೀ ಹೆಚ್ಚು ವಿದೇಶಿ ವಿನಿಮಯ ತಮ್ಮ ಮಾತೃಭೂಮಿ ತರುವವರಲ್ಲಿ ಭಾರತೀಯರು ಅಗ್ರಸ್ಥಾನದಲ್ಲಿದ್ದಾರೆ.

ನಿರ್ಮಲಾ ಸೀತಾರಾಮನ್ ಹೇಳಿಕೆ

ಪ್ರವಾಸಿ ಭಾರತೀಯ ದಿವಸ್ ಸಮ್ಮೇಳನದಲ್ಲಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅನಿವಾಸಿ ಭಾರತೀಯರ ಕೊಡುಗೆ ಬಗ್ಗೆ ಉಲ್ಲೇಖಿಸುತ್ತಾ ಕೊರೊನೋತ್ತರ ಕಾಲದಲ್ಲಿ ಶ್ರಮಿಕರು, ಮತ್ತೆ ವಿದೇಶಗಳಿಗೆ ಹೋಗಲಾರರೆಂದು ಸರಕಾರ ಭಾವಿಸಿತ್ತು. ಆದರೆ ಭಾರತೀಯರು ಮತ್ತೆ ವಿದೇಶಗಳಿಗೆ ತೆರಳಿ ಉದ್ಯೋಗ ಪಡೆದು ಉದ್ಯಮಗಳನ್ನು ಪ್ರಾರಂಭಿಸುವುದರೊಂದಿಗೆ 2022ರಲ್ಲಿ ತಾಯ್ನಾಡಿಗೆ ಅಂದಾಜು ಶೇ.12 ರಷ್ಟು ಹೆಚ್ಚುವರಿ ಅಂದರೆ 100 ಬಿಲಿಯನ್ ಡಾಲರ್ ವಿದೇಶಿ ವಿನಿಮಯವನ್ನು ತಂದಿದ್ದಾರೆ. ಪ್ರಸ್ತುತ ಭಾರತೀಯ ಕಾರ್ಮಿಕರು, ವೃತ್ತಿಪರರು, ಮಾಹಿತಿ–ಡಿಜಿಟಲ್ ತಂತ್ರಜ್ಞಾನ, ಆಟೋಮೊಬೈಲ್, ಸೆಮಿಕಂಡಕ್ಟರ್ ವಿನ್ಯಾಸ, ಫಾರ್ಮಾ ಉತ್ಪಾದನೆ ಸೇರಿದಂತೆ ಅನ್ಯಾನ್ಯ ಕ್ಷೇತ್ರಗಳಲ್ಲಿ ಅಸಾಮಾನ್ಯ ಸಾಧನೆಗೈಯ್ಯುವ ಮೂಲಕ ಭಾರತವನ್ನು ಜಾಗತಿಕ ಜ್ಞಾನ ಮತ್ತು ಪ್ರಗತಿಯ ಕೇಂದ್ರವಾಗಿ ಪರಿವರ್ತಿಸಿದ್ದಾರೆಂದು ಶ್ಲಾಘಿಸಿದ್ದರು.

ದೇಶದ ಅತ್ಯುತ್ತಮ 10 ಸಂಸ್ಥೆಯಲ್ಲಿ ಜೆಎಸ್‌ಎಸ್ ಔಷಧಶಾಸ್ತ್ರ ಮಹಾವಿದ್ಯಾಲಯವೂ ಒಂದು

ಈ ಮಹಾ ಸಂಸ್ಥೆಗೀಗ ಸುವರ್ಣ ಮಹೋತ್ಸವ ಸಂಭ್ರಮ

ಡಾ. ರಾಜೇಂದ್ರ ಶ್ರೀಗಳ ಪರಂಪರೆಯನ್ನು ಮುಂದುವರೆಸಿರುವ ಈಗಿನ ಸುತ್ತೂರು ಶ್ರೀಗಳ ಪರಿಶ್ರಮ ಮತ್ತು ದೂರದೃಷ್ಟಿಯ ಫಲವಾಗಿ ಭಾರತದ ಶೈಕ್ಷಣಿಕ ನಕ್ಷೆಯಲ್ಲಿ ಮೈಸೂರಿಗೆ ಪ್ರಮುಖ ಸ್ಥಾನ ಸಿಕ್ಕಿದೆ. ನರ್ಸರಿ ಇಂದ ಹಿಡಿದು ಹಲವಾರು ವೃತ್ತಿಪರ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ಜೆಎಸ್‌ಎಸ್ ಅನೇಕ ರೀತಿಯಲ್ಲಿ ಮಾದರಿಯಾಗಿದ್ದು, ಮುಂಚೂಣಿಯಲ್ಲಿದೆ.

1973 ರಲ್ಲಿ ಫಾರ್ಮಸಿ ಶಿಕ್ಷಣ ಪ್ರಾರಂಭವಾಯ್ತು. ಆಸ್ಪತ್ರೆಯಲ್ಲಿನ ಫಾರ್ಮಸಿ ಮತ್ತು ಸಮಾಜದಲ್ಲಿನ ಔಷಧ ಶಾಸ್ತ್ರದ ಬೇಡಿಕೆಯನ್ನು ಮನಗಂಡ ಡಾ ಶಿವರಾತ್ರಿ ರಾಜೇಂದ್ರ ಶ್ರೀಗಳು, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ (ಹಿಂದಿನ ಜೆಎಸ್‌ಎಸ್ ವಿಶ್ವವಿದ್ಯಾನಿಲಯ) ಅಂಗಸಂಸ್ಥೆಯಾದ ಜೆಎಸ್‌ಎಸ್ ಔಷಧ ಶಾಸ್ತ್ರ ಕಾಲೇಜನ್ನು ಮೈಸೂರಿನ ರಾಮಾನುಜ ರಸ್ತೆಯಲ್ಲಿನ ಒಂದು ಸಣ್ಣ ಸೂರಿನಲ್ಲಿ ಸ್ಥಾಪಿಸಿದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧೀನದಲ್ಲಿದ್ದ, ಈ ಸಂಸ್ಥೆ ಆರೋಗ್ಯ ವಿಜ್ಞಾನ ಶಿಕ್ಷಣವನ್ನು ನೀಡುವ ಮೊದಲ ಸಂಸ್ಥೆಯೂ ಆಗಿತ್ತು.

ದೇಶದ ಬಹುತೇಕರಿಗೆ ಫಾರ್ಮಸಿ ಎಂದರೇನು ಗೊತ್ತಿಲ್ಲದ ಸಮಯದಲ್ಲಿ ಸ್ಥಾಪಿತಗೊಂಡ ಈ ಕಾಲೇಜು, ಇದೀಗ ದೇಶದ ಟಾಪ್ ಹತ್ತು ಫಾರ್ಮಸಿ ಕಾಲೇಜುಗಳ ಪೈಕಿ ಒಂದೆನಿಸಿದೆ. ಹೀಗೆ ಮೊದಲು ಡಿಪ್ಲೊಮಾ ಇನ್ ಫಾರ್ಮಸಿಯಿಂದ ಪ್ರಾರಂಭಗೊಂಡು ಹತ್ತು ವರುಷಗಳ ನಂತರ ಡಿಗ್ರಿ ಪದವಿಯನ್ನು ಪ್ರಾರಂಭಿಸಿತು. 1983ರಲ್ಲಿ ನಾಲ್ಕು ವರ್ಷಗಳ ಬಿ.ಫಾರ್ಮಾ ಪದವಿ ಪ್ರಾರಂಭಿಸಿ, ಇದರಿಂದ ಔಷಧ ತಯಾರಿಕಾ ಸಂಸ್ಥೆಗಳ, ಔಷಧ ನಿಯಂತ್ರಣ ಇಲಾಖೆ, ಆಸ್ಪತ್ರೆ ಮತ್ತು ಔಷಧಶಾಸ್ತ್ರ ಬೋಧಕ ಸಿಬ್ಬಂದಿಯನ್ನು ಬೇಡಿಕೆಗನುಗುಣವಾಗಿ ಪೂರೈಸುವಲ್ಲಿ ತನ್ನ ರೂಪು ರೇಷೆಗಳನ್ನು ಸಿದ್ದಪಡಿಸಿತು.

ಹೀಗೆ ಪ್ರಾರಂಭಗೊಂಡ ಜೆಎಸ್‌ಎಸ್ ಫಾರ್ಮಸಿ ಕಾಲೇಜು 1987ರಲ್ಲಿ ತನ್ನ ಮೊದಲ ಬಿ.ಫಾರ್ಮಾ ವಿದ್ಯಾರ್ಥಿಗಳ ಪದವಿಯನ್ನು ಪೂರೈಸಿಕೊಡುವಲ್ಲಿ ಸೈ ಎನಿಸಿಕೊಂಡಿತ್ತು. ಮೈಸೂರಿನ ಬನ್ನಿಮಂಟಪದ 12 ಎಕರೆ ಪ್ರದೇಶದಲ್ಲಿ ಸುಮಾರು 2 ಕೋಟಿ ರೂ. ಗಳ ಅಂದಾಜು ವೆಚ್ಚದಲ್ಲಿ 1,50,000 ಚದರಡಿಗಳ ಕಾಲೇಜನ್ನು ಹೊಸದಾಗಿ ನಿರ್ಮಿಸಲು ಇಂದಿನ ಶಿವರಾತ್ರಿ ದೇಶಿಕೇಂದ್ರ ಶ್ರೀಗಳು ನಿರ್ಧರಿಸಿ ಭೂಮಿ ಪೂಜೆಯನ್ನು 13ನೇ ಮೇ 1988 ರಲ್ಲಿ ನೆರವೇರಿಸಿಯೇ ಬಿಟ್ಟರು. ಇದಾಗಿ 3 ವರುಷಗಳ ನಂತರ ಅಂದರೆ, 18.1.1991 ರಂದು, ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಹೊಸ ಕಟ್ಟಡದ ಉದ್ಘಾಟನೆಯನ್ನು ಭಾರತದ ಅಂದಿನ ಉಪ ಪ್ರಧಾನಿ ದೇವಿಲಾಲ್ ಅವರು, ಕರ್ನಾಟಕದ ರಾಜ್ಯಪಾಲರಾಗಿದ್ದ ಖುರ್ಷಿದ್ ಅಲಂಖಾನ್ ಮತ್ತು ಮುಖ್ಯಮಂತ್ರಿಗಳಾದ ಎಸ್. ಬಂಗಾರಪ್ಪ ನವರ ಉಪಸ್ಥಿತಿಯಲ್ಲಿ ನೆರವೇರಿಸಲಾಯಿತು. ಹೀಗೆ ನಡೆದು ಬಂದ ಜೆಎಸ್‌ಎಸ್ ಫಾರ್ಮಸಿ ಕಾಲೇಜ್, ಆಸ್ಟ್ರೇಲಿಯಾ ದೇಶದೊಡನೆ ಶೈಕ್ಷಣಿಕ ಒಪ್ಪಂದವನ್ನು ಮಾಡಿಕೊಂಡು ಸ್ನಾತಕೋತ್ತರ ಫಾರ್ಮಸಿ ಎಂ.ಫಾರ್ಮ್ ಕೂಡಾ ಪ್ರಾರಂಭಿಸಿದ್ದು ಇತಿಹಾಸ.

ಜೆಎಸ್‌ಎಸ್ ಕಾಲೇಜಿಗೆ 1993 ರಲ್ಲಿ ಅಖಿಲ ಭಾರತ ವೃತ್ತಿಶಿಕ್ಷಣ ಮಂಡಳಿಯ ಮಾನ್ಯತೆ ಕೂಡ 1993 ರಲ್ಲೇ ದೊರಕಿತು. ಇದೇ ವರ್ಷ ನವೆಂಬರ್‌ನಲ್ಲಿ ಮೈಸೂರು ವಿವಿ ಈ ಸಂಸ್ಥೆಯನ್ನು ಫಾರ್ಮಸಿ ವಿಜ್ಞಾನದಲ್ಲಿನ ಸಂಶೋಧನಾ ಕೇಂದ್ರವೆಂದು ಪರಿಗಣಿಸಿತು. ಇದರ ಮುಂದುವರಿಕೆಯಾಗಿ 1996 ರಲ್ಲಿ ವಿಶ್ವವಿದ್ಯಾನಿಲಯ ಧನಸಹಾಯ ಅಯೋಗವು ಈ ಸಂಸ್ಥೆಗೆ ಶಾಶ್ವತ ಬಾಂಧವ್ಯವನ್ನು ನೀಡಿತ್ತು.

ಜೆಎಸ್‌ಎಸ್ ವಿಶ್ವವಿದ್ಯಾನಿಲಯವು ಜೂನ್ 2008ರಲ್ಲಿ ಘೋಷಣೆ ಆಗುವವರೆಗೂ ಜೆಎಸ್‌ಎಸ್ ಫಾರ್ಮಸಿ ಕಾಲೇಜು 1997 ರಿಂದ 2007 ರವರೆಗೂ ರಾಜೀವ್ ಗಾಂಧಿ ಆರೋಗ್ಯ ವಿವಿಯ ವ್ಯಾಪ್ತಿಗೊಳಪಟ್ಟಿತ್ತು. ಜೂನ್ 2008 ರಲ್ಲಿ ಯುಜಿಸಿಯ ಕಲಂ 3 ರಡಿ ಸ್ಥಾಪಿತವಾದ ಜೆಎಸ್‌ಎಸ್ ವಿವಿಯಡಿಯಲ್ಲಿ ಜೆಎಸ್‌ಎಸ್ ಫಾರ್ಮಸಿ ಕಾಲೇಜು ವಿವಿಯ ಅಂಗ ಸಂಸ್ಥೆಯಾಗಿ ಹೊರಹೊಮ್ಮಿತು. ಅಂದು ವಿವಿಯ ಉಪಕುಲಪತಿಗಳಾಗಿದ್ದ ಡಾ.ಬಿ.ಸುರೇಶ್‌ರವರ ಶ್ರಮದಿಂದಾಗಿ ದೇಶದಲ್ಲಿ ಮೊಟ್ಟಮೊದಲ ಬಾರಿಗೆ ಫಾರ್ಮ್–ಡಿ ಎಂಬ ಆರು ವರುಷಗಳ ಫಾರ್ಮಸಿ ಕೋರ್ಸ್ ಅನ್ನು ಪ್ರಾರಂಭಿಸಲಾಯಿತು. ಇದಕ್ಕೆ ಅಮೆರಿಕೆಯ ಫಾರ್ಮಸಿ ಶಿಕ್ಷಣ ದೃಢೀಕರಣ ಮಂಡಳಿ ಅಂದರೆ, ಎ.ಸಿ.ಪಿ.ಇ. ಕೂಡ ಮಾನ್ಯತೆ ನೀಡಿ ಗೌರವಿಸಿತ್ತು. ಈ ಮಾನ್ಯತೆ ಪಡೆಯಲು ಸಂಸ್ಥೆ ಹತ್ತು ಹಲವು ಕಠಿಣ ಸವಾಲುಗಳನ್ನು ಎದುರಿಸ ಬೇಕಾಗಿತ್ತು. ಜೆಎಸ್‌ಎಸ್ ಫಾರ್ಮಸಿ ಕಾಲೇಜು ಮೊದಲ ಬಾರಿಗೆ ಐಎಸ್‌ಓ ಪ್ರಮಾಣ ಪತ್ರವನ್ನು ಕೂಡ 2010 ರಲ್ಲಿ ಪಡೆದ ಹೆಗ್ಗಳಿಕೆ ಮೆರೆದಿದೆ. ಜೆಎಸ್‌ಎಸ್ ಫಾರ್ಮಸಿ ಕಾಲೇಜು ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯದ ರಾಷ್ಟ್ರೀಯ ಸಂಸ್ಥೆಗಳ ರ್‍ಯಾಂಕಿಂಗ್ ಚೌಕಟ್ಟಿನಡಿಯಲ್ಲಿ ಸತತವಾಗಿ 2016 ರಿಂದಲೂ ದೇಶದ ಟಾಪ್ ಹತ್ತು ಫಾರ್ಮಸಿ ಕಾಲೇಜುಗಳ ಪೈಕಿ ಒಂದೆನಿಸಿದೆ.

2017 ರಲ್ಲಿ ಶೆಡ್ಯೂಲ್ ಸಿ ಮತ್ತು ಸಿ1 ಔಷಧಗಳನ್ನು ಹೊರತುಪಡಿಸಿದ ಎಲ್ಲ ಔಷಧಗಳನ್ನು ಪರೀಕ್ಷಿಸುವಂತೆ ಔಷಧ ಪರೀಕ್ಷಾ ಕೇಂದ್ರವನ್ನು ರಾಜ್ಯ ಸರ್ಕಾರದ ಔಷಧ ನಿಯಂತ್ರಣ ಇಲಾಖೆಯವರು ಅನುಮೋದಿಸಿದ್ದಾರೆ. ಇಲ್ಲಿಯ ಔಷಧ ಪರೀಕ್ಷಾ ಕೇಂದ್ರವು ದಶಕದಿಂದಲೂ ಉತ್ತಮ ಗುಣಮಟ್ಟದ ಔಷಧಿಗಳು, ಎಪಿಐಗಳು ಮತ್ತು ಇತರೆ ಶೆಡ್ಯೂಲ್ಡ್ ಡ್ರಗ್ಗಳ ತಯಾರಿಕೆಗಳ ಬಗ್ಗೆ ಪರಿಶೀಲನೆ ನಡೆಸಿ ವರದಿ ನೀಡುತ್ತಿದೆ.

ಕ್ಲಿನಿಕಲ್ ಸೇವಾ ಅಭಿವೃದ್ಧಿ ಸಂಸ್ಥೆ ಕೂಡಾ ತನ್ನ ಕ್ಲಿನಿಕಲ್ ಪ್ರಯೋಗಗಳಿಗಾಗಿ ಈ ಸಂಸ್ಥೆಯನ್ನು ಆಯ್ಕೆ ಮಾಡಿ, ದೇಶದ ಹಲವಾರು ಔಷಧ ಸಂಶೋಧನೆ, ಮತ್ತು ಅಭಿವೃದ್ಧಿ ಕೆಲಸಗಳಿಗಾಗಿ ಮಾನ್ಯತೆ ನೀಡಿದೆ.

ಪ್ರಸ್ತುತ ಈ ಸಂಸ್ಥೆ ಬಿ.ಫಾರ್ಮ್ (4 ವರುಷ) ಎಂ.ಫಾರ್ಮ್ (2 ವರುಷ)ಗಳ ಕೋರ್ಸುಗಳನ್ನು ಹನ್ನೆರಡು ವಿಶೇಷತೆಗಳಲ್ಲಿ ಮತ್ತು ಪಿ.ಹೆಚ್.ಡಿ ಯನ್ನು ಕೂಡ ನಿರ್ವಹಿಸುತ್ತಿದೆ. ಅತ್ಯಂತ ಅರ್ಹ ಮತ್ತು ಸಮರ್ಪಣಾ ಮನೋಭಾವದ 52 ಬೋಧಕ ಮತ್ತು 46 ಬೋಧಕೇತರ ಸಿಬ್ಬಂದಿಯನ್ನು ಹೊಂದಿರುವ, ಸುಸಜ್ಜಿತವಾದ ಪ್ರಯೋಗಾಲಯ ಮತ್ತು ಉನ್ನತ ತಾಂತ್ರಿಕತೆಯ ಉಪಕರಣಗಳನ್ನುಳ್ಳ ಜೆಎಸ್‌ಎಸ್ ಫಾರ್ಮಸಿ ಕಾಲೇಜು, ವಿದ್ಯಾರ್ಥಿಗಳಿಗೆ ಪದವಿ, ಸ್ನಾತಕೋತ್ತರ ಮತ್ತು ಡಾಕ್ಟರೇಟ್ ಹಂತಗಳಲ್ಲಿ ಉತ್ತಮ ಗುಣಮಟ್ಟದ ತರಬೇತಿ ಮತ್ತು ಶಿಕ್ಷಣವನ್ನು ನೀಡುತ್ತಿದೆ. ಅತ್ಯಾಧುನಿಕ ಔಷಧ ತಯಾರಿಕೆ ವ್ಯವಸ್ಥೆಗಳನ್ನು ವಿನ್ಯಾಸಗೊಳಿಸುವಲ್ಲಿ ಮತ್ತು ಅಭಿವೃದ್ಧಿಗೊಳಿಸುವಲ್ಲಿ, ಮೌಲ್ಯೀಕರಣದ ಶಿಷ್ಟಾಚಾರಗಳನ್ನು ವಿಕಾಸಗೊಳಿಸುವಲ್ಲಿ ಹಾಗೂ ಸೂತ್ರೀಕರಣ ವಿಕಾಸದಲ್ಲಿ ಸಹಭಾಗಿತ್ವದ ಯೋಜನೆಗಳನ್ನು ಕೈಗೊಳ್ಳುವುದು ಸಾಧ್ಯ ಎನ್ನುತ್ತಾರೆ ಡಾ. ಪ್ರಮೋದ್ ಕುಮಾರ್.

ಕಾಲೇಜು ಇದುವರೆಗೂ ಏಳು ಮಂದಿ ಪ್ರಾಂಶುಪಾಲರನ್ನು ಕಂಡಿದೆ. ಸುವರ್ಣ ಮಹೋತ್ಸವ ಅಂಗವಾಗಿ ಸಂಸ್ಥೆ ಸುವರ್ಣೋತ್ಸವ ಭವನ, ಹಿಂದಿನ ಪ್ರಾಂಶುಪಾಲರು ಮತ್ತು ಸಂಸ್ಥೆಗೆ ದುಡಿದ ಮಹನೀಯರನ್ನು ಸನ್ಮಾನಿಸುವುದು. ಸ್ಮರಣ ಸಂಚಿಕೆ ಬಿಡುಗಡೆ, ಸಾಹಿತ್ಯ, ಶೈಕ್ಷಣಿಕ ಸಾಂಸ್ಕೃತಿಕ ವಿಚಾರ ಸಂಕಿರಣಗಳಲ್ಲದೇ, ಮತ್ತಿತರ ಹಲವಾರು ವೈವಿಧ್ಯಮಯ ಕಾರ್ಯಕ್ರಮಗಳನ್ನು ಸತತ ಒಂದು ವರುಷ ಆಚರಿಸಲು ಉದ್ದೇಶಿಸಿದೆ.

–ವಿಜಯ್ ಹೆಮ್ಮಿಗೆ, ಮೈಸೂರು





Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಹುಡುಗ / ಹುಡುಗಿಯರು ಬೇಕಾಗಿದ್ದಾರೆ.
ಸಂಬಳ: 12,000/–
8892258814

HOUSE FOR SALE
20x30 West Facing Old House for Sale in Ramakrishna Nagar H - block, Mysore.
Price : 42 Lakhs.
7348958463

ಮಾರಾಟಕ್ಕಿದೆ
ಉತ್ತಮ ಸ್ಥಿತಿಯಲ್ಲಿರುವ ಪ್ರಾವಿಷನ್ ಸ್ಟೋರ್ ಮಾರಾಟಕ್ಕಿದೆ. ತಿಂಗಳಿಗೆ ವಹಿವಾಟು 3 ರಿಂದ 3.50 ಲಕ್ಷದವರೆಗೆ ಸ್ಥಳ: ಸೆಂಟ್ ಮೇರಿಸ್ ರಸ್ತೆ, ಕರುಣಾಪುರ, ಎನ್.ಆರ್.ಮೊಹಲ್ಲಾ, ಮೈಸೂರು
8310195023

ದೈವಕೃಪಾ
ಎಲ್ಲಾ ಜನಾಂಗದ ಎಲ್ಲಾ ವಿದ್ಯೆಯ ಗ್ರಾಮೀಣ ಪ್ರದೇಶಗಳ ಸುತ್ತಮುತ್ತ ಹಳ್ಳಿಗಳ ಕನ್ನಡ, ತಮಿಳ್, ತೆಲುಗು, ಮರಾಠ ವಧು ವರರಿಗೆ ಹಾಗೂ 2ನೇ ಸಂಬಂಧಕ್ಕೆ ಕೂಡಲೇ ಸಂಪರ್ಕಿಸಿ. ಪುಟ್ಟಸ್ವಾಮಿ OIC Rtd ನಂ. 535/ಎ, 1ನೇ ಮುಖ್ಯರಸ್ತೆ, 13ನೇ ಕ್ರಾಸ್, ಬಿ.ಎಂ.ಶ್ರೀನಗರ, ಮೇಟಗಳ್ಳಿ, ಮೈಸೂರು – 16
9902802154

2 BHK MUDA APPROVED 30x40
NEW HOUSE FOR SALE
NEAR ST. JOSEPH SCHOOL, ILWALA, MYSORE.
8217851695

HOUSE FOR SALE
30x40, North Facing, Vivekananda Nagar, Mysore.
Contact No.
8951421846

ಫ್ರಿಡ್ಜ್, ವಾಷಿಂಗ್ ಮಷಿನ್, ಮೈಕ್ರೋ ಓವನ್, LCD, LED TVs
Doorstep Service
Mob: 9886226672

ಮನೆಯಲ್ಲಿ ಕೆಲಸ ಮಾಡುವವರಿಗೆ
ಅಡುಗೆ ಕೆಲಸ ಹಾಗೂ ಮನೆ ಕೆಲಸ ಮಾಡುವವರು ಬೇಕಾಗಿದ್ದಾರೆ. ಸ್ಥಳ: ರಾಜಕುಮಾರ್ ರಸ್ತೆ, ಶಕ್ತಿನಗರ ಹತ್ತಿರ, ಉತ್ತಮ ಸಂಬಳ ದೊರೆಯುತ್ತದೆ. ಕೂಡಲೇ ಬೇಕಾಗಿದ್ದಾರೆ. ಆಸಕ್ತಿಯುಳ್ಳವರು ಸಂಪರ್ಕಿಸಿ:
9036709090

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಆಟೋ ಮೊಬೈಲ್ ಕಂಪನಿಗೆ ಬೇಕಾಗಿದ್ದಾರೆ.
* ಮಾರ್ಕೆಟಿಂಗ್ ಸೇಲ್ಸ್ ಎಕ್ಸಿಕ್ಯೂಟಿವ್
Freshers - Any Degree
(Experienced can also apply)
Email ID: starmysoreresume@gmail.com
ಕೂಡಲೇ ಸಂಪರ್ಕಿಸಿ:
9980751999

WANTED Accountant
For Factory In Mandya
Minimum 3 Year's Experience
GOOD SALARY ONLY MALE
Ph : 8105586679, 9008580560

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನಲ್ಲಿರುವ ಅಡಕನಹಳ್ಳಿ ಮತ್ತು ಕಡಕೊಳ ಇಂಡಸ್ಟ್ರಿಗಳಿಗೆ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
9740324112 / 9035269781
0821-4852002 / 2303459

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೇಕಾಗಿದ್ದಾರೆ
ಅನುಭವಿ ಕೌಂಟರ್ (Counter) ಪಾರ್ಸೆಲ್ (Parcel) ಮತ್ತು ಟೀ, ಕಾಫೀ, ಚಾಟ್ಸ್‌ಗೆ ಮತ್ತು ತಂದೂರ್ ರೋಟಿ ಚೆಫ್ (Tandoor Roti Cook) K D ರೋಡ್‌ನ ರೆಸ್ಟೋರೆಂಟ್‌ನಲ್ಲಿ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಉತ್ತಮ ಸೌಲಭ್ಯ, ವಸತಿ ಸೌಕರ್ಯ ಕೊಡಲಾಗುವುದು. ಸಂಪರ್ಕಿಸಿ:
8884066266

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
Mob: 9108566022

WANTED
Lady Office assistant for a Doctors Clinic with Basic Computer Knowledge residing nearby Kuvempunagar,
Contact:
8762277008

ಬೇಕಾಗಿದ್ದಾರೆ
ಮೈಸೂರಿನ ಬೆಳವಾಡಿ, ಹೂಟಗಳ್ಳಿ ಹಾಗೂ ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿ ಕಾರ್ಯ ನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್ ಮತ್ತು ಹೌಸ್‌ಕೀಪಿಂಗ್ ಕೆಲಸಕ್ಕೆ ಅಭ್ಯರ್ಥಿಗಳು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
9739199355

HOUSE FOR SALE
Built in 1997, 1236 sqft., semi corner (North & East Face) GF 4 BHK, FF 2 BHK, 2nd Floor 3 BHK with 35 K Rent approximate at FTS Circle (Ambedkar Circle) near Regalia Hotel, Forum Mall Road, N.R. Mohalla, Mysore.
Price: 1.12 Cr (Slightly Negotiable)
Brokers Excuse.
Contact : 8722965850/ 9535872293/9845725638

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೊರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

NUETECH SOLAR WATER HEATER

ಬಿಸಿ ನೀರಿನ ಸಮಸ್ಯೆಗೆ ಹಾಗೂ ದೀರ್ಘ ಕಾಲದ ಬಾಳಿಕೆಗಾಗಿ ಹಾಗೂ 10 ವರ್ಷ ವಾರಂಟಿ.
Company Super Stockist
USHA KIRAN AGENCY
9844069190

HOUSE FOR SALE
45x60, S/F, G/F, 2BHK, 1st Floor 3BHK with Car Parking & Solar, Alanahalli Extension, T.Narasipura Main Road, Mysore. Brokers Excuse.
9538756306

HOME LOAN (ಮನೆ ಸಾಲ)
9 & 11A, 11B, ಪುರಸಭೆ, ನಗರಸಭೆ, ಮುಡಾ, ಕಾರ್ಪೋರೇಷನ್ ನಿವೇಶನ ಮತ್ತು ಮನೆಗಳಿಗೆ ಮನೆ ಕಟ್ಟಲು, ಮನೆ ಅಡಮಾನ, ಮನೆ ನವೀಕರಣ, ಸೈಟು ಮತ್ತು ಮನೆ ಖರೀದಿಸಲು ಸಾಲ ಸೌಲಭ್ಯ ಒದಗಿಸಿಕೊಡಲಾಗುವುದು. ಸಂಪರ್ಕಿಸಿ:
9148612808, 6360457224

HOUSE FOR RENT
First Floor,1BHK Corner House with Solor water Heater at J.P.Nagar, 'A' Block, Mysuru.
Brokers Excuse
8970898949 / 9844061296

FOR SALE
1) 30x40 30x50 sites in Defence Apartment Near Kote Road
2) 28 Guntas Land in Varkodu Bannur and TNP Road Near
3) 17/60 3 BHK Kamakshi Hospital Near Saraswathi Puram
4) 40x60 KC Layout
5) 30x40 Duplex House Srirampura
90359 90359 / 95386 90359

ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರೋಡ್ ಶ್ರೀನಗರ ಹಿಂಭಾಗ ಮೈಸೂರು
8050345574

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

LOANS
ಮನೆ ಸಾಲ – ನಿವೇಶನ ಸಾಲ
11ಎ ಮತ್ತು 11ಬಿ, ಮನೆ ಸಾಲ ಹಾಗೂ ಪ್ರಾಪರ್ಟಿ ಸಾಲ, ವ್ಯಾಪಾರ ಸಾಲ ಮಾಡಿಕೊಡಿಸಲಾಗುವುದು. ಬ್ಯಾಂಕ್‌ನಿಂದ ಮತ್ತೊಂದು ಬ್ಯಾಂಕಿಗೆ ವರ್ಗಾವಣೆ ಮಾಡಿಸಲಾಗುವುದು.
7975453083 / 7259784408

ಮನೆ ಮಾರಾಟಕ್ಕಿದೆ
ಪೂರ್ವ ದಿಕ್ಕು, ವಾಸ್ತುಪ್ರಕಾರ ನಿರ್ಮಿಸಿರುವ 35X15 ಅಳತೆಯ 3 ಅಂತಸ್ತಿನ ಮನೆ ನಿರ್ಮಿಸಿ 2 ವರ್ಷವಾಗಿದೆ ತಿಂಗಳಗೆ 24 ಸಾವಿರ ಬಾಡಿಗೆ ಬರುತ್ತದೆ ಸ್ಥಳ: NIE ಕಾಲೇಜ್ ಹತ್ತಿರ, ವಿದ್ಯಾರಣ್ಯಪುರಂ, ಮೈಸೂರು. ಬಾಂಕಿನಿಂದ ಸಾಲ ಸೌಲಭ್ಯವಿದೆ ಕೊಳ್ಳುವವರು ಮಾತ್ರ ಸಂಪರ್ಕಿಸಿ:
9900299714

ಬೇಕಾಗಿದ್ದಾರೆ
ಮೈಸೂರು ನಗರದ ದೇವೇಗೌಡ ಸರ್ಕಲ್ ಹತ್ತಿರ MNC ಕಂಪನಿಯಲ್ಲಿ, ಹೆಬ್ಬಾಳ್ ಇಂಡಸ್ಟ್ರೀಯಲ್ ಕಂಪನಿಗಳಲ್ಲಿ ಕೆಲಸ ಮಾಡಲು SSLC ಪಾಸಾಗಿದ್ದು, ಅನುಭವಿರುವ ಗಾರ್ಡ್‌ಗಳು ಹಾಗೂ ಶ್ರೀರಂಗಪಟ್ಟಣದ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡಲು ಲೇಡಿಗಾರ್ಡ್, ತಕ್ಷಣ ಬೇಕಾಗಿದ್ದಾರೆ.
9035050656, 9035050653

ಬೇಕಾಗಿದೆ
ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ಗೋಪಾಲಗೌಡನಗರ ಹಾಗೂ ಲಲಿತಾದ್ರಿನಗರಗಳಲ್ಲಿ ಸೈಟುಗಳು ಬೇಕಾಗಿದೆ.
20x30, 30x40
9900125239

WANTED
(Female) Receptionist (Hotel)Front Office Executive. Qualification: Any Degree with Computer Knowledge, Accounting & Good English. J P Nagar, Mysore
9686225522

BUY / SELL OLD HOUSES
in Jayanagara, Laxmipuram, Kuvempunagar, S.Puram, T.K. layout, Vidyaranyapuram Ontikoppal, Yadavagiri, Gokulam, Siddarth Lyt
30X40, 40X60 / also in any area
Call - 98866 97052
ಮಕ್ಕಳಲ್ಲಿ : ತಂದೆಯ ಬಗ್ಗೆ ತಾಯಿಯೂ ತಾಯಿಯ ಬಗ್ಗೆ ತಂದೆಯೂ. ಗೌರವ ಹುಟ್ಟಿಸುವ ಸಂಸ್ಕಾರ ಬೆಳೆಸೋಣ

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಬೇಕಾಗಿದ್ದಾರೆ
ಕುವೆಂಪುನಗರದಲ್ಲಿ ಹೊಸದಾಗಿ ಆರಂಭವಾಗುತ್ತಿರುವ ಸಸ್ಯಹಾರಿ ಹೋಟೆಲ್‌ಗೆ ಕೆಳಕಂಡ ಸಿಬ್ಬಂದಿ ತಕ್ಷಣವೇ ಬೇಕಾಗಿದ್ದಾರೆ. (ಸ್ವ ಸಹಾಯ ಪದ್ಧತಿ)
1) ಕ್ಯಾಷಿಯರ್ – 1 (ಮಹಿಳೆಯರು),
2) ಅಡುಗೆ ಭಟ್ರು –1, 3) ದೋಸೆ ಭಟ್ರು–1,
4) ರುಬ್ಬುವವರು –1, 5) ಕೌಂಟರ್ ಹುಡುಗರು –2,
6) ಕಾಫಿ ಮತ್ತು ಟೀ ಭಟ್ರು–1, 7) ಜ್ಯೂಸ್ ಮಾಡುವವರು –1, 8) ಅಡುಗೆ ಸಹಾಯಕರು –2 (ಮಹಿಳೆಯರು, 9) ಸ್ವಚ್ಛಗೊಳಿಸುವವರು–2 (ಮಹಿಳೆಯರು)
9738797706 / 8277727677

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
ಹಾಸನದಲ್ಲಿರುವ ಪ್ರತಿಷ್ಠಿತ ಕಂಪನಿ ಒಂದಕ್ಕೆ 5.9 ಅಡಿ ಎತ್ತರ ಇರುವ 40 ವರ್ಷದೊಳಗಿನ SSLC ಪಾಸಾಗಿರುವ ಸೆಕ್ಯೂರಿಟಿ ಗಾರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ. ESI, PF ಊಟ, ತಿಂಡಿ, ರೂಮಿನ ಸೌಲಭ್ಯ ಇರುತ್ತದೆ. ಮತ್ತು 26 ದಿನಕ್ಕೆ 16,000 ಸಂಬಳ ದೊರೆಯುತ್ತದೆ ಮತ್ತು ಬನ್ನೂರಿನಲ್ಲಿರುವ ಕಂಪನಿ ಒಂದಕ್ಕೆ ಸೆಕ್ಯೂರಿಟಿ ಸೂಪರ್‌ವೈಸರ್ ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಈ ನಂಬರ್‌ಗೆ ಸಂಪರ್ಕಿಸಿ:
9900066284 / 9964093819

ಬೇಕಾಗಿದ್ದಾರೆ
ಟೆಲಿಕಾಲರ್ಸ್, ಡೇಟಾ ಎಂಟ್ರಿ ಆಪರೇಟರ್ಸ್ (ಟೈಪಿಂಗ್ ಸ್ಪೀಡ್ 27wpm) ಐಟಿಐ ಫಿಟ್ಟರ್ಸ್, ಹೆಲ್ಪರ್ಸ್, ವೆಲ್ಡರ್ಸ್, ಸೇಲ್ಸ್ ಮ್ಯಾನೇಜರ್ಸ್, ಇಂದೇ ಕರೆ ಮಾಡಿ. ವೃಂದ. ಹೆಚ್.ಆರ್.
9035560544

2 BHK MUDA APPROVED 30x40
NEW HOUSE FOR SALE
NEAR ST. JOSEPH SCHOOL, ILWALA, MYSORE.
8217851695

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸುಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive
8884171888

ಬೇಕಾಗಿದ್ದಾರೆ
ಮೈಸೂರಿನಲ್ಲಿ ಇರುವ ತೋಟಕ್ಕೆ ಮತ್ತು ಮನೆ ಕೆಲಸಕ್ಕೆ ಕೆಲಸಗಾರರು ಬೇಕಾಗಿದ್ದಾರೆ. ಉತ್ತಮ ವೇತನ, ಮತ್ತು ವಸತಿ ಸೌಲಭ್ಯವಿದೆ. ದಂಪತಿಗಳಿಗೆ ಆದ್ಯತೆ ಕೊಡಲಾಗುವುದು.
ಆಸಕ್ತರು ಸಂಪರ್ಕಿಸಿ:
9845118555

ಸೈಟು ಮಾರಾಟಕ್ಕಿದೆ
ಜ್ಞಾನ ಭಾರತಿ ಲೇಔಟ್, ಜೆ.ಪಿ.ನಗರ ಹತ್ತಿರ, ರಾಷ್ಟ್ರೋತ್ಥಾನ ಸ್ಕೂಲ್ ರೋಡ್ 30x40 ವೆಸ್ಟ್ ಫೇಸ್ (W/F), ಬೆಲೆ : 26.50 ಲಕ್ಷ Nego.
9901351633

ಶ್ರೀ ರಾಘವೇಂದ್ರ ಕೊಳ್ಳೇಗಾಲ ಜ್ಯೋತಿಷ್ಯರು ಜ್ಯೋತಿಷ್ಯ ರತ್ನ ಮೋಡಿ ಮಾಂತ್ರಿಕ ಪಂ॥ ಎಸ್.ಕೆ. ಪ್ರಶಾಂತ್ ಆಚಾರ್ಯ
ಮೊ: 9740947045
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ನಾಗದೋಷ, ಕುಜದೋಷ, ದುಷ್ಟಶಕ್ತಿ, ಪ್ರೇತಬಾಧೆ, ಸಾಲ ಬಾಧೆ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ, ಡಾ॥ ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೋಟೆಲ್ ಪಾರ್ಕ್‌ಲೇನ್ ರಸ್ತೆ), ಮೈಸೂರು.

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆ ಮಾರಾಟಕ್ಕಿದೆ
17x50 ಅಳತೆ, ಎರಡು ಅಂತಸ್ತು ಇರುವ ಮನೆ, 11B ಖಾತೆ ಹೊಂದಿದೆ. ಶ್ರೀರಾಂಪುರ ಪಟ್ಟಣ ಪಂಚಾಯಿತಿ, ಮಹದೇವಪುರ ಗ್ರಾಮ, ಜೆ.ಪಿ. ನಗರ (25 ಲಕ್ಷ ಬ್ಯಾಂಕ್ ಲೋನ್ ಹೊಂದಿದೆ) 46 ಲಕ್ಷ, Negotiable. ಸಂಪರ್ಕಿಸಿ:
Mob: 6361239157

WANTED
Delivery Boys to work in Gas Agency in N.R. Mohalla, Mysore.
Contact:
9606343414, 9742934598

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧುವರರು ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ. ಮದುವೆ ವಿಳಂಬವಾದಲ್ಲಿ ಪರಿಹಾರ ಶತಸಿದ್ಧ. ಡಾ.ಗುರೂಜಿ
9448229184
7899625268

ಕಳೆದಿದೆ
ಸಿ.ವಿ. ವಿಶ್ವನಾಥ್, ನಂ. 38, 3ನೇ ಬ್ಲಾಕ್, ಜಯಲಕ್ಷ್ಮೀಪುರಂ, ಮೈಸೂರು–570 012, ನಮಗೆ ಸೇರಿದ ಈ ಮೇಲ್ಕಂಡ ಸ್ವತ್ತಿನ ದಾಖಲಾತಿಗಳು ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9019665555

ಮನೆ ಮಾರಾಟಕ್ಕಿದೆ
30x40 ಅಳತೆಯ 2 Floor, 18 ಚದರ 2 BHK + 1 BHK + ಮಳಿಗೆ ಚಾಮುಂಡೇಶ್ವರಿ ನಗರ, ಹೊಸ ಚರ್ಚ್ ಹತ್ತಿರ, ಬೆಳವಾಡಿ. ಸಂಪರ್ಕಿಸಿ:
9019799443, 8722935334

HOUSE FOR RENT
3 BHK, ground floor, South face, Ramanuja Road, 8th Cross, 15K, Veg.
P. Siddalingaswamy
Retd. C.M. SBI
Mob: 9731600819
siddalingaswamy.pm@gmail.com

ಸುವರ್ಣ ಯಾತ್ರ
ನೇಪಾಳ ಪ್ರವಾಸ 9 ದಿನಗಳು 09–03–23 ಮುಕ್ತಿನಾಥ, ಪೋಖ್ರಾ, ಮನೋಕಾಮನ, ಸೋನಾಲಿ, ಇತರೆ. 10–03–2023 ಪುರಿ ಜಗನ್ನಾಥ ಪ್ರವಾಸ 4 ದಿನಗಳು ಭುವನೇಶ್ವರ, ಕೋಣಾರ್ಕ್, ಗಿರಿಜಾ ಶಕ್ತಿಪೀಠ, ಇತರೆ. 06–04–2023 ಗುಜರಾತ್ ಪ್ರವಾಸ 2 ಜ್ಯೋತಿರ್ಲಿಂಗ ಸೇರಿ 8 ದಿನಗಳು.
9019462508, 9008381022

ಹೊಸ ಮನೆ ಮಾರಾಟಕ್ಕಿದೆ
20x30 ಡೂಪ್ಲೆಕ್ಸ್ ಹೌಸ್ ಪೂರ್ವ ದಿಕ್ಕು, ಗ್ರಾನೈಟ್ ಫ್ಲೋರಿಂಗ್, ಫುಲ್ ಫರ್ನಿಷಡ್, ರೈಲ್ವೆ ಲೇಔಟ್, ಜೆ.ಪಿ. ನಗರ, ಮೈಸೂರು.
9739825766, 9483560766

SITE FOR SALE
JnanaBharathi Layout, Dadadahalli, MUDA Khata,
1) 30x40, East Facing, 24 Lakhs
2) 29x40, South East Corer. 26 Lakhs. Contact Owner:
9342123373

WANTED
Candidate with Tally & GST Filing Experience to Work for an Audit Firm in Siddartha Layout, Mysore. (M)
9972728085

HOUSE FOR SALE
20x30, North facing, MUDA Approved (2 BHK - 2 units) Opposite to St. Joseph Central School, Yelwala, Mysore.
Mob: 9513330007

BOYS & GIRLS
ಅಗ್ರಹಾರ ಹತ್ತಿರ Showroom ನಲ್ಲಿ ಕೆಲಸ ಮಾಡಲು Sales Boys & Girls ಬೇಕಾಗಿದ್ದಾರೆ.
9886640503

ಜಮೀನು ಮಾರಾಟಕ್ಕಿದೆ
ಟಿ.ಎನ್. ಪುರ ರಸ್ತೆ, ಮೇಗಳಾಪುರ ಸಮೀಪ 1 ಎಕರೆ 10 ಗುಂಟೆ ಜಮೀನು ಡಾಂಬರ್ ರಸ್ತೆಗೆ ಹೊಂದಿಕೊಂಡಿದ್ದು, ಮೈಸೂರಿನಿಂದ 18 KM ಫಾರ್ಮ್ ಹೌಸ್ ಮಾಡಲು ಸೂಕ್ತವಾಗಿದ್ದು, ಆಸಕ್ತರು ಕೂಡಲೇ ಸಂಪರ್ಕಿಸಿ. ಮಾಲೀಕರ ಮೊಬೈಲ್ ನಂ.
9606375060

SITES FOR SALE
30x40 sites
Bank loan upto 80%
Near Gurur Bus Stop Ramabainagar, Mysore. DTCP Approved (Corporation limits)
1.5 kms from J.P. Nagar Ring Road
Mob: 8660105902

Medical Shop for Sale
A well established medical shop is for sale at SJH Road, Vidyaranyapuram, Mysore, on "As is where is" basis for Rs. 95,000/- only.
Contact:
Mob: 9916496568

ಬೇಕಾಗಿದ್ದಾರೆ
ಬ್ರಾಹ್ಮಣ ಅಡುಗೆಯವರು ಬೇಕಾಗಿದ್ದಾರೆ.
ಸಂಪರ್ಕಿಸಿ.
9900125855
9902639622

CHANGE OF NAME
I, Jameel Ahmed Abdul Kareem R/a HIG 21/A, Ground Floor, 4th Stage, Kalyangiri Nagar, Mysore-570019. have Changed my name as Jameel Ahmed in front of Notary C.R. Seetharam on 2/2/23 at Mysuru.
Sd/- Jameel Ahmed

ಹೋಂ ನರ್ಸಿಂಗ್ ಕೆಲಸ
ಅನುಭವ ಇರುವ / ಇಲ್ಲದಿರುವ 18 ವರ್ಷ ಮೇಲ್ಪಟ್ಟ ಯುವಕ / ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು, ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ. ಬೇರೆ ಕಡೆ ಕೆಲಸ ಮಾಡಿ ಅನುಭವ ಇರುವವರಿಗೆ ಆಕರ್ಷಕ ಸಂಬಳ ಇರುತ್ತದೆ.
7483960098, 9035113222

ಮನೆ ಬಾಡಿಗೆಗೆ ಇದೆ
20x30 ರಲ್ಲಿ ನಿರ್ಮಿಸಿರುವ 2 ಬೆಡ್‌ರೂಂವುಳ್ಳ N/F, 1st Floor ಮನೆ ಎಲ್ಲಾ ಸೌಲಭ್ಯದೊಂದಿಗೆ ಕನಕದಾಸನಗರದಲ್ಲಿ ಬಾಡಿಗೆಗೆ ಇದೆ (ಸಾ.ರಾ. ಕಲ್ಯಾಣ ಮಂಟಪದ ಹತ್ತಿರ). ಸಂಪರ್ಕಿಸಿ:
Mob: 9448433936

ಶ್ರೀ ಮಾರುತಿ ರಿಯಲ್ ಎಸ್ಟೇಟ್
ಸೈಟುಗಳನ್ನು ಕೊಳ್ಳಲು / ಮಾರಲು
ಸೈಟು ಮಾರಾಟಕ್ಕಿದೆ 30x40 ಪರಮಾನಂದ ಸಾಗರ ಲೇಔಟ್. ಬೆಲೆ: ರೂ. 22 ಲಕ್ಷ. ಸಂಪರ್ಕಿಸಿ:
Mob: 9538412881

Pay 6 Lakhs & Book 30X40 / 30X50 Site
(80% Loan)
ತಕ್ಷಣ ಮನೆ ಕಟ್ಟಲು ಯೋಗ್ಯ ಸೈಟುಗಳು ನಮ್ಮ ಬಡಾವಣೆಗಳಲ್ಲಿ ಲಭ್ಯವಿದೆ. T. ನರಸೀಪುರ ಮುಖ್ಯರಸ್ತೆ (ಚಿಕ್ಕಳ್ಳಿ) ಮತ್ತು ಪೋಲೀಸ್ ಲೇಔಟ್ 3ನೇ ಹಂತ ನಂತರ ಬೆಲೆ 25 ಲಕ್ಷ / 35 ಲಕ್ಷ
Broker Excuse
Call: 78924 45689

WANTED
St. Mira's Inclusive Convent, Sujjlur. malavalli tq. Wanted experienced HM, Teachers(all subjects & languages), clerk & part time Art, Music & Dance faculties; Marketing Manager. Applicants should be proficient in English and Computer.
Send resume to smic.af.13@gmail.com / kalash03@gmail.com
Contact: 9900118453

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
23/2:– ದೆಹಲಿ, ವೈಷ್ಣೋದೇವಿ, ಅಮೃತಸರ, ಧರ್ಮಶಾಲಾ, ಚಾಮುಂಡಾ ದೇವಿ , ಕಾಂಗ್ರಾ ದೇವಿ, ಜ್ವಾಲಾ ದೇವಿ, ಚಿಂತಪೂರ್ಣಿ ದೇವಿ ಇತ್ಯಾದಿ,
6/3:– ಕಾಶಿ, ಗಯಾ, ಬುಧಗಯಾ, ಪ್ರಯಾಗರಾಜ್, ಅಯೋಧ್ಯೆ,
9/3:– ನೇಪಾಳ ಮುಕ್ತಿನಾಥ್, ಪಶುಪತಿನಾಥ.
11/3:– ಪುರಿ ಜಗನ್ನಾಥ್, ಕೋಣಾರ್ಕ್ ಸೂರ್ಯ ದೇವಸ್ಥಾನ, ಭುವನೇಶ್ವರ್, ಚಂದ್ರಭಾಗ ಬೀಚ್.
9591017782 / 9964527782

MUDA APPROVED SITES FOR SALE
20x30, 30x40 @ Green City Vijayanagara 4th Stge.
40x60 @ Opp Wipro KRS Road. Contact:
7026901111

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಸೇಲ್ಸ್ ಮ್ಯಾನ್ ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಗಾಂಧಿ ಸರ್ಕಲ್ ಸಿಟಿ ಬಸ್ ಸ್ಟಾಂಡ್ ಹತ್ತಿರ
9686667762
9986731199

ಬೇಕಾಗಿದ್ದಾರೆ
ಹೆಬ್ಬಾಳು, ಮೇಟಗಳ್ಳಿ, ಕೈಗಾರಿಕ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ESI & PF ಊಟ, ವಸತಿ, ವಾಹನ, ಸೌಲಭ್ಯವಿರುತ್ತದೆ.
1) ITI (Fitter)
2) ITI (Electrical)
3) 8thto PUC ವರೆಗೆ
ಸಂಬಳ: 10,400 ರಿಂದ 18,000 ರವರೆಗೆ.
8951869646 / 9902645646

SITES FOR SALE
* (30x40) Vijayanagar IV II 2 Adjecent Sites N/F Prime Location 80 Lacs.
* (40x60) Vijayanagar IV II Prime Location 1 Cr.
9538839926

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಸಾಧಕರನ್ನು ಗುರುತಿಸುವುದು ಉತ್ತಮ ಕಾರ್ಯ

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ



ಮಂಡ್ಯ, ಫೆ.3– ಸಮಾಜದಲ್ಲಿ ಸಾಧಕರನ್ನು ಗುರುತಿಸಿ ಅಭಿನಂದಿಸುವುದು ಉತ್ತಮ ಕೆಲಸವಾಗಿದ್ದು, ಶಾಸಕ ಎಂ.ಶ್ರೀನಿವಾಸ್ ಅವರ ಕಾರ್ಯ ಶ್ಲಾಘನೀಯ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಎಸ್.ಹೊರಟ್ಟಿ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಹಾಕಿದ ಎಂ.ಶ್ರೀನಿವಾಸ್ ಪ್ರತಿಷ್ಠಾನದಿಂದ ನಡೆದ ಅರಸಮ್ಮ ಮೆಣಸೇಗೌಡ ಕೃಷಿ ಪ್ರಶಸ್ತಿ, ಎಂ.ಶ್ರೀನಿವಾಸ್ ಸಮಾಜ ಸೇವಾ ಪ್ರಶಸ್ತಿ ಹಾಗೂ ವಿವಿಧ ಕ್ಷೇತ್ರಗಳ ಸಾಧಕರ ಅಭಿನಂದಿಸಿ ಮಾತನಾಡಿದರು. ಪ್ರತಿಯೊಬ್ಬರೂ ಸಮಾಜದಲ್ಲಿ ಒಂದೊಂದು ಸ್ಥಾನ ಪಡೆದಿರುತ್ತಾರೆ. ಅವರದ್ದೇ ಆದ ರೀತಿ ಸಾಧನೆ ಮಾಡುತ್ತಿರುತ್ತಾರೆ. ಅದರಂತೆ ಶಾಸಕ ಎಂ.ಶ್ರೀನಿವಾಸ್ ಅವರ ಕಾರ್ಯಗಳು ಮತ್ತೊಬ್ಬರಿಗೆ ಮಾದರಿಯಾಗುವಂತಿದೆ ಎಂದರು.

ಸಮಾರಂಭ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಜಯರಾಂ ರಾಯಪುರ, ಸಾಧಕರನ್ನು ಗುರುತಿಸಿ ಸನ್ಮಾನಿಸುವ ಸಮಾಜ ಇನ್ನೂ ಉಳಿದಿದೆ. ಆತ್ಮತೃಪ್ತಿಗಾಗಿ ಮಾಡುವ ಸಾಧನೆಯಿಂದ ಮಾತ್ರ ಸಾಧಕರಾಗಿ ಹೊರಹೊಮ್ಮಲು ಸಾಧ್ಯ ಎಂದರು. ಸಾಧಕರಿಗೆ ಯಾವುದೇ ಪ್ರತಿಫಲಾಪೇಕ್ಷೆ ಇರುವುದಿಲ್ಲ. ಸಾಧಕರನ್ನು ಗುರುತಿಸದ ಸಮಾಜ ಸಾಧಕರನ್ನು ಪಡೆಯಲು ಅನರ್ಹ. ಆದರ್ಶ ಸಮಾಜವಾಗಲು ನಿಜವಾದ ಸಾಧಕರನ್ನು ಬೆನ್ನುತಟ್ಟುವ ಕೆಲಸ ಮಾಡಬೇಕು. ಎಲೆಮರೆ ಕಾಯಿಯಂತಿರುವ ಸಾಧಕರನ್ನು ಗುರುತಿಸಬೇಕಾಗಿದೆ ಎಂದರು.

ಸಾಧಕರಿಗೆ ಕಷ್ಟ–ನೋವುಗಳು ಬರಲಿವೆ. ಅದೆಲ್ಲವನ್ನು ಮೀರಿ ಸಾಧಕರಾಗಿ ಹೊರಹೊಮ್ಮುವುದು ನಿಜವಾದ ಸಾಧನೆ. ಅದನ್ನು ಡಾ.ಮಂಜುನಾಥ್, ವಿಕಾಸ್, ಡಾ.ನವೀನ್ ಅಪ್ಪಾಜಿಗೌಡ ಮಾಡಿದ್ದಾರೆ ಎಂದು ಶ್ಲಾಘಿಸಿದರು. ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಶಾಸಕ ಎಂ.ಶ್ರೀನಿವಾಸ್ ಅವರು ಅಭಿವೃದ್ಧಿ ವಿಚಾರದಲ್ಲಿ ರಾಜಕೀಯ ಗಿಲ್ಲ, ನಾವೆಲ್ಲರೂ ಸೇರಿ ಜಿಲ್ಲೆಯ ಅಭಿವೃದ್ಧಿ ಮಾಡಿ ತೋರಿಸುತ್ತೇವೆ ಎಂದರು.

ಸಮಾರಂಭದಲ್ಲಿ ಜಯದೇವ ಹೃದ್ರೋಗ ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಅವರಿಗೆ ಎಂ.ಶ್ರೀನಿವಾಸ್ ಸಮಾಜ ಸೇವಾ ಪ್ರಶಸ್ತಿ, ಪ್ರಗತಿಪರ ರೈತ ವಿಕಾಸ್‌ಗೆ ಅರಸಮ್ಮ ಮೆಣಸೇಗೌಡ ಕೃಷಿ ಪ್ರಶಸ್ತಿ ಹಾಗೂ ನರರೋಗ ತಜ್ಞ ಡಾ.ನವೀನ್ ಅಪ್ಪಾಜಿಗೌಡ ಅವರಿಗೆ ಎಂ.ಶ್ರೀನಿವಾಸ್ ವಿಶೇಷ ಪುರಸ್ಕಾರ, ಶಿಕ್ಷಣ ಕ್ಷೇತ್ರದಿಂದ ಲೋಕೇಶ್ ಪಿ.ಚಂದಗಾಲು, ಜಾನಪದ ಸಾಹಿತ್ಯ ಕ್ಷೇತ್ರದಿಂದ ಡಾ.ಎಂ. ಕೆಂಪಮ್ಮ ಕಾರ್ಕಳ್ಳಿ, ಲೇಖಕ ಡಾ.ಎಸ್. ಶಿವರಾಮು, ಕ್ರೀಡಾ ಕ್ಷೇತ್ರದಿಂದ ಎ.ಅರವಿಂದ್ ಹಾಗೂ ಸಂಗೀತ ಕ್ಷೇತ್ರದಿಂದ ಶಶಾಂಕ್ ಕೀಲಾರ ಅವರಿಗೆ ಎಂ.ಶ್ರೀನಿವಾಸ್ ಪುರಸ್ಕಾರ ನೀಡಿ ಗೌರವಿಸಲಾಯಿತು.

ವೇದಿಕೆಯಲ್ಲಿ ಶಾಸಕ ಎಂ.ಶ್ರೀನಿವಾಸ್, ವಿಧಾನ ಪರಿಷತ್ ಮಾಜಿ ಸದಸ್ಯರಾದ ಕೆ.ಟಿ.ಶ್ರೀಕಂಠೇಗೌಡ, ಬಿ.ರಾಮಕೃಷ್ಣ, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ, ಹನಕೆರೆ ಎಂ.ಶ್ರೀನಿವಾಸ್ ಪ್ರತಿಷ್ಠಾನದ ಅಧ್ಯಕ್ಷ ಡಿ.ಶಿವರಾಜು ಕೀಲಾರ, ಜಿಪಂ ಮಾಜಿ ಸದಸ್ಯ ಎಚ್.ಎನ್. ಯೋಗೇಶ್, ಮುಖಂಡರಾದ ನಾಗಪ್ಪ ತಿಮ್ಮೇಗೌಡ ಇದ್ದರು.

ಪೈಪೋಟಿ ಇಲ್ಲದ ಕ್ಷೇತ್ರವೆಂದರೆ ಸಮಾಜ ಸೇವೆ

ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಮಂಜುನಾಥ್ ಮಾತನಾಡಿ, ಸಮಾಜದಲ್ಲಿ ಯಾವುದೇ ಪೈಪೋಟಿ, ಸ್ಪರ್ಧೆ ಇಲ್ಲದ ಕ್ಷೇತ್ರ ಎಂದರೆ ಸಮಾಜ ಸೇವೆ ಮಾತ್ರ ಎಂದರು.

ಪ್ರಶಸ್ತಿಗಳು ಸಾಧನೆ ಮಾಡಿದವರಿಗೆ ಬರುತ್ತವೆ. ಪ್ರಶಸ್ತಿ ಬಂದಾಗ ಜವಾಬ್ದಾರಿ ಭಾರ ಕೂಡ ಹೆಚ್ಚಾಗುತ್ತದೆ. ಒಳ್ಳೆಯ ಮನಸ್ಸಿನಿಂದ ಸಣ್ಣ ಕೆಲಸ ಮಾಡಿದರೂ ಸಾಧನೆಯೇ ಆಗುತ್ತದೆ. ದೊಡ್ಡ ಹುದ್ದೆಯಲ್ಲಿದ್ದವರು ಸಣ್ಣ ಸಾಧನೆ ಮಾಡಿದರೂ ಸಾಧನೆಯಾಗಿಯೇ ಉಳಿಯುತ್ತದೆ. ಪ್ರತಿಯೊಬ್ಬರೂ ಸಹ ಅವರವರ ಕ್ಷೇತ್ರದಲ್ಲಿ ಸಾಧನೆ ಮಾಡಬೇಕಾಗಿದೆ ಎಂದರು.

ದೇಹ ಒಂದು ಐಸ್‌ಕ್ರೀಂ ಇದ್ದ ಹಾಗೆ. ದೇಹ ಸಾಧನೆ ಮಾಡಬೇಕು. ಸಾಧನೆ ಇಲ್ಲದೆ ಸತ್ತರೆ ಸಾವಿಗೆ ಅವಮಾನ. ಆದರ್ಶ ಇಲ್ಲದೆ ಬದುಕಿದರೆ ಬದುಕಿಗೆ ಅವಮಾನ ಎಂಬಂತೆ ಪ್ರತಿಯೊಬ್ಬರೂ ಸಾಧನೆ ಮಾಡಬೇಕು. ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ 55 ಸಾವಿರ ಮಂದಿಗೆ ಚಿಕಿತ್ಸೆ, 6 ಲಕ್ಷ ಮಂದಿಗೆ ಶಸ್ತ್ರ ಚಿಕಿತ್ಸೆ ನೀಡಿದ್ದೇವೆ. ರೋಗಿ ಆರ್ಥಿಕ ಮಟ್ಟದ ಆಧಾರದ ಮೇಲೆ ಚಿಕಿತ್ಸೆ ನೀಡುತ್ತಿದ್ದೇವೆ. ಹಣಕ್ಕಾಗಿ ಒಬ್ಬ ರೋಗಿಯನ್ನು ವಾಪಸ್ ಕಳುಹಿಸಿಲ್ಲ ಎಂದರು.

ರೈತರು ಅಲ್ಪ, ದೀರ್ಘಾವಧಿ ಬೆಳೆ ಜೊತೆಗೆ ರೇಷ್ಮೆ ಕೃಷಿಯಲ್ಲಿ ತೊಡಗಿಸಿಕೊಳ್ಳಲು ಕರೆ



ಶ್ರೀರಂಗಪಟ್ಟಣ, ಫೆ.3– ರೈತರು ಅಲ್ಪಾವಧಿ ಹಾಗೂ ದೀರ್ಘಾವಧಿ ಬೆಳೆಗಳ ಜೊತೆಗೆ ರೇಷ್ಮೆ ಕೃಷಿಯಲ್ಲಿ ತೊಡಗಿಸಿಕೊಳ್ಳುವಂತೆ ಶಾಸಕ ರವೀಂದ್ರ ಶ್ರೀಕಂಠಯ್ಯ ಕರೆ ನೀಡಿದರು.

ಪಟ್ಟಣದ ರೇಷ್ಮೆ ಇಲಾಖೆ ಆವರಣದಲ್ಲಿ ಸಾಂಕೇತಿಕವಾಗಿ ಅರ್ಹ ರೇಷ್ಮೆ ಬೆಳೆಗಾರರಿಗೆ ಪವರ್ ವೀಡರ್, ಪ್ಲಾಸ್ಟಿಕ್ ಚಂದ್ರಿಕೆ, ಸೋಲಾರ್ ಲೈಟ್, ಎಲೆಕ್ಟ್ರಿಕ್ ಪವರ್ ಸ್ಪ್ರೇಯರ್, ಬ್ಯಾಟರಿ ಚಾಲಿತ ಸ್ಪ್ರೇಯರ್ ಸೇರಿದಂತೆ ವಿವಿಧ ಸಲಕರಣೆ ವಿತರಿಸಿ ಮಾತನಾಡಿದರು.

ಭತ್ತ, ಕಬ್ಬು ಸೇರಿದಂತೆ ಇತರೆ ಬೆಳೆಗಳಿಂದ ರೈತರು ಆರ್ಥಿಕ ಹಿಂಜರಿಕೆ ಕಂಡಿರಬಹುದು. ಆದರೆ ರೇಷ್ಮೆ ಕೃಷಿ ಹಲವು ವರ್ಷಗಳಿಂದ ರೈತರ ಕೈ ಹಿಡಿದಿದೆ. ರೇಷ್ಮೆ ಬೆಳೆಗಾರರಿಗೆ ಸರ್ಕಾರ ಹಲವು ಸವಲತ್ತುಗಳನ್ನು ನೀಡುತ್ತಿದ್ದು, ರೇಷ್ಮೆ ಕೃಷಿಕರು ಇದರ ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಮುಂದೆ ಬರಬೇಕು ಎಂದರು.

ರೇಷ್ಮೆ ಇಲಾಖೆ ಸಹಾಯಕ ನಿರ್ದೇಶಕ ಮಾದೇಶ್ ಮಾತನಾಡಿ, ರೇಷ್ಮೆ ಬೆಳೆಗಾರರು ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ಬಳಕೆ ಮಾಡಿಕೊಳ್ಳಬೇಕು. ರೇಷ್ಮೆ ಬೆಳೆಯಲ್ಲಿ ಯಾವುದೇ ತಾಂತ್ರಿಕ ಸಮಸ್ಯೆಗಳಿದ್ದಲ್ಲಿ ನಮ್ಮನ್ನು ಅಥವಾ ಇಲಾಖೆ ಸಂಪರ್ಕಿಸಿದಲ್ಲಿ ಅಗತ್ಯ ಮಾಹಿತಿ ನೀಡಲಾಗುವುದು ಎಂದರು.

2 ಕೋಟಿ ವೆಚ್ಚದ ಗಾಂಧಿ ಗ್ರಾಮ ಕಾಮಗಾರಿಗೆ ಚಾಲನೆ



ಮಂಡ್ಯ, ಫೆ.3– ಮಹಾತ್ಮ ಗಾಂಧಿ ಸ್ಮಾರಕ ಟ್ರಸ್ಟ್ ವತಿಯಿಂದ ತಾಲೂಕಿನ ಎಚ್.ಮಲ್ಲಿಗೆರೆ ಫಾರ್ಮ್‌ನಲ್ಲಿರುವ ಗಾಂಧಿ ಗ್ರಾಮವನ್ನು 2 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸುವ ಕಾಮಗಾರಿಗೆ ಶಾಸಕ ಸಿ.ಎಸ್.ಪುಟ್ಟರಾಜು ಶುಕ್ರವಾರ ಭೂಮಿ ಪೂಜೆ ನೆರವೇರಿಸಿದರು.

ಮಹಾತ್ಮ ಗಾಂಧೀಜಿ ಅವರ ಪರಿಕಲ್ಪನೆ ಸಾಕಾರಗೊಳಿಸುವಂತೆ ಗಾಂಧಿ ಗ್ರಾಮದಲ್ಲಿ ಅಭಿವೃದ್ಧಿ ಕೆಲಸಗಳು ಆಗಲಿ ಎಂದು ಆಶಯ ವ್ಯಕ್ತಪಡಿಸಿದರು. ದಿ.ಜಿ.ಮಾದೇಗೌಡರು ಗಾಂಧಿ ಗ್ರಾಮ ಅಭಿವೃದ್ಧಿಗಾಗಿ ಸಾಕಷ್ಟು ಶ್ರಮಿಸಿದ್ದರು. ಗೌಡರ ಆಶಯ, ನಂಬಿಕೆ ಬಲಪಡಿಸುವಂತೆ 'ಗಾಂಧಿ ಗ್ರಾಮ'ದ ಅಭಿವೃದ್ಧಿ ಕೆಲಸಗಳಾಗಿ ಸಮುದಾಯಕ್ಕೆ ಅನುಕೂಲ ಆಗಲಿ ಎಂದರು. ವಿಧಾನ ಪರಿಷತ್ ಸದಸ್ಯ ಹಾಗೂ ಮಹಾತ್ಮ ಗಾಂಧಿ ಸ್ಮಾರಕ ಟ್ರಸ್ಟ್ ಅಧ್ಯಕ್ಷ ಮಧು.ಜಿ.ಮಾದೇಗೌಡ ಮಾತನಾಡಿ, ಗಾಂಧೀಜಿ ಅವರ ಚಿಂತನೆ, ಆಶಯಗಳಂತೆ ಮಾದರಿಯಾಗಿ ಗಾಂಧಿ ಗ್ರಾಮ ಅಭಿವೃದ್ಧಿ ಪಡಿಸಲಾಗುವುದು ಎಂದರು.

ಈ ವೇಳೆ ಎಚ್.ಮಲ್ಲಿಗೆರೆ ಗ್ರಾಪಂ ಅಧ್ಯಕ್ಷೆ ಪ್ರೇಮಮ್ಮ, ಮಾಜಿ ಅಧ್ಯಕ್ಷೆ ಲಕ್ಷ್ಮಮ್ಮ, ಸದಸ್ಯೆ ಭಾಗಮ್ಮ, ಟ್ರಸ್ಟ್ ಪದಾಧಿಕಾರಿಗಳಾದ ಬಿ.ಎಂ.ನಂಜೇಗೌಡ, ಎನ್.ರಾಜು, ಅಂಜನಾ ಶ್ರೀಕಾಂತ್, ಮಾದಪ್ಪ, ನಾಗರತ್ನ, ಜಯರಾಮು, ಪ್ರಶಾಂತ್ ಬಾಬು, ಎಂ.ರಾಜಣ್ಣ, ರಾಮಲಿಂಗಯ್ಯ ಹಾಗೂ ಎಚ್.ಮಲ್ಲಿಗೆರೆ, ಶಂಭುನಹಳ್ಳಿ, ಸಂಪಳ್ಳಿ, ಹೊಸಳ್ಳಿ, ಬೀರಗೌಡನಹಳ್ಳಿ ಗ್ರಾಮಸ್ಥರು ಹಾಜರಿದ್ದರು.

ಇಂದು ವಿಶ್ವ ಕ್ಯಾನ್ಸರ್ ಜಾಗೃತಿ ದಿನಾಚರಣೆ

ಮಂಡ್ಯ, ಫೆ.3– ಜಿಲ್ಲಾಡಳಿತ, ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಚೇರಿ, ಜಿಲ್ಲಾ ಅಸಾಂಕ್ರಾಮಿಕ ರೋಗಗಳ ಘಟಕ (ಎನ್‌ಸಿಡಿ) ಇವರ ಸಹಯೋಗದಲ್ಲಿ ವಿಶ್ವ ಕ್ಯಾನ್ಸರ್ ಜಾಗೃತಿ ದಿನಾಚರಣೆ ಹಾಗೂ ಜಾಗೃತಿ ಜಾಥಾ ಉದ್ಘಾಟನೆ ಫೆ.4 ಬೆಳಗ್ಗೆ 10 ಗಂಟೆಗೆ ಸಂಜಯ ವೃತ್ತದಲ್ಲಿ ನಡೆಯಲಿದೆ.

ಜಿಲ್ಲಾ ಕಾರಾಗೃಹ ಅಧೀಕ್ಷಕ ಟಿ.ಕೆ. ಲೋಕೇಶ್ ಜಾಗೃತಿ ಜಾಥಾ ಉದ್ಘಾಟಿಸಲಿದ್ದಾರೆ. ಜಿಲ್ಲಾ ಮಟ್ಟದ ಸಭಾ ಕಾರ್ಯಕ್ರಮ ಡಾ. ಜಿ.ಎಲ್.ಜವರೇಗೌಡ ಸಭಾಂಗಣದಲ್ಲಿ ನಡೆಯಲಿದೆ.

ಕಾರ್ಯಕ್ರಮವನ್ನು ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ನಾಗರಾಜು ಉದ್ಘಾಟಿಸಲಿದ್ದು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಟಿ.ಎಸ್. ಧನಂಜಯ್ ಅಧ್ಯಕ್ಷತೆ ವಹಿಸಲಿದ್ದಾರೆ.

ಕೆ.ಆರ್.ಪೇಟೆಯಲ್ಲಿ ಮಾದಿಗ ಸಮಾಜ ಪರಿವರ್ತನಾ ವೇದಿಕೆ ಸಭೆ



ಕೆ.ಆರ್.ಪೇಟೆ, ಫೆ.3– ಕರ್ನಾಟಕ ರಾಜ್ಯ ಮಾತಂಗಿ ಮಾದಿಗ ಸಮಾಜ ಪರಿವರ್ತನಾ ವೇದಿಕೆ ಮಂಡ್ಯ ಜಿಲ್ಲಾ ಘಟಕದ ಪದಾಧಿಕಾರಿಗಳ ಸಭೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆಯಿತು.

ವೇದಿಕೆ ರಾಜ್ಯ ಸಮಿತಿ ಸದಸ್ಯ ರಾಯಸಮುದ್ರ ವೆಂಕಟೇಶ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವೇದಿಕೆ ಜಿಲ್ಲಾಧ್ಯಕ್ಷರಾಗಿ ಹೊಸಹೊಳಲು ಕುಮಾರ್ ಅವರನ್ನು ರಾಜ್ಯ ಸಮಿತಿ ಅಧ್ಯಕ್ಷ ಪ್ರಭು. ಎಸ್.ಹಿತ್ತಲಮನಿ ಆದೇಶದ ಮೇರೆಗೆ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಅದೇ ರೀತಿ ಕೆ.ಆರ್.ಪೇಟೆ ತಾಲೂಕು ಅಧ್ಯಕ್ಷರಾಗಿ ಚೆಲುವರಾಜು ಅವರನ್ನು ಹಾಗೂ ನಾಗಮಂಗಲ ತಾಲೂಕು ಅಧ್ಯಕ್ಷರನ್ನಾಗಿ ಬೋಗಾದಿ ಮಂಜಯ್ಯ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ವೇದಿಕೆ ತಾಲೂಕು ಸಂಘಟನಾ ಕಾರ್ಯದರ್ಶಿ ವಿಷ್ಣುರಾಜು, ಜಿಲ್ಲಾ ಸಮಿತಿ ಸದಸ್ಯರಾಗಿ ರವಿ, ಮಹೇಶ್, ಜಯರಾಂ, ರಾಯಸಮುದ್ರ ಗ್ರಾಮ ಘಟಕದ ಅಧ್ಯಕ್ಷ ಜಯಣ್ಣ, ಗೌರವಾಧ್ಯಕ್ಷ ದೇವರಾಜು, ಉಪಾಧ್ಯಕ್ಷ ಸುರೇಶ್, ಸ್ವಾಮಿ, ಶಂಕರ್, ಶಿವಲಿಂಗಯ್ಯ, ನಾಗರಾಜು, ನಾಗಮಂಗಲ ತಾಲೂಕು ಗೌರವಾಧ್ಯಕ್ಷ ಗುರು, ಪ್ರಧಾನ ಕಾರ್ಯದರ್ಶಿ ರಮೇಶ್, ಉಪಾಧ್ಯಕ್ಷ ಮಂಜುನಾಥ್, ಸಂಘಟನಾ ಕಾರ್ಯದರ್ಶಿ ಮಹೇಶ್, ಕಾರ್ಯದರ್ಶಿ ರಾಕೇಶ್, ಖಜಾಂಚಿ ಸ್ವಾಮಿ ಸೇರಿದಂತೆ ಹಲವು ಪದಾಧಿಕಾರಿಗಳಿದ್ದರು.

ವೇದಿಕೆ ಜಿಲ್ಲಾಧ್ಯಕ್ಷ ಕುಮಾರ್ ಮಾತನಾಡಿ, ನಮ್ಮ ಮಾದಿಗ ಸಮುದಾಯಕ್ಕೆ ಸಂವಿಧಾನಬದ್ಧವಾಗಿ ಸಿಗಬೇಕಾದ ಸೌಲಭ್ಯಗಳು ಸರಿಯಾಗಿ ತಲುಪುತ್ತಿಲ್ಲ. ಅಧಿಕಾರಿಗಳು ನಮ್ಮ ಸಮುದಾಯ ಕಡೆಗಣಿಸುತ್ತಿದ್ದಾರೆ. ಇದರಿಂದ ನಮ್ಮ ಸಮುದಾಯ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತಿಲ್ಲ. ದಲಿತ ಸಮುದಾಯದಲ್ಲಿಯೇ ಅತ್ಯಂತ ಹಿಂದುಳಿದ ಸಮುದಾಯವಾಗಿರುವ ಕಾರಣ ನಮ್ಮ ಮಾದಿಗ ಸಮುದಾಯವನ್ನು ಸಂಘಟಿಸಿ, ಜಾಗೃತಗೊಳಿಸುವ ಕೆಲಸವನ್ನು ನಮ್ಮ ವೇದಿಕೆ ರಾಜ್ಯಾದ್ಯಂತ ಮಾಡುತ್ತಿದೆ. ಅದೇ ರೀತಿ ಜಿಲ್ಲೆಯಲ್ಲಿ ನಮ್ಮ ನೇತೃತ್ವದಲ್ಲಿ ಜಿಲ್ಲೆಯ ಎಲ್ಲಾ ತಾಲೂಕು ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ನೇತೃತ್ವದಲ್ಲಿ ಸಮುದಾಯದ ಬಂಧುಗಳನ್ನು ಪ್ರತಿಯೊಂದು ಗ್ರಾಮಗಳಲ್ಲಿ ಸಂಘಟನೆ ಮಾಡಿ ಸಮುದಾಯದ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು.

ಫೆ. 6ರಂದು ತುಮಕೂರಿಗೆ ಮೋದಿ: ಸ್ವಾಗತಕ್ಕೆ ಬಿಜೆಪಿ ಸಿದ್ಧತೆ

ತುಮಕೂರು: ಗುಬ್ಬಿ ತಾಲೂಕಿನ ಬಿದರೆಹಳ್ಳ ಕಾವಲ್ ಬಳಿ ನಿರ್ಮಾಣಗೊಂಡಿರುವ ಎಚ್‌ಎಎಲ್ ಹೆಲಿಕಾಪ್ಟರ್ ಘಟಕದ ಲೋಕಾರ್ಪಣೆಗೆ ಪ್ರಧಾನಿ ನರೇಂದ್ರ ಮೋದಿ



ಫೆ. 6ರಂದು ಆಗಮಿಸಲಿದ್ದು, ಅವರ ಸ್ವಾಗತಕ್ಕೆ ಜಿಲ್ಲಾ ಬಿಜೆಪಿ ಮುಖಂಡರು, ಕಾರ್ಯಕರ್ತರು ಸಜ್ಜಾಗಿದ್ದಾರೆ.

ಸೋಮವಾರ ಮಧ್ಯಾಹ್ನ 3.30 ಗಂಟೆಗೆ ಪ್ರಧಾನಿ ಬರಲಿದ್ದು, ಒಂದು ಗಂಟೆಯಲ್ಲಿ ಸಮಾರಂಭ ಮುಗಿಯಲಿದೆ. ಎಚ್‌ಎಎಲ್ ಘಟಕವನ್ನು ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ. ಇದಕ್ಕೆ ಮೋದಿ ಶಂಕುಸ್ಥಾಪನೆ ನೆರವೇರಿಸಿದ್ದು, ಈಗ ಅವರೇ ಉದ್ಘಾಟನೆಯನ್ನೂ ಮಾಡುತ್ತಿದ್ದಾರೆ. ಕಾರ್ಯಕ್ರಮದಲ್ಲಿ 80 ಸಾವಿರ ಬಿಜೆಪಿ ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಎಚ್.ರವಿಶಂಕರ್ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಎಚ್‌ಎಎಲ್ ಹೆಲಿಕಾಪ್ಟರ್ ಘಟಕವು ಸಾಕಷ್ಟು ತಾಂತ್ರಿಕ ವಿಚಾರಗಳನ್ನು ಒಳಗೊಂಡಿದ್ದು, ಪ್ರಧಾನಿ ಹಾಗೂ ಇತರರು ಇದೇ ವಿಚಾರವಾಗಿ ಮಾತನಾಡಲಿದ್ದಾರೆ. ಜಿಲ್ಲೆಯ ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸುವಂತೆ ಮನವಿ ಮಾಡಲಾಗಿದೆ. ಉದ್ಯಮಿಗಳು, ವರ್ತಕರು, ವಾಣಿಜ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರು ಪಾಲ್ಗೊಳ್ಳಲಿದ್ದಾರೆ ಎಂದರು. ಕಾರ್ಯಕ್ರಮಕ್ಕೆ ಬರುವವರ ವಾಹನ ನಿಲುಗಡೆಗೆ 150 ಎಕರೆ ಪ್ರದೇಶದಲ್ಲಿ ವ್ಯವಸ್ಥೆ ಮಾಡಲಾಗಿದೆ. ಪಕ್ಷದ ಕಾರ್ಯಕರ್ತರು, ಮುಖಂಡರು ಬೈಕ್ ರ‍್ಯಾಲಿ ಮೂಲಕ ಕಾರ್ಯಕ್ರಮದ ಸ್ಥಳಕ್ಕೆ ಬರಲಿದ್ದಾರೆ ಎಂದು ಹೇಳಿದರು. ಮುಖಂಡರಾದ ಚಂದ್ರಶೇಖರ್, ಬಾವಿಕಟ್ಟೆ ನಾಗಣ್ಣ, ಕೆ.ಪಿ.ಮಹೇಶ್, ಸದಾನಂದ ಇತರರು ಉಪಸ್ಥಿತರಿದ್ದರು.

ಕಚೇರಿ ಸ್ಥಳಾಂತರ

ಮಂಡ್ಯ, ಫೆ.3– ಹಿರಿಯ ಭೂ ವಿಜ್ಞಾನಿ, ಜಿಲ್ಲಾ ಅಂತರ್ಜಲ ಕಚೇರಿ, ಅಂತರ್ಜಲ ನಿರ್ದೇಶನಾಲಯ ಕಚೇರಿಗೆ ಸಂಬಂಧಿಸಿದಂತೆ ಸರ್ಕಾರಿ ಅಥವಾ ಅರೆ ಸರ್ಕಾರಿ ಪತ್ರ ವ್ಯವಹಾರಗಳು ಫೆ.1ರಿಂದ #1858, ಮೊದಲ ಮಹಡಿ, ದೇವು ಕಾಂಪ್ಲೆಕ್ಸ್, ಸುಭಾಷ್ ನಗರ, ವಿನೋಬಾ ರಸ್ತೆಗೆ ಸ್ಥಳಾಂತರಗೊಂಡಿರುತ್ತದೆ ಎಂದು ಜಿಲ್ಲಾ ಅಂತರ್ಜಲ ಕಚೇರಿಯ ಹಿರಿಯ ಭೂ ವಿಜ್ಞಾನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

400 ಇಂಜಿನಿಯರ್ ನೇಮಕ

ಯೋಜನೆ,ಮಹದಾಯಿ ಮತ್ತು ಭದ್ರಾ ಮೇಲ್ದಂಡೆ ಯೋಜನೆ ಮತ್ತು ಮೇಕೆದಾಟು ಯೋಜನೆಗಳನ್ನು ತ್ವರಿತಗತಿಯಲ್ಲಿ ಮುಗಿಸಲು ಆದ್ಯತೆ ನೀಡುವುದಾಗಿ ಹೇಳಿದ್ದೆವು.

ಅದರ ಪ್ರಕಾರ ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಮಗಾರಿ ಪ್ರಗತಿಪಥದಲ್ಲಿದ್ದು, ಮಹದಾಯಿ ಯೋಜನೆಗೆ ಗ್ರೀನ್ ಸಿಗ್ನಲ್ ಸಿಕ್ಕಿದೆ.ಭದ್ರಾ ಮೇಲ್ದಂಡೆ ಯೋಜನೆಗೆ ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ 5300 ಕೋಟಿ ರೂಪಾಯಿ ಒದಗಿಸಲಾಗಿದೆ. ಉಳಿದಂತೆ ಮೇಕೆದಾಟು ಯೋಜನೆಯ ವಿಷಯವೊಂದು ಬಗೆಹರಿಯದೆ ಉಳಿದಿದೆ.

ಮಾರ್ಚ್ ತಿಂಗಳಲ್ಲಿ ಸುಪ್ರೀಂಕೋರ್ಟ್ ಮುಂದೆ ಮೇಕೆದಾಟು ಯೋಜನೆಗೆ ಸಂಬಂಧಿಸಿದ ವಿಷಯ ವಿಚಾರಣೆಗೆ ಬರಲಿದ್ದು,ಆದಷ್ಟು ಬೇಗ ಈ ಯೋಜನೆಗೂ ಹಸಿರು ನಿಶಾನೆ ಸಿಗುವ ಸಾಧ್ಯತೆಗಳಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ 5300 ಕೋಟಿ ರೂಪಾಯಿ ಹಣ ನೀಡಿರುವುದರಿಂದ ಉಳಿದ ಕಾಮಗಾರಿಯನ್ನು ಒಂದು ವರ್ಷದಲ್ಲಿ ಪೂರ್ಣಗೊಳಿಸಿ, ಮಧ್ಯಕರ್ನಾಟಕದ ನಾಲ್ಕು ಜಿಲ್ಲೆಗಳಿಗೆ ನೀರನ್ನು ಹರಿಸಲಾಗುವುದು. ಮೊದಲ ಬಾರಿ ಅದು ಕರ್ನಾಟಕದ ಒಂದು ಯೋಜನೆಯನ್ನು ರಾಷ್ಟ್ರೀಯ ಯೋಜನೆಯ ವ್ಯಾಪ್ತಿಗೆ ತಂದು ಈ ಪ್ರಮಾಣದ ಹಣ ನೀಡಿದೆ. ಈ ಮಧ್ಯೆ ಭದ್ರಾ ಮೇಲ್ದಂಡೆ ಯೋಜನೆಯನ್ನು ಪೂರ್ಣಗೊಳಿಸಲು 9600 ಕೋಟಿ ರೂಪಾಯಿಗಳ ಅಗತ್ಯವಿದ್ದು, ಈಗ ನೀಡಿರುವ ಹಣವನ್ನು ಹೊರತುಪಡಿಸಿ ಹೆಚ್ಚುವರಿ ಹಣವನ್ನು ನೀಡುವಂತೆ ಕೇಂದ್ರಕ್ಕೆ ಪುನ: ನಾವು ಪ್ರಸ್ತಾವನೆ ಸಲ್ಲಿಸಲಿದ್ದೇವೆ ಎಂದರು.

ಯೋಜನೆಗೆ ಒಟ್ಟಾರೆಯಾಗಿ ಇಪ್ಪತ್ತೂರು ಸಾವಿರ ಕೋಟಿ ರೂಪಾಯಿಗಳ ಅಗತ್ಯವಿತ್ತು.ಆ ಪೈಕಿ ಸುಮಾರು ಹದಿಮೂರು ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ರಾಜ್ಯ ಸರ್ಕಾರ ವೆಚ್ಚ ಮಾಡಿದೆ. ಉಳಿದಂತೆ ಈಗ ಕೇಂದ್ರ ಸರ್ಕಾರದ ನೆರವು ಲಭ್ಯವಾಗಿರುವುದರಿಂದ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಆದ್ಯತೆ ನೀಡುತ್ತೇವೆ ಎಂದು ವಿವರಿಸಿದರು. ಯೋಜನೆ ಪೂರ್ಣಗೊಂಡ ನಂತರ ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು ಹಾಗೂ ತುಮಕೂರು ಜಿಲ್ಲಾ ವ್ಯಾಪ್ತಿಯ 5.62 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯಲಿದೆ.

ಒಟ್ಟಿನಲ್ಲಿ ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿ ಪೂರ್ಣಗೊಂಡರೆ ಸುಮಾರು ಎಪ್ಪತ್ತೈದು ಲಕ್ಷ ಮಂದಿಗೆ ಅನುಕೂಲವಾಗಲಿದೆ ಎಂದರು.

ಫೆ.11ರೊಳಗೆ ಟ್ರಾಫಿಕ್ ದಂಡ ಪಾವತಿಸಿ

ರಿಯಾಯ್ತಿ ಸದವಕಾಶ ಬಳಸಿಕೊಳ್ಳಲು ಪೊಲೀಸ್ ಕಮಿಷ್ನರ್ ಸಲಹೆ

ಮೈಸೂರು, ಫೆ.3(ಎಸ್‌ಬಿಡಿ)– ಟ್ರಾಫಿಕ್ ಸಂಬಂಧಿತ ದಂಡ ಪಾವತಿಯಲ್ಲಿ ನೀಡಲಾಗಿರುವ ಶೇ.50ರಷ್ಟು ರಿಯಾಯ್ತಿ ಸದಾವಕಾಶವನ್ನು ಸಾರ್ವಜನಿಕರು ಬಳಸಿಕೊಳ್ಳುವಂತೆ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಸಲಹೆ ನೀಡಿದ್ದಾರೆ. ಪೊಲೀಸ್ ಇಲಾಖೆಯ ಸಂಚಾರಿ ಇ–ಚಲನ್‌ನಲ್ಲಿ ದಾಖಲಾಗಿರುವ ಪ್ರಕರಣಗಳಲ್ಲಿ ಫೆ.11ರೊಳಗೆ ದಂಡ ಪಾವತಿಸುವವರಿಗೆ ಶೇ.50ರಷ್ಟು ರಿಯಾಯ್ತಿ ಘೋಷಿಸಿ ಸರ್ಕಾರ ಆದೇಶಿಸಿದೆ. ಹಾಗಾಗಿ ಮೈಸೂರು ನಗರ ವ್ಯಾಪ್ತಿಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಸಂಬಂಧ ದಂಡ ಬಾಕಿ ಇದ್ದರೆ ಕೂಡಲೇ ಪಾವತಿಸಿ ರಿಯಾಯ್ತಿ ಪ್ರಯೋಜನ ಪಡೆಯಿರಿ.



ಮೈಸೂರು ನಗರದ ಎಲ್ಲಾ ಸಂಚಾರ ಪೊಲೀಸ್ ಠಾಣೆಗಳು, ಪೊಲೀಸ್ ಆಯುಕ್ತರ ಕಛೇರಿಯ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸೆಂಟರ್, ವಾಹನ ತಪಾಸಣೆ ನಡೆಸುವ ಸಂಚಾರ ಪೊಲೀಸ್ ಅಧಿಕಾರಿಗಳ ಬಳಿ ಹಾಗೂ ಕರ್ನಾಟಕ ಒನ್ ಮೊಬೈಲ್ ಅಪ್ಲಿಕೇಷನ್ ಮೂಲಕವೂ ದಂಡ ಪಾವತಿಸಿ, ರಶೀದಿ ಪಡೆಯುವಂತೆ ಅವರು ತಿಳಿಸಿದ್ದಾರೆ.

ಬಸ್ ಸೇವೆಗಳ ಸುಧಾರಣೆಗೆ ಕರ್ನಾಟಕ–ಆಂಧ್ರಪ್ರದೇಶ ಒಪ್ಪಂದ

ಬೆಂಗಳೂರು, ಫೆ.3– ಎರಡು ರಾಜ್ಯಗಳ ನಡುವೆ ಪ್ರಯಾಣಿಕರ ದಟ್ಟಣೆಯನ್ನು ಹೆಚ್ಚಿಸಲು ಮತ್ತು ಸೌಕರ್ಯಗಳನ್ನು ಸುಧಾರಿಸಲು ಕರ್ನಾಟಕ ಮತ್ತು ಆಂಧ್ರಪ್ರದೇಶ ಸರ್ಕಾರಗಳು ಒಪ್ಪಂದ ಮಾಡಿಕೊಂಡಿವೆ. ಅಧಿಕೃತ ಪತ್ರಿಕಾ ಪ್ರಕಟಣೆಯ ಪ್ರಕಾರ, ಎರಡು ಸರ್ಕಾರಗಳು ಇಲ್ಲಿಯವರೆಗೆ ಒಂದು ಪ್ರಮುಖ ಒಪ್ಪಂದ ಮತ್ತು ಎಂಟು ಪೂರಕ ಒಪ್ಪಂದಗಳನ್ನು ಮಾಡಿಕೊಂಡಿವೆ.

'ಎರಡು ರಾಜ್ಯಗಳ ನಡುವೆ ಪ್ರಯಾಣಿಕರ ದಟ್ಟಣೆ ಹೆಚ್ಚುತ್ತಿರುವ ಕಾರಣ ಮತ್ತು ಪ್ರಯಾಣಿಸುವ ಸಾರ್ವಜನಿಕರಿಗೆ ಉತ್ತಮ ಸಾರಿಗೆ ಸೌಲಭ್ಯವನ್ನು ಒದಗಿಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ವಿ ಅನ್ಬುಕುಮಾರ್ ಮತ್ತು ಆಂಧ್ರಪ್ರದೇಶ ರಾಜ್ಯ ರಸ್ತೆ ಸಾರಿಗೆಯ ಉಪಾಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಿ ತಿರುಮಲ ರಾವ್ ಚರ್ಚೆ ನಡೆಸಿದರು. ಮತ್ತು ಎರಡೂ ರಾಜ್ಯಗಳ ರಾಜ್ಯ ಸಾರಿಗೆ ಸಂಸ್ಥೆಗಳ ಮಾರ್ಗದ ಪ್ರಸ್ತಾವನೆಗಳಿಗೆ ಸಹಿ ಮಾಡಲಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ಈ ಮಾರ್ಗಗಳಲ್ಲಿ ಬಸ್ ಸೇವೆಗಳನ್ನು ನಡೆಸಲು ಉದ್ದೇಶಿತ ಒಂಬತ್ತನೇ ಪೂರಕ ಅಂತರ–ರಾಜ್ಯ ಸಾರಿಗೆ ಒಪ್ಪಂದಕ್ಕೆ ವಿಜಯವಾಡದಲ್ಲಿ ಸಹಿ ಹಾಕಲಾಯಿತು.

ಮೀಸಲಾತಿ ಹೋರಾಟ: ಪ್ರತಿಭಟನಾನಿರತ ಸ್ವಾಮೀಜಿಯವರ ಮೂರು ಮೊಬೈಲ್ ಕಳವು

ಬೆಂಗಳೂರು, ಫೆ.3– ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸುತ್ತಿರುವ ಕೂಡಲ ಸಂಗಮದ ಪಂಚಮ ಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಅವರ ಮೂರು ಮೊಬೈಲ್‌ಗಳು ಕಳುವಾಗಿವೆ. ಈ ಸಂಬಂಧ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಸ್ವಾಮೀಜಿಯವರ ಆಪ್ತ ಸಹಾಯಕ ವಿಶ್ವನಾಥ್ ಅವರು ಮೊಬೈಲ್ ಕಳ್ಳತನದ ಬಗ್ಗೆ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡುವಂತೆ ಆಗ್ರಹಿಸಿ ಸ್ವಾಮೀಜಿಯವರು ಜ. 14ರಿಂದ ಪ್ರತಿಭಟನೆ ಆರಂಭಿಸಿದ್ದಾರೆ. ಸ್ವಾಮೀಜಿ ಬಳಿ ಸ್ಯಾಮ್‌ಸಂಗ್ ಕಂಪನಿಯ ಮೂರು ಮೊಬೈಲ್‌ಗಳಿದ್ದವು. ಅವುಗಳನ್ನು ಆಗಾಗ ವಿಶ್ವನಾಥ್ ಬಳಿ ಇಟ್ಟುಕೊಳ್ಳಲು ಕೊಡುತ್ತಿದ್ದರು.

ಜ. 30ರಂದು ಸಂಜೆ ಉದ್ಯಾನದಲ್ಲಿ ವಾಯು ವಿಹಾರಕ್ಕೆ ಹೋಗಿದ್ದ ಸ್ವಾಮೀಜಿ, ಮೂರು ಮೊಬೈಲ್‌ಗಳನ್ನು ವಿಶ್ವನಾಥ್ ಬಳಿ ನೀಡಿದ್ದರು. ಅದೇ ಮೊಬೈಲ್‌ಗಳನ್ನು ವಿಶ್ವನಾಥ್, ಕಾರಿನಲ್ಲಿ ಇಟ್ಟಿದ್ದು, ಬಾಗಿಲು ಲಾಕ್ ಮಾಡುವುದನ್ನು ಮರೆತಿದ್ದರು. ಇದನ್ನು ಗಮನಿಸಿ ರೂ.30 ಸಾವಿರ ಮೌಲ್ಯದ ಮೊಬೈಲ್‌ಗಳನ್ನು ಕಳುವು ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದರು.

ಮೈಸೂರು ಮಿತ್ರ

ಸ್ನೇಕ್ ಶ್ಯಾಂ ಪ್ರತಿಷ್ಠಾಪಿತ ಶ್ರೀ ಶಿವದತ್ತ ಸಾಯಿ ಮಂದಿರ, ಗೋಶಾಲೆ 3ನೇ ವಾರ್ಷಿಕೋತ್ಸವ

ನಾಳೆ ಧಾರ್ಮಿಕ ಕಾರ್ಯಕ್ರಮದೊಂದಿಗೆ ಪರಿಸರ ಜಾಗೃತಿ, ಗೋಸಂರಕ್ಷಣೆ ಸಂದೇಶ

ಮೈಸೂರು,ಫೆ.3(ಎಂಟಿವೈ)– ಮೈಸೂರಿನ ಕೆಆರ್‌ಎಸ್ ಮುಖ್ಯ ರಸ್ತೆಯ ಮಂಟಿ ಬಳಿ ನಿರ್ಮಿಸಿರುವ ಶ್ರೀ ಶಿವದತ್ತ ಸಾಯಿ ಮಂದಿರ ಹಾಗೂ ಶಿವದತ್ತ ಸಾಯಿ ಗೋಶಾಲೆಯ 3ನೇ ವಾರ್ಷಿಕೋತ್ಸವ ಸಮಾರಂಭವು ಫೆ.5 ರಂದು ಆಯೋಜಿಸಲಾಗಿದೆ ಎಂದು ದೇವಾಲಯದ ಸಂಸ್ಥಾಪಕ, ಉರಗ ತಜ್ಞ ಸ್ನೇಕ್ ಶ್ಯಾಮ್ ತಿಳಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಾತನಾಡಿದ ಅವರು, ಕೋವಿಡ್ ಹಿನ್ನೆಲೆಯಲ್ಲಿ ಎರಡು ವರ್ಷಗಳಿಂದ ದೇವಾಲಯದ ವಾರ್ಷಿಕೋತ್ಸವ ಕಾರ್ಯಕ್ರಮ ನಡೆಸಿರಲಿಲ್ಲ. ವಾರ್ಷಿಕೋತ್ಸವದ ಅಂಗವಾಗಿ ಫೆ.5ರಂದು ಬೆಳಗ್ಗೆ 6.30ಕ್ಕೆ ಅಭಿಷೇಕ, ಅರ್ಚನೆ, ಮಧ್ಯಾಹ್ನ ಮಹಾಮಂಗಳಾರತಿ ನೆರವೇರಿಸಲಾಗುತ್ತದೆ. ಬಳಿಕ ಪ್ರಸಾದ ವಿನಿಯೋಗಿಸಲಾಗುತ್ತಿದೆ ಎಂದರು. ದೇವಾಲಯದಲ್ಲಿ ಧಾರ್ಮಿಕ ಕಾರ್ಯದೊಂದಿಗೆ ಪರಿಸರ ಜಾಗೃತಿ ಮೂಡಿಸಲಾಗುತ್ತದೆ. ಪರಿಸರದಿಂದ ಎಲ್ಲವನ್ನೂ ಪಡೆಯುವ ನಾವು, ಪರಿಸರ ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯ, ನೀರನ್ನು ಉಳಿಸಿ, ಗೋ ರಕ್ಷಣೆ ನಮ್ಮೆಲ್ಲರ ಹೊಣೆ, ಗೋ ಶಾಲೆ, ಆರೋಗ್ಯವೇ ಭಾಗ್ಯ ಮುಂತಾದ ವಿಷಯದ ಕುರಿತು ಅವರು ಜಾಗೃತಿ ಮೂಡಿಸುತ್ತಿದ್ದಾರೆ. ತಮ್ಮ ಗೋ ಶಾಲೆಯಲ್ಲಿ ಪ್ರಸ್ತುತ 22 ಗೋವುಗಳಿದ್ದು, ಅವುಗಳ ಸಂರಕ್ಷಣೆಗೆ ಆರ್ಥಿಕ ತೊಂದರೆ ಉಂಟಾಗಿತ್ತು. ಹಾವುಗಳ ಸಂರಕ್ಷಣೆಯ ವೇಳೆ ಸಾರ್ವಜನಿಕರು ನೀಡುವ ಹಣದಲ್ಲಿಯೇ ನಿರ್ವಹಿಸುತ್ತಿದ್ದೇವೆ. ಮೈಸೂರಿನ ನಾಗರಿಕರು ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವ ಆಚರಣೆಗಾಗಿ ದುಂದು ವೆಚ್ಚ ಮಾಡದೆ, ಶಿವಸಾಯಿ ಗೋ ಶಾಲೆಯ ಗೋವುಗಳಿಗೆ ನೆರವಾಗುವಂತೆ ಮನವಿ ಮಾಡಿದರು.

ನಾಳೆ ಕೃಷಿಯ ಸುತ್ತ ಒಂದು ಚರ್ಚೆ

ಮೈಸೂರು,ಫೆ.3(ಎಂಟಿವೈ)– ಮೈಸೂರಿನ ಬೋಗಾದಿ ರಸ್ತೆಯಲ್ಲಿರುವ ಧ್ವನ್ಯಲೋಕದಲ್ಲಿ ಫೆ. 5 ರಂದು ಬೆಳಗ್ಗೆ 10.30ಕ್ಕೆ 'ಕೃಷಿಯ ಸುತ್ತ ಒಂದು ಚರ್ಚೆ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಟಿ.ಜಿ.ಎಸ್.ಅವಿನಾಶ್ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಹವಾಮಾನ ವೈಪರಿತ್ಯ ಉಂಟಾಗಿ ಕೃಷಿ ಚಟುವಟಿಕೆ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಹಸಿರು ಮನೆ ಅನಿಲಗಳ ಉತ್ಪಾದನೆ ದಿನೇ ದಿನೆ ಹೆಚ್ಚುತ್ತಿದೆ. ಇದರಿಂದ ಓಝೋನ್ ಪದರ ಹಾಳಾಗುತ್ತಿದೆ. ಮತ್ತೊಂದೆಡೆ ಭೂ ತಾಪಮಾನ ಹೆಚ್ಚಾಗುತ್ತಿದೆ. ಕಾಡು ನಾಶ, ಅಕಾಲಿಕ ಮಳೆ, ಅತಿವೃಷ್ಟಿ, ಅನಾವೃಷ್ಟಿ ಕಾಡುತ್ತಿದೆ. ಜೀವ ವೈವಿಧ್ಯತೆ ನಶಿಸಿಹೋಗುತ್ತಿದೆ. ಇದರ ನಡುವೆ ಕೃಷಿ ಕ್ಷೇತ್ರದಲ್ಲಿ ಸಾಕಷ್ಟು ಸವಾಲುಗಳು ಎದುರಾಗಿದೆ. ಈ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಚರ್ಚೆ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು. ಕಾರ್ಯಕ್ರಮದಲ್ಲಿ 'ನಮ್ಮೂರ ಭೂಮಿ ನಮಗಿರಲಿ, ಅನ್ಯರಿಗಲ್ಲ' ಬಳಗದಿಂದ ಪ್ರಕಟಿಸಿರುವ ಭೂ ಸ್ವಾಧೀನ ಒಳ ಸುಳಿವುಗಳು ಪುಸ್ತಕವನ್ನು ಚಿಂತಕ ಪ್ರೊ.ಹಿ.ಶಿ. ರಾಮಚಂದ್ರೇಗೌಡ ಬಿಡುಗಡೆ ಮಾಡಲಿದ್ದಾರೆ. ಚರ್ಚೆಯಲ್ಲಿ ಮುಖ್ಯ ಅತಿಥಿಯಾಗಿ ನಾಗೇಶ್ ಹೆಗ್ಡೆ, ಶಿವಾನಂದ ಕಳವೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸೋಮಶೇಖರ್ ಇದ್ದರು.



ಪ್ರಸಾದ್ ಸ್ಕೂಲ್ ಆಫ್ ರಿದಂಸ್: 16ನೇ ವಾರ್ಷಿಕೋತ್ಸವ



ಮೈಸೂರು, ಫೆ.3(ಎಂಟಿವೈ)– ಪ್ರಸಾದ್ ಸ್ಕೂಲ್ ಆಫ್ ರಿದಂಸ್ ತಾಳವಾದ್ಯ ಪ್ರತಿಷ್ಠಾನ ಟ್ರಸ್ಟ್‌ನ 16ನೇ ವಾರ್ಷಿಕೋತ್ಸವ ಸಮಾರಂಭವು ಫೆ. 5 ರಂದು ಬೆಳಗ್ಗೆ 10.30ಕ್ಕೆ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ಆಯೋಜಿಸಲಾಗಿದೆ ಎಂದು ಸಂಸ್ಥೆಯ ರಾಘವೇಂದ್ರ ಪ್ರಸಾದ್ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ ವೇಳೆ ನಾಲ್ಕು ಮಂದಿ ಸಾಧಕರಿಗೆ ಸನ್ಮಾನ ಮತ್ತು ಶಾಲಾ ಮಕ್ಕಳಿಂದ ಡ್ರಮ್ಸ್ ವಾದನ ಇರುತ್ತದೆ. ಕಾರ್ಯಕ್ರಮದಲ್ಲಿ ರಾಮಾನುಜರಸ್ತೆಯ ಮಡಿವಾಳ ಸ್ವಾಮಿ ಮಠಾಧೀಶ ಶ್ರೀ ಇಮ್ಮಡಿ ಮಡಿವಾಳ ಸ್ವಾಮೀಜಿ ಉದ್ಘಾಟಿಸಲಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಅಧ್ಯಕ್ಷತೆ ವಹಿಸುವರು. ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಕೆ. ರಘುರಾಂ, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್‌ಕುಮಾರ್, ಮನೋವೈದ್ಯೆ ಡಾ. ರೇಖಾ ಮನಶಾಂತಿ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ ಎಂದರು. ಸಂಜೆ 5 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ವೆಂಗೀಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಚಲನಚಿತ್ರ ನಟರಾದ ಅರುಣ್‌ಸಾಗರ್, ಶಿವಾಜಿರಾವ್ ಜಾದವ್, ಗಾಯಕ ಬಿ. ಲೋಕನಾಥ್, ನಟ ಸುಪ್ರೀತ್ ವಿಜಯೇಂದ್ರ ಪಾಲ್ಗೊಳ್ಳುತ್ತಿದ್ದಾರೆ. ಕಾರ್ಯಕ್ರಮದ ಆರಂಭ ಮತ್ತು ಅಂತ್ಯದಲ್ಲಿ ರುಚಿತಾ ರಾಜೇಶ್ ಮತ್ತು ವಿದುಷಿ ಲಿಖಿತಾ ಶ್ರೀವತ್ಸ ಅವರಿಂದ ಭರತನಾಟ್ಯ ಇರುತ್ತದೆ ಎಂದು ಅವರು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಅಜಯ್‌ಶಾಸ್ತ್ರಿ, ವಿಕ್ರಂ ಅಯ್ಯಂಗಾರ್, ಜಗದೀಶ್ ಇದ್ದರು.

ನಾಲ್ವಡಿ ನಿರ್ಮಾಣದ ಲಲಿತಾದ್ರಿಪುರ ನವೀಕೃತ ಪಂಚಾಯ್ತಿ ಕಟ್ಟೆ ಉದ್ಘಾಟನೆ

ಮಹಾರಾಜರ ಮಾದರಿ ಗ್ರಾಮದ ಐತಿಹಾಸಿಕ ಸ್ಮಾರಕ ಸಂರಕ್ಷಣೆ

ಮೈಸೂರು, ಫೆ.3(ಎಸ್‌ಬಿಡಿ)– ಮೈಸೂರಿನ ಲಲಿತಾದ್ರಿಪುರ ಗ್ರಾಮದ ಶತಮಾನದ ನವೀಕೃತ 'ನ್ಯಾಯ ಸಭಾಂಗಣ' ಉದ್ಘಾಟನೆಗೊಂಡಿದೆ.

ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1914ರಲ್ಲಿ ನಿರ್ಮಿಸಿದ 'ನ್ಯಾಯ ಸಭಾಂಗಣ(ಪಂಚಾಯ್ತಿ ಕಟ್ಟೆ)'ವನ್ನು ಗ್ರಾಮಸ್ಥರು ನವೀಕರಣ ಮಾಡಿಸಿದ್ದು, ಹೋಮಹವನ ಇನ್ನಿತರ ಪೂಜಾ ಕೈಂಕರ್ಯಗಳೊಂದಿಗೆ ಉದ್ಘಾಟನೆ ನೆರವೇರಿಸಲಾಗಿದೆ.

ಚಾಮುಂಡಿ ಬೆಟ್ಟದ ತಪ್ಪಲಿನ 'ಲಲಿತಾದ್ರಿಪುರ' ನಾಲ್ವಡಿ ಕೃಷ್ಣರಾಜ ಒಡೆಯರ್ ನಿರ್ಮಿಸಿದ ಮಾದರಿ ಗ್ರಾಮ. ಇಲ್ಲಿ ಪಂಚಾಯ್ತಿ ನಡೆಸಲು, ಧಾರ್ಮಿಕ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲು, ಹೊರಗಿನಿಂದ ಬಂದವರು ತಂಗಲು 'ನ್ಯಾಯಾಂಗ ಸಭಾಂಗಣ' ನಿರ್ಮಿಸಿದ್ದಾರೆ. ಮಹಡಿ ವಿನ್ಯಾಸದ ಈ ಕಟ್ಟಡ ವಿಶಾಲ ಸಭಾಂಗಣ, 2 ಕೊಠಡಿಗಳು, ಪಡಸಾಲೆ ಒಳಗೊಂಡಿದೆ. ಮುಂಭಾಗದಲ್ಲಿ 60 ಅಡಿಗೂ ಹೆಚ್ಚು ಖಾಲಿ ಜಾಗವಿದೆ.

ಹಿಂದೆ ಐದು ಗ್ರಾಮದ ಹಿರಿಯರು ಪ್ರತಿ ತಿಂಗಳು ಇಲ್ಲಿ ಸಭೆ ನಡೆಸುತ್ತಿದ್ದ ಕಾರಣ 'ಪಂಚಾಯ್ತಿ ಕಟ್ಟೆ' ಎಂದೂ ಕರೆಯಲಾಗುತ್ತದೆ. ಕೆಲವೊಮ್ಮೆ ಪಂಚಾಯ್ತಿ ಸಭೆಗಳಲ್ಲಿ ಮಹಾರಾಜರೂ ಭಾಗಿಯಾಗುತ್ತಿದ್ದರಂತೆ ಎಂದು ಗ್ರಾಮಸ್ಥರು ಹೇಳುತ್ತಾರೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿತ್ವದ ಮಾದರಿ ಕಾರ್ಯಗಳಲ್ಲಿ ಇದೂ ಒಂದಾಗಿದೆ. 2 ವರ್ಷಗಳ ಹಿಂದೆ ಗ್ರಾಮದ ಶತಮಾನೋತ್ಸವವನ್ನು ಸಂಭ್ರಮದಿಂದ ಆಚರಿಸಿದ ಗ್ರಾಮಸ್ಥರು ಇದೀಗ ನ್ಯಾಯಾಂಗ ಸಭಾಂಗಣ (ಪಂಚಾಯ್ತಿ ಕಟ್ಟೆ)ವನ್ನು ನವೀಕರಣಗೊಳಿಸಿ ಸಂರಕ್ಷಿಸಿಕೊಂಡಿದ್ದಾರೆ.

ಈ ಬಗ್ಗೆ ಗ್ರಾಮದವರೇ ಆದ ಕರ್ನಾಟಕ ಮೃಗಾಲಯ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಪ್ರತಿಕ್ರಿಯಿಸಿ, ನಾಲ್ವಡಿ ಅವರು 1914ರಲ್ಲಿ ನಿರ್ಮಿಸಿರುವ ನ್ಯಾಯಾಂಗ ಸಭಾಂಗಣ ದುಸ್ಥಿತಿ ತಲುಪಿತ್ತು. ಮಂಗಳೂರು ಹೆಂಚಿನ ಮೇಲ್ಛಾವಣಿ, ಕೆಲ ಮರದ ವಸ್ತುಗಳು ಹಾಳಾಗಿದ್ದವು. ಕೆಲವೆಡೆ ಗಾರೆ ಉದುರಿತ್ತು. ಮಹಾರಾಜರ ಕೊಡುಗೆಯಾದ ನ್ಯಾಯಾಂಗ ಸಭಾಂಗಣವನ್ನು ಸಂರಕ್ಷಿಸಿಕೊಳ್ಳುವ ನಿಟ್ಟಿನಲ್ಲಿ ಗ್ರಾಮಸ್ಥರೆಲ್ಲಾ ನಿರ್ಧರಿಸಿದ್ದೆವು. ಅದರಂತೆ ಗ್ರಾಮದಲ್ಲಿ ಹಣ ಸಂಗ್ರಹಿಸಿ ವರ್ಷದಿಂದ ನವೀಕರಣ ಕಾಮಗಾರಿ ನಡೆಸಲಾಗಿತ್ತು. ಮೂಲರೂಪಕ್ಕೆ ಸ್ವಲ್ಪವೂ ಹಾನಿಯಾಗದಂತೆ ನವೀಕರಣಗೊಳಿಸಲಾಗಿದೆ. ಹೊಸ ವಿನ್ಯಾಸದ ಮಂಗಳೂರು ಹೆಂಚುಗಳನ್ನೇ ಮೇಲ್ಛಾವಣಿಗೆ ಅಳವಡಿಸಲಾಗಿದೆ. ಸದ್ಯ ಸುಂದರವಾಗಿ ಕಂಗೊಳಿಸುತ್ತಿರುವ ನ್ಯಾಯ ಸಭಾಂಗಣವನ್ನು ಧಾರ್ಮಿಕ ಕೈಂಕರ್ಯಗಳೊಂದಿಗೆ ವಿಧ್ಯುಕ್ತವಾಗಿ ಉದ್ಘಾಟಿಸಲಾಗಿದೆ ಎಂದು ತಿಳಿಸಿದರು. ಉದ್ಘಾಟನೆ ಕಾರ್ಯಕ್ರಮದಲ್ಲಿ ಪಟೇಲ್ ಗಂಗಾಧರ್, ನಾಡಗೌಡರು ತಮ್ಮಯ್ಯಪ್ಪ, ಆಲನಹಳ್ಳಿ ಗ್ರಾಮ ಪಂಚಾಯ್ತಿ ಮಾಜಿ ಅಧ್ಯಕ್ಷ ಮಾದಪ್ಪ, ಹುಚ್ಚಪ್ಪಚಾರಿ, ಎಂ.ಬಿ.ನಾಯಕ್, ಲಲಿತಾದ್ರಿಪುರದ ಗೌಡ್ರು ಮಾದಪ್ಪ, ಗೌಡ್ರು ಸೋಮಣ್ಣ, ಗೌಡ್ರು ರವಿ, ಕಾಳಪ್ಪ, ಬಸವಚಾರಿ ಸೇರಿದಂತೆ ಮುಖಂಡರು ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು.





ಚಾಮುಂಡಿಬೆಟ್ಟದ ತಪ್ಪಲಿನ ಲಲಿತಾದ್ರಿಪುರ ಗ್ರಾಮದ ಐತಿಹಾಸಿಕ ನವೀಕೃತ ನ್ಯಾಯಾಂಗ ಸಭಾಂಗಣ(ಪಂಚಾಯ್ತಿ ಕಟ್ಟೆ) ಉದ್ಘಾಟನೆ ವೇಳೆ ಹಾಜರಿದ್ದ ಗ್ರಾಮಸ್ಥರು. ಪಂಚಾಯ್ತಿ ಕಟ್ಟೆಯ ಹಿಂದಿನ ಸ್ಥಿತಿಯನ್ನು ಬಲ ಚಿತ್ರದಲ್ಲಿ ಕಾಣಬಹುದು.

ರಮೇಶ್ ಜಾರಕಿಹೊಳಿ–ಅಮಿತ್ ಶಾ ಭೇಟಿ

ಬೆಂಗಳೂರು, ಫೆ.3– ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ, ಸಿಡಿ ಪ್ರಕರಣವನ್ನು ಸಿಬಿಐಗೆ ನೀಡುವಂತೆ ಒತ್ತಾಯಿಸಿದ್ದಾರೆ. ಈಗಾಗಲೇ ಸಿಎಂ ಬಸವರಾಜ ಬೊಮ್ಮಾಯಿ ಹಾಗೂ ಗೃಹ ಸಚಿವ ಆರಗ ಜ್ಞಾನೇಂದ್ರ ಅವರಿಗೆ ದಾಖಲೆ ಸಮೇತ ಮಾಹಿತಿ ನೀಡಿದ್ದಾರೆ. ಈ ಬಗ್ಗೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಭರವಸೆ ಕೊಟ್ಟಿದ್ದಾರಂತೆ. ಇದರ ನಡುವೆ ಮಾಜಿ ಸಚಿವ ರಮೇಶ್ ಜಾರಕಿಹೊಳಿ ದೆಹಲಿಗೆ ತೆರಳಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಭೇಟಿ ಮಾಡಿದ್ದಾರೆ.

ಸಿಡಿ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬಳಿ ರಾಜಕಾರಣಿಗಳು, ಹಿರಿಯ ಅಧಿಕಾರಿಗಳ 100ಕ್ಕೂ ಹೆಚ್ಚು ಸಿಡಿಗಳಿದ್ದು, ಸಿಬಿಐ ತನಿಖೆಯಲ್ಲಿ ಹೊರ ಬೀಳಲಿದೆ ಎಂದು ಜಾರಕಿಹೊಳಿ ತಿಳಿಸಿದ್ದಾರೆ.

ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಹತ್ಯೆ ಪ್ರಕರಣ

ಅಕ್ರಮ ನಿರ್ಮಾಣ ನೆಲಸಮ ತಡೆಯಾಜ್ಞೆ ತೆರವು ವಿಚಾರಣೆ ಫೆ.6ಕ್ಕೆ ಮುಂದೂಡಿಕೆ

ಮೈಸೂರು, ಫೆ.3(ಆರ್‌ಕೆಬಿ)–ನಿವೃತ್ತ ಇಂಟೆಲಿಜೆನ್ಸಿ ಬ್ಯೂರೋ (ಐಬಿ) ಅಧಿಕಾರಿ ಆರ್.ಎನ್. ಕುಲಕರ್ಣಿ ಅವರ ಹತ್ಯೆಗೆ ಕಾರಣವಾದ ಮನೆಯ ಅಕ್ರಮ ನಿರ್ಮಾಣ ತೆರವಿಗೆ ನೀಡಲಾಗಿದ್ದ ತಡೆಯಾಜ್ಞೆ ತೆರವು ಸಂಬಂಧ ಅಂತಿಮ ವಾದ–ಪ್ರತಿವಾದಕ್ಕೆ ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಫೆ.6ಕ್ಕೆ ದಿನಾಂಕ ನಿಗದಿಪಡಿಸಿದೆ.



ನ್ಯಾಯಾಲಯ ನೀಡಿದ್ದ ತಡೆಯಾಜ್ಞೆ ತೆರವಿಗಾಗಿ ಮೈಸೂರು ಮಹಾನಗರ ಪಾಲಿಕೆ ಅರ್ಜಿ ಸಲ್ಲಿಸಿತ್ತು. ಇದರ ವಿಚಾರಣೆ ನಡೆಯುತ್ತಿದ್ದು, ಇಂದು (ಫೆ.3) ಅಂತಿಮ ವಾದ–ಪ್ರತಿವಾದ ನಡೆಯಬೇಕಿತ್ತು. ಆದರೆ ನಗರ ಪಾಲಿಕೆ ವಕೀಲರ ಅನುಪಸ್ಥಿತಿಯ ಕಾರಣ ನ್ಯಾಯಾಲಯವು ವಿಚಾರಣೆಯನ್ನು ಫೆ.6ಕ್ಕೆ ಮುಂದೂಡಿದೆ ಎಂದು ಪಾಲಿಕೆ ವಲಯ ಕಚೇರಿ–3ರ ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದರು.

ವಿವರ: ಮೈಸೂರಿನ ಟಿ.ಕೆ.ಲೇಔಟ್ 4ನೇ ಹಂತದ 13ನೇ ಮುಖ್ಯ ರಸ್ತೆಯಲ್ಲಿರುವ ನಿವೃತ್ತ ಐಬಿ ಅಧಿಕಾರಿ ಆರ್.ಎನ್. ಕುಲಕರ್ಣಿ ಅವರ ಮನೆಗೆ ಹೊಂದಿಕೊಂಡಂತಿರುವ ಮಾದಪ್ಪ ಎಂಬುವರ ಮನೆಯನ್ನು ಸೆಟ್‌ಬ್ಯಾಕ್ ಬಿಡದೆ ನಗರ ಪಾಲಿಕೆಯ ನಿಯಮ ಉಲ್ಲಂಘಿಸಿ ನಿರ್ಮಾಣ ಮಾಡಲಾಗುತ್ತಿತ್ತು. ಇದರ ವಿರುದ್ಧ ಕುಲಕರ್ಣಿ ಅವರು ಪಾಲಿಕೆಗೆ ಆಕ್ಷೇಪಣೆ ಸಲ್ಲಿಸಿದ್ದರು. ಅದು ಪ್ರಯೋಜನಕ್ಕೆ ಬಾರದಿದ್ದಾಗ ಪಾಲಿಕೆ ಆಯುಕ್ತರು ಮತ್ತು ಪಕ್ಕದ ಮನೆ ಮಾಲೀಕ ಮಾದಪ್ಪ ಅವರನ್ನು ಪ್ರತಿವಾದಿಗಳನ್ನಾಗಿ ಮಾಡಿ ಮೈಸೂರಿನ ಸಿಟಿ ಸಿವಿಲ್ ಕೋರ್ಟ್ ಮತ್ತು ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರು.

ಈ ಹಿನ್ನೆಲೆಯಲ್ಲಿ ಅಕ್ರಮ ನಿರ್ಮಾಣ ತೆರವುಗೊಳಿಸುವಂತೆ ಮನೆ ಮಾಲೀಕ ಮಾದಪ್ಪ ಅವರಿಗೆ ನಗರ ಪಾಲಿಕೆ ವಲಯ ಕಚೇರಿ–3ರಿಂದ ನೋಟಿಸ್‌ಗಳನ್ನು ಜಾರಿ ಮಾಡಲಾಗಿತ್ತು. ತಿಂಗಳುಗಟ್ಟಲೇ ಆದರೂ ಅಕ್ರಮ ನಿರ್ಮಾಣ ತೆರವುಗೊಳಿಸಿರಲಿಲ್ಲ. ಆದರೆ ಕುಲಕರ್ಣಿ ಅವರ ಕಾನೂನು ಹೋರಾಟ ಮುಂದುವರೆದಿತ್ತು. ಇದೇ ಕಾರಣಕ್ಕಾಗಿ 2022ರ ನ.4ರಂದು ಸಂಜೆ ಕುಲಕರ್ಣಿ ಅವರು ಮಾನಸ ಗಂಗೋತ್ರಿ ಕ್ಯಾಂಪಸ್‌ನಲ್ಲಿ ವಾಯು ವಿಹಾರದಲ್ಲಿದ್ದಾಗ ಕಾರು ಹರಿಸಿ ಅವರನ್ನು ಹತ್ಯೆ ಮಾಡಲಾಗಿತ್ತು. ಈ ಪ್ರಕರಣದಲ್ಲಿ ಮನೆ ಮಾಲೀಕ ಮಾದಪ್ಪ ಅವರ ಪುತ್ರ ಮನು ಮತ್ತು ಆತನ ಸ್ನೇಹಿತ ವರುಣ್ ಗೌಡನನ್ನು ಪೊಲೀಸರು ಬಂಧಿಸಿದ್ದರು. ಕುಲಕರ್ಣಿ ಅವರ ಹತ್ಯೆಗೆ ಅಕ್ರಮ ನಿರ್ಮಾಣ ತೆರವಿಗೆ ಅವರು ನಡೆಸುತ್ತಿದ್ದ ಕಾನೂನು ಹೋರಾಟವೇ ಕಾರಣ ಎಂಬುದು ಪೊಲೀಸರ ಪ್ರಾಥಮಿಕ ತನಿಖೆಯಲ್ಲಿ ಬಯಲಾಗಿತ್ತು.

ನಂತರ ನಗರ ಪಾಲಿಕೆಯು ಅಕ್ರಮ ನಿರ್ಮಾಣ ತೆರವಿಗಾಗಿ ಅಂತಿಮ ನೋಟಿಸ್ ಜಾರಿ ಮಾಡಿದ್ದು, ಅದಕ್ಕೆ ಮಾದಪ್ಪ ಸ್ಪಂದಿಸದ ಕಾರಣ ನ.15ರಂದು ಪಾಲಿಕೆ ಅಧಿಕಾರಿಗಳೇ ಅಕ್ರಮ ನಿರ್ಮಾಣ ತೆರವುಗೊಳಿಸಲು ಕಾರ್ಯಾಚರಣೆಗಿಳಿದಿದ್ದರು. ಅವರ ಕಾರ್ಯಾಚರಣೆ ಪೂರ್ಣಗೊಳ್ಳುವುದರೊಳಗಾಗಿ ಮಾದಪ್ಪ ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಿಂದ ಅಕ್ರಮ ನಿರ್ಮಾಣ ತೆರವಿಗೆ ತಡೆಯಾಜ್ಞೆ ತಂದಿದ್ದರು. ಇದರಿಂದಾಗಿ ಪಾಲಿಕೆ ಅಧಿಕಾರಿಗಳು ಅಕ್ರಮ ನಿರ್ಮಾಣ ತೆರವು ಕಾರ್ಯಾಚರಣೆಯನ್ನು ಅರ್ಧಕ್ಕೇ ಬಿಟ್ಟು ಬಂದಿದ್ದರು.

ಅದೇ ವೇಳೆ ನ್ಯಾಯಾಲಯದ ತಡೆಯಾಜ್ಞೆ ತೆರವಿಗಾಗಿ 2022ರ ಡಿಸೆಂಬರ್ ತಿಂಗಳಿನಲ್ಲೇ ಪಾಲಿಕೆ ವತಿಯಿಂದ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿತ್ತು. ಇದರ ವಿಚಾರಣೆ ಹಂತ–ಹಂತವಾಗಿ ನಡೆದು ಇಂದು ಅಂತಿಮ ವಾದ–ಪ್ರತಿವಾದ ನಡೆಯಬೇಕಿತ್ತು. ಆದರೆ ವಿಚಾರಣೆಯನ್ನು ನ್ಯಾಯಾಲಯ ಫೆ6ಕ್ಕೆ ಮುಂದೂಡಿದೆ.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಅನಂತಚಾರ್ಯ ಕಟಗೇರಿಗೆ ಸನ್ಮಾನ

ಮೈಸೂರು, ಫೆ.3(ಎಸ್‌ಪಿಎನ್)– ರಾಜ್ಯೋತ್ಸವ ಪಶಸ್ತಿ ಪುರಸ್ಕೃತರಾದ ಅನಂತಚಾರ್ಯ ಕಟಗೇರಿ ಅವರನ್ನು ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ ವತಿಯಿಂದ ಶುಕ್ರವಾರ ಸನ್ಮಾನಿಸಲಾಯಿತು.

ಮೈಸೂರು ಕೃಷ್ಣಮೂರ್ತಿಪುರಂನ ಶಾರದಾ ವಿಲಾಸ ಕಾಲೇಜು ಶತಮಾನೋತ್ಸವ ಭವನದಲ್ಲಿ ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ ವತಿಯಿಂದ ಮಧ್ವ–ಪುರಂದರ ನಮನ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಅನಂತಚಾರ್ಯ ಕಟಗೇರಿ ದಾಸರನ್ನು ಪಂಡಿತ್ ಮಧುಸೂದನ್ ಆಚಾರ್ಯ ಅವರು ಸನ್ಮಾನಿಸಿ, ಮಾತನಾಡಿದರು. ದಾಸವರೇಣ್ಯರ ಕಾಲಘಟ್ಟದಲ್ಲಿ ಭಗವಂತನನ್ನು, ತಮ್ಮ ಗಾಯನದ ಮೂಲಕ ಒಲಿಸಿಕೊಳ್ಳುತ್ತಿದ್ದರು. ಅದರಂತೆ 92 ವರ್ಷದ ಅನಂತಚಾರ್ಯ ಕಟಗೇರಿ ಅವರ ಗಾಯನ ಇಂದಿಗೂ ಎಲ್ಲಾ ವರ್ಗದವರನ್ನು ಆಕರ್ಷಿಸುತ್ತಿದೆ. ಇಂತಹ ಮಹಾನ್ ಕಲಾ ತಪಸ್ವಿಗೆ ತಡವಾಗಿ ಆದರೂ ರಾಜ್ಯೋತ್ಸವ ಪ್ರಶಸ್ತಿ ನೀಡಿ, ಗೌರವಿಸಿರುವುದು ಸಂತೋಷದ ಸಂಗತಿ ಎಂದರು. ಹಿರಿಯ ಕಲಾವಿದ ಅನಂತಚಾರ್ಯರಿಗೆ ವಯಸ್ಸಾಗಿರುವುದು ದೇಹಕ್ಕೆ. ಆದರೆ, ಅವರ ಕಂಠ ಕಂಚಿನದ್ದು. ಹಿಂದಿನ ಕಾಲದಲ್ಲಿ ಭಗವಂತನನ್ನು ತಮ್ಮ ಭಕ್ತಿಮಾರ್ಗದ ಮೂಲಕ ಒಲಿಸಿಕೊಳ್ಳುತ್ತಿದ್ದರು. ಇಂದಿಗೂ ಅನಂತಚಾರ್ಯರ ದಾಸರ ಪದ್ಯಗಳನ್ನು ಕೇಳಿದರೆ, ಮತ್ತೆ ಮತ್ತೆ ಕೇಳಬೇಕು ಎನ್ನಿಸುತ್ತದೆ. ತಡವಾಗಿಯಾದರೂ ರಾಜ್ಯೋತ್ಸವ ಪ್ರಶಸ್ತಿ ನೀಡಿರುವುದು ಸ್ವಾಗತಾರ್ಹ ಎಂದರು. ಕಾರ್ಯಕ್ರಮದಲ್ಲಿ ಪಂಡಿತ್ ಬಾದರಾಯನಾಚಾರ್, ವಿಪ್ರ ಮುಖಂಡ ಕೆ. ರಘುರಾಮ ವಾಜಪೇಯಿ, ವಿಜಯ ವಿಠಲ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ವಾಸುದೇವ ಭಟ್, ಎಸ್ ರವಿಕುಮಾರ್, ಶ್ರೀ ಗುರು ರಾಘವೇಂದ್ರ ಸೇವಾ ಕೃಷ್ಣ ಅಧ್ಯಕ್ಷ ಎಸ್.ಬಿ. ವಾಸುದೇವ ಮೂರ್ತಿ, ಎನ್.ಎಂ.ನವೀನ್ ಕುಮಾರ್, ಸಾಮಾಜಿಕ ಹೋರಾಟಗಾರ ವಿಕ್ರಮ ಅಯ್ಯಂಗಾರ್ ಹಾಗೂ ಇನ್ನಿತರರು ಭಾಗವಹಿಸಿದ್ದರು. ವೇದಿಕೆ ಕಾರ್ಯಕ್ರಮದ ನಂತರ ಹಿರಿಯ ಕಲಾವಿದ ಹುಸೇನ್ ಸಾಬ್ ಹಾಗೂ ಸಂಗಡಿಗರಿಂದ ಹರಿನಾಮ ಸಂಕೀರ್ತನೆಗಳನ್ನು ಪ್ರಸ್ತುತ ಪಡಿಸಿದರು.



ಮೈಸೂರು ಕೃಷ್ಣಮೂರ್ತಿಪುರಂನ ಶಾರದಾ ವಿಲಾಸ ಕಾಲೇಜು ಶತಮಾನೋತ್ಸವ ಭವನದಲ್ಲಿ ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಜ್ಯೋತ್ಸವ ಪಶಸ್ತಿ ಪುರಸ್ಕೃತರಾದ ಅನಂತಚಾರ್ಯ ಕಟಗೇರಿ ಅವರನ್ನು ಸನ್ಮಾನಿಸಲಾಯಿತು.

ಇಸ್ಕಾನ್ ಬಿಸಿಯೂಟ ತಯಾರಿಕಾ ಘಟಕ ಪರಿಶೀಲಿಸಿದ ಡಿಡಿಪಿಐ



ಮೈಸೂರು, ಫೆ.3(ಎಸ್‌ಪಿಎನ್)– ಮೈಸೂರು ನಗರ ಮತ್ತು ತಾಲೂಕು ವ್ಯಾಪ್ತಿಯ ಆಯ್ದ ಕೆಲವು ಶಾಲೆಗಳಿಗೆ ಮಧ್ಯಾಹ್ನದ ಬಿಸಿಯೂಟ ಪೂರೈಸುತ್ತಿರುವ ಇಸ್ಕಾನ್ ಸಂಸ್ಥೆಯ ಬಿಸಿಯೂಟ ತಯಾರಿಕಾ ಸ್ಥಳಕ್ಕೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಡಿಡಿಪಿಐ ರಾಮಚಂದ್ರ ರಾಜೇ ಅರಸ್ ಅವರು ಶುಕ್ರವಾರ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಮೈಸೂರು ನಗರ ವ್ಯಾಪ್ತಿಯ ಹಾಗೂ ಮೈಸೂರು ತಾಲೂಕಿನ ಸುಮಾರು 142 ಶಾಲೆಗಳ 18 ಸಾವಿರ ಮಕ್ಕಳಿಗೆ ಪ್ರತಿದಿನ ಬಿಸಿಯೂಟ ಪೂರೈಕೆಯಾಗುತ್ತಿದೆ. ಇದೀಗ ಮಹದೇವಪುರದಲ್ಲಿ ಮತ್ತೊಂದು ಬಿಸಿಯೂಟ ತಯಾರಿಕಾ ಘಟಕ ಆರಂಭಿಸಲು ಸಿದ್ಧತೆಗಳು ನಡೆದಿದೆ ಎಂದು ಇಸ್ಕಾನ್ ಸಂಸ್ಥೆಯವರು ಮಾಹಿತಿ ನೀಡಿದ್ದು, ಅಲ್ಲಿಗೂ ಭೇಟಿ ನೀಡುತ್ತೇನೆ ಎಂದು ಮಾಧ್ಯಮಗಳಿಗೆ ತಿಳಿಸಿದರು.

ಇಂದು ಇಸ್ಕಾನ್ ಬಿಸಿಯೂಟ ತಯಾರಿಕಾ ಘಟಕಕ್ಕೆ ಭೇಟಿ ನೀಡಿ, ಅಡುಗೆ ಕೋಣೆ, ಬಿಸಿಯೂಟಕ್ಕೆ ಬಳಸುವ ಪರಿಕರಗಳ ಸ್ವಚ್ಛತೆ ಬಗ್ಗೆ ಪರಿಶೀಲಿಸಿದ್ದು, ಅಡುಗೆ ಕಾರ್ಯದಲ್ಲಿ ತೊಡಗುವ ಸಿಬ್ಬಂದಿಗಳ ಯೋಗಕ್ಷೇಮ ಹಾಗೂ ಬಿಸಿಯೂಟಕ್ಕೆ ಬಳಸುವ ಆಹಾರ ಪದಾರ್ಥಗಳನ್ನು ಪರಿಶೀಲಿಸಲಾಗಿದೆ ಎಂದು ತಿಳಿಸಿದರು. ಈ ಸಂಸ್ಥೆ ವತಿಯಿಂದ ನಗರ ಮತ್ತು ತಾಲೂಕಿನ ಆಯ್ದ ಸರ್ಕಾರಿ ಶಾಲಾ ಮಕ್ಕಳಿಗೆ ಪೂರೈಸುತ್ತಿರುವ ಬಿಸಿಯೂಟ ಊಟ ಸೇವಿಸಿ ಗುಣಮಟ್ಟ ಪರಿಶೀಲಿಸಲಾಗಿದೆ. ಇಸ್ಕಾನ್ ಸಂಸ್ಥೆ ಪೂರೈಸುತ್ತಿರುವ ಬಿಸಿಯೂಟ ಗುಣಮಟ್ಟ ಕಾಪಾಡಿಕೊಂಡಿದ್ದು, ಇಲ್ಲಿನ ಎಲ್ಲಾ ಸಿಬ್ಬಂದಿ ಅಡುಗೆ ತಯಾರಿಕಾ ಘಟಕದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಿರುವುದು ಮೆಚ್ಚುಗೆ ವಿಷಯ ಎಂದರು.

ಈ ಸಂದರ್ಭದಲ್ಲಿ ಇಸ್ಕಾನ್ ಸಂಸ್ಥೆಯಲ್ಲಿ ಬಿಸಿಯೂಟ ಜವಾಬ್ದಾರಿ ನಿರ್ವಹಿಸುತ್ತಿರುವ ಕೃಷ್ಣಶೇಖರದಾಸ್, ಪಂಕಜಾದ್ರಿ ದಾಸ್, ಅಕ್ಷಯ ಪಾತ್ರೆ ಫೌಂಡೇಶನ್ ವ್ಯವಸ್ಥಾಪಕ ಜ್ಞಾನೇಶ್ ನಟರಾಜ್, ಮೈಸೂರು ಜಿಲ್ಲಾ ಅಕ್ಷರ ದಾಸೋಹ ಅಧಿಕಾರಿ ರೇವಣ್ಣ, ಉಪ ನಿರ್ದೇಶಕರ ಕಛೇರಿಯ ಎಪಿಸಿ ಸುರೇಶ್, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳಾದ ಸಿದ್ದರಾಜು, ತಾಲೂಕು ದೈಹಿಕ ಶಿಕ್ಷಣ ಅಧಿಕಾರಿ ಡಾ. ಗಣೇಶ್ ಕುಮಾರ್, ದಕ್ಷಿಣ ವಲಯದ ಡಾ.ಮಹಮದ್ ರಫೀಕ್ ಪಾಷ, ಮೈಸೂರು ಜಿಲ್ಲಾ ಪ್ರೌಢಶಾಲಾ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ನಾಗೇಶ್, ಮೈಸೂರು ತಾಲ್ಲೂಕು ದೈಹಿಕ ಶಿಕ್ಷಕರ ಸಂಘದ ಸದಸ್ಯ ಸುರೇಶ್, ಕಛೇರಿ ಅಧೀಕ್ಷಕ ಗಣೇಶ್ ಹಾಗೂ ಅಲ್ಲಿಯ ಸಿಬ್ಬಂದಿ ವರ್ಗದವರು ಹಾಜರಿದ್ದರು.


ಶಂಕರಾಭರಣ, ಸಾಗರ ಸಂಗಮಂ ಸಿನಿಮಾಗಳ

ಖ್ಯಾತ ನಿರ್ದೇಶಕ ಕೆ.ವಿಶ್ವನಾಥ್ ನಿಧನ

ಹೈದರಾಬಾದ್, ಫೆ.3–ಸ್ವಾತಿ ಮುತ್ಯಂ, ಶಂಕರಾಭರಣಂ, ಸಾಗರ ಸಂಗಮಂ ಸೇರಿದಂತೆ ಹಲವು ಅದ್ಭುತ ಸಿನಿಮಾಗಳನ್ನು ನಿರ್ದೇಶಿಸಿದ್ದ ಖ್ಯಾತ ನಿರ್ದೇಶಕ ಕಾಶಿನಾಥುನಿ ವಿಶ್ವನಾಥ್ (ಕೆ.ವಿಶ್ವನಾಥ್) ಗುರುವಾರ (ಫೆ.2) ನಿಧನರಾದರು.

ತೆಲುಗು ಚಿತ್ರರಂಗದಲ್ಲಿ ಕಲಾ ತಪಸ್ವಿ ಎಂದೇ ಕೆ.ವಿಶ್ವನಾಥ್ (92) ಪ್ರಖ್ಯಾತಿ ಹೊಂದಿದ್ದರು. ಹಲವು ದಿನಗಳಿಂದ ವಯೋಸಹಜ ಅನಾರೋಗ್ಯಕ್ಕೀಡಾಗಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸ್ವಾಭಿಷೇಕಂ, ಠಾಗೂರ್, ಅತಡು ಸೇರಿದಂತೆ ಹಲವು ಸಿನಿಮಾಗಳಲ್ಲಿ ನಟಿಸಿದ್ದ ವಿಶ್ವನಾಥ್ ನಿರ್ದೇಶಕರಾಗಿ ಅಷ್ಟೇ ಅಲ್ಲದೇ ನಟರಾಗಿ, ಚಿತ್ರಕಥೆಗಾರರಾಗಿಯೂ ಛಾಪು ಮೂಡಿಸಿದ್ದರು.

ಕೆ ವಿಶ್ವನಾಥ್ ಅವರು 5 ರಾಷ್ಟ್ರೀಯ ಸಿನಿಮಾ ಅವಾರ್ಡ್‌ಗಳನ್ನು ಪಡೆದಿದ್ದು, ರಾಜ್ಯದ ನಂದಿ ಪ್ರಶಸ್ತಿಗೆ 7 ಬಾರಿ ಭಾಜನರಾಗಿದ್ದಾರೆ. 10 ಫಿಲ್ಮ್ ಫೇರ್ ಅವಾರ್ಡ್‌ಗಳು, ಹಿಂದಿಯಲ್ಲಿ ಒಂದು ಫಿಲ್ಮ್ ಫೇರ್ ಅವಾರ್ಡ್ ಪಡೆದಿರುವ ಕೆ.ವಿಶ್ವನಾಥ್ ಅವರನ್ನು ಭಾರತ ಸರ್ಕಾರ ಅವರ ಕಲಾ ಸೇವೆಯನ್ನು ಗುರುತಿಸಿ 1992ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನೂ ನೀಡಿ ಗೌರವಿಸಿದೆ. ಸಿನಿಮಾ ಕ್ಷೇತ್ರದಲ್ಲಿನ ಸಾಧನೆಗೆ ಅವರು 2017 ರಲ್ಲಿ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಗೂ ಭಾಜನರಾಗಿದ್ದರು. ವಿಶ್ವನಾಥ್ ಅವರು ಶಂಕರಾಭರಣಂ ಸಿನಿಮಾಗೆ ರಾಷ್ಟ್ರೀಯ ಫಿಲ್ಮ್ ಅವಾರ್ಡ್ ಪಡೆದಿದ್ದರು ಹಾಗೂ ಸಪ್ತ ಪದಿ ಸಿನಿಮಾಗೆ ರಾಷ್ಟ್ರೀಯ ಏಕೀಕರಣದ ಅತ್ಯುತ್ತಮ ಚಲನಚಿತ್ರಕ್ಕಾಗಿ ನರ್ಗಿಸ್ ದತ್ ಪ್ರಶಸ್ತಿಗೂ ಭಾಜನರಾಗಿದ್ದರು. ಖ್ಯಾತ ಸಂಗೀತ ಗಾಯಕ ಎಸ್‌.ಪಿ.ಬಾಲಸುಬ್ರಹ್ಮಣ್ಯಂ, ಎಸ್‌.ಪಿ.ಶೈಲಜಾ, ನಟ ಚಂದ್ರಮೋಹನ್ ವಿಶ್ವನಾಥ್ ಅವರ ಸಂಬಂಧಿಗಳಾಗಿದ್ದಾರೆ.




ಮೋದಿ ಸಂತಾಪ: ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಕೆ.ವಿಶ್ವನಾಥ್ ಅವರ ನಿಧನದಿಂದ ದುಃಖವಾಗಿದೆ. ಅವರು ಸೃಜನಶೀಲ ಮತ್ತು ಬಹುಮುಖಿ ನಿರ್ದೇಶಕರಾಗಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದು, ಸಿನಿಮಾ ಪ್ರಪಂಚದ ಧೀಮಂತರಾಗಿದ್ದರು. ಅವರ ಚಲನಚಿತ್ರಗಳು ಹಲವಾರು ಪ್ರಕಾರಗಳನ್ನು ಒಳಗೊಂಡಿವೆ. ದಶಕಗಳವರೆಗೆ ಪ್ರೇಕ್ಷಕರನ್ನು ಆಕರ್ಷಿಸುತ್ತವೆ. ಅವರ ಕುಟುಂಬ ಮತ್ತು ಅಭಿಮಾನಿಗಳಿಗೆ ಸಂತಾಪಗಳು. 'ಓಂ ಶಾಂತಿ' ಎಂದು ಪ್ರಧಾನಿ ಮೋದಿ ಟ್ವೀಟ್ ಮಾಡಿದ್ದಾರೆ.

ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ವಿಜೇತ ಖ್ಯಾತ ಚಲನಚಿತ್ರ ನಿರ್ದೇಶಕ ಕೆ.ವಿಶ್ವನಾಥ್ ನಿಧನರಾಗಿರುವುದು ಭಾರತೀಯ ಚಿತ್ರರಂಗಕ್ಕೆ ದೊಡ್ಡ ನಷ್ಟ, ಅವರ ಆತ್ಮಕ್ಕೆ ಶಾಂತಿ ಸಿಗಲಿ, ಈ ನೋವನ್ನು ಭರಿಸುವ ಶಕ್ತಿಯನ್ನು ಭಗವಂತ ಅವರ ಕುಟುಂಬ ವಲಯಕ್ಕೆ ದಯಪಾಲಿಸಲಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟ್ವೀಟ್ ಮಾಡಿದ್ದಾರೆ.

ಕುಶಾಲನಗರದಲ್ಲಿ ವೈಭವದ ಅಕ್ಷರ ಜಾತ್ರೆ

ಕನ್ನಡ ಶಾಲೆಗಳನ್ನು ಉಳಿಸಿ ಬೆಳೆಸಲು ವಿಶೇಷ ಒತ್ತು ನೀಡಬೇಕು : ಬಸವರಾಜ ಹೊರಟ್ಟಿ



ಕುಶಾಲನಗರ, ಫೆ.3– ನೂತನ ತಾಲೂಕು ಕೇಂದ್ರ ಕುಶಾಲನಗರ ಪಟ್ಟಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಶುಕ್ರವಾರ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ–2023 ಅದ್ದೂರಿಯಾಗಿ ನಡೆಯಿತು.

ಪಟ್ಟಣದ ರೈತ ಸಹಕಾರ ಭವನದ ಕೊಡಗಿನ ಕರ್ಣಾಟಕ ಗೌರಮ್ಮ ವೇದಿಕೆಯಲ್ಲಿ ಆಯೋಜಿಸಿದ್ದ ಸಮ್ಮೇಳನವನ್ನು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಉದ್ಘಾಟಿಸಿ ರಾಜ್ಯದಲ್ಲಿ ಆಂಗ್ಲ ವ್ಯಾಮೋಹ ಅಧಿಕವಾಗಿದ್ದು,ಸುಮಾರು ಎಂಟು ನೂರಕ್ಕೂ ಹೆಚ್ಚಿನ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಕೊರತೆಯಿಂದಾಗಿ ಮುಚ್ಚುವ ಹಂತಕ್ಕೆ ಬಂದಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಕನ್ನಡವನ್ನು ಉಳಿಸಿ ಬೆಳೆಸಿ ಕರ್ನಾಟಕ ರಾಜ್ಯವನ್ನು ಬಲಿಷ್ಠ ರಾಜ್ಯವನ್ನಾಗಿಸುವಲ್ಲಿ ಎಲ್ಲರ ಸಹಕಾರ, ಪ್ರಯತ್ನ ಮುಖ್ಯ. ನೆರೆಯ ರಾಜ್ಯಗಳಲ್ಲಿ ಅಲ್ಲಿನ ಭಾಷೆಗೆ ಹೆಚ್ಚಿನ ಆದ್ಯತೆ ನೀಡುತ್ತಾರೆ. ಕರ್ನಾಟಕದಲ್ಲಿ ಇದು ತದ್ವಿರುದ್ಧವಾಗಿದ್ದು, ಆಂಗ್ಲ ವ್ಯಾಮೋಹ ಹೆಚ್ಚು ಕಂಡುಬರುತ್ತಿದೆ. ದಿನನಿತ್ಯ ಚಟುವಟಿಕೆಗಳಲ್ಲಿ ಕನ್ನಡಕ್ಕೆ ಆದ್ಯತೆ ನೀಡುವಂತಾಗಬೇಕು. ಕಸಾಪ ಸಮ್ಮೇಳನಗಳು ಸಾರ್ವಜನಿಕರು, ಜನಸಾಮಾನ್ಯರಲ್ಲಿ ಕನ್ನಡಾಭಿಮಾನ ಮೂಡಿಸಿ ಅಭಿಮಾನ ಬೆಳೆಸುವ ವೇದಿಕೆಯಾಗಿದೆ ಎಂದರು.

ಶಾಸಕ ಅಪ್ಪಚ್ಚುರಂಜನ್ ಆಶಯ ನುಡಿಗಳನ್ನಾಡಿ, ಕುಶಾಲನಗರ ತಾಲೂಕು ರಚನೆಯಾದ ಬಳಿಕ ಪ್ರಥಮವಾಗಿ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದರು. ಈ ಸಂದರ್ಭ ತಾಲೂಕು ಘೋಷಣೆ ಮಾಡಿದ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರನ್ನು ಸ್ಮರಿಸಿದ ಶಾಸಕರು, ತಾಲೂಕು ಬಳಿಕ ಕುಶಾಲನಗರ ಪಟ್ಟಣ ಪಂಚಾಯಿತಿ ಪುರಸಭೆಯಾಗಿ ಮೇಲ್ದರ್ಜೆಗೆ ಏರಿದೆ. ಮುಂದಿನ ದಿನಗಳಲ್ಲಿ ನಗರಸಭೆಯಾಗಲಿದೆ ಎಂದರು.

ಮಂಗಳೂರು ವಿವಿ ಪರೀಕ್ಷಾಂಗ ವಿಭಾಗದ ಕುಲಸಚಿವ ಪಿ.ಎಲ್.ಧರ್ಮ ಮಾತನಾಡಿ, ವಿವಿಧ ಸಾಹಿತ್ಯ ಪ್ರಕಾರಗಳು ದೇಶದ ಏಕತೆಗೆ ಮಾರಕ. ಏಕತೆ ಸಾರುವ ಸಾಹಿತ್ಯದ ಅಗತ್ಯವಿದೆ. ಸಾಹಿತ್ಯ ಸಮುದಾಯಗಳ ಪ್ರಾತಿನಿಧಿಕ ರೂಪವಾಗಬಾರದು. ಪ್ರತಿಯೊಬ್ಬರೂ ಭಾರತಾಂಬೆಯ ಮಕ್ಕಳಂತೆ ಪ್ರತಿನಿಧಿಸುವ ಅಗತ್ಯವಿದೆ. ಈ ಸಮ್ಮೇಳನದ ಮೂಲಕ ಆಗಬೇಕಾದ ಬದಲಾವಣೆ ಬಗ್ಗೆ ಪಣ ತೊಡಬೇಕಾಗಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಸ್ಮರಣ ಸಂಚಿಕೆ ಮುಖಪುಟ ಬಿಡುಗಡೆಗೊಳಿಸಿ ಮಾತನಾಡಿದರು. ಕುಶಾಲನಗರ ಪುರಸಭೆ ಅಧ್ಯಕ್ಷ ಬಿ. ಜೈವರ್ಧನ್ ಮಾತನಾಡಿದರು.

ಕೊಡಗು ಕಸಾಪ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್ ಪ್ರಾಸ್ತಾವಿಕ ನುಡಿಗಳಾಡಿ ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿರುವ 60 ಸೆಂಟ್ ಜಾಗದಲ್ಲಿ ಪರಿಷತ್ತು ಭವನ ನಿರ್ಮಾಣ ಮಾಡಲು ಅನುದಾನ ಒದಗಿಸಿಕೊಡಬೇಕು ಎಂದು ಸಭಾಪತಿಗಳಲ್ಲಿ ಹಾಗೂ ಶಾಸಕರಲ್ಲಿ ಮನವಿ ಮಾಡಿದರು.

ವೇದಿಕೆಯ ಕಾರ್ಯಕ್ರಮದಲ್ಲಿ ನಾಡಗೀತೆ, ರೈತ ಗೀತೆ ಮೊಳಗಿತು. ಚಿತ್ರಕಲಾವಿದ ಸತೀಶ್ ಸ್ಥಳದಲ್ಲೇ ಚಿತ್ರ ರಚಿಸಿದರು. ಕುಶಾಲನಗರ ತಾಲೂಕು ರಚನೆಗೆ ಹೋರಾಟ ನಡೆಸಿದ ವಿ.ಪಿ.ಶಶಿಧರ್, ಶಾಸಕ ಅಪ್ಪಚ್ಚುರಂಜನ್ ಅವರನ್ನು ವೇದಿಕೆಯಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಕಸಾಪ ವತಿಯಿಂದ ಬಸವರಾಜ ಹೊರಟ್ಟಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಬೆಳಗ್ಗೆ ಪುರಸಭೆ ಅಧ್ಯಕ್ಷ ಬಿ.ಜೈವರ್ಧನ್ ರಾಷ್ಟ್ರ ಧ್ವಜಾರೋಹಣ, ಕೊಡಗು ಜಿಲ್ಲಾ ಕಸಾಪ ಅಧ್ಯಕ್ಷ ಎಂ.ಪಿ. ಕೇಶವ ಕಾಮತ್ ಕಸಾಪ ಧ್ವಜಾರೋಹಣ, ತಾಲೂಕು ಕಸಾಪ ಅಧ್ಯಕ್ಷ ಕೆ.ಎಸ್.ಮೂರ್ತಿ ಕನ್ನಡ ಧ್ವಜಾರೋಹಣ ನೆರವೇರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ವೇದಿಕೆಯಲ್ಲಿ ಕಸಾಪ ತಾಲೂಕು ಅಧ್ಯಕ್ಷ ಕೆ.ಎಸ್.ಮೂರ್ತಿ, ಪುರಸಭೆ ಉಪಾಧ್ಯಕ್ಷೆ ಸುರಯ್ಯಭಾನು, ಕಸಾಪ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮುನೀರ್ ಅಹಮ್ಮದ್, ನಿಕಟಪೂರ್ವ ಅಧ್ಯಕ್ಷ ಬಿ.ಎಸ್.ಲೋಕೇಶ್ ಸಾಗರ್, ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್, ಸಮ್ಮೇಳನದ ಆರ್ಥಿಕ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್, ಮೆರವಣಿಗೆ ಸಮಿತಿ ಅಧ್ಯಕ್ಷ ವೆಂಕಟೇಶ್ ಪೂಜಾರಿ, ವೇದಿಕೆ ನಿರ್ಮಾಣ ಸಮಿತಿಯ ವಿ.ಎಸ್.ಆನಂದಕುಮಾರ್, ಆಹಾರ ಸಮಿತಿಯ ಎಂ.ಕೆ.ದಿನೇಶ್, ಅಲಂಕಾರ ಸಮಿತಿಯ ಚಂದ್ರು, ಪ್ರಚಾರ ಸಮಿತಿಯ ಚಂದ್ರಮೋಹನ್, ಸಾಂಸ್ಕೃತಿಕ ಸಮಿತಿಯ ಕೆ.ಪಿ.ಚಂದ್ರಕಲಾ, ವೇದಿಕೆ ನಿರ್ವಹಣಾ ಸಮಿತಿಯ ಟಿ.ಜಿ.ಪ್ರೇಮ್ ಕುಮಾರ್, ಸ್ಮರಣ ಸಂಚಿಕೆ ಸಮಿತಿಯ ಸಬಲಂ ಭೋಜಣ್ಣ ರೆಡ್ಡಿ, ಧ್ವಜ ನಿರ್ಮಾಣ ಸಮಿತಿಯ ಲಕ್ಷ್ಮಣ, ಕಸಾಪ ವಿವಿಧ ಘಟಕಗಳ ಪ್ರಮುಖರಾದ ರೇವತಿ ರಮೇಶ್, ಎಂ.ಡಿ.ರಂಗಸ್ವಾಮಿ, ಅಂಬೇಕಲ್ ನವೀನ್, ಎಸ್.ಡಿ.ವಿಜೇತ್, ದಯಾ ಚಂಗಪ್ಪ, ರಾಜೇಶ್ ಪದ್ಮನಾಭ, ಎಂ.ಎನ್.ಮೂರ್ತಿ, ಎಸ್.ನಾಗರಾಜ್, ಕೆ.ವಿ.ಉಮೇಶ್, ಕುಮಾರ್, ವಿವಿಧ ಘಟಕಗಳ ಪ್ರಮುಖರು ಇದ್ದರು. ಶಿಕ್ಷಕರಾದ ಟಿ.ವಿ.ಶೈಲಾ,ಲತಾ ಅವರು ನಿರೂಪಿಸಿದರು. ಕೆ.ಎಸ್.ಮೂರ್ತಿ ಸ್ವಾಗತಿಸಿದರು. ಉಮೇಶ್ ವಂದಿಸಿದರು.

ಸಮ್ಮೇಳನದ ನಿರ್ಣಯಗಳು

● ನೂತನ ತಾಲೂಕು ಆಗಿ ರಚನೆಗೊಂಡಿರುವ ಕುಶಾಲನಗರದಲ್ಲಿ ತಾಲೂಕಿನ ಆಡಳಿತ ಸೌಧ ನಿರ್ಮಿಸಬೇಕು ● ಕುಶಾಲನಗರ ಪಟ್ಟಣವನ್ನು ಸ್ಮಾರ್ಟ್ ಸಿಟಿಯನ್ನಾಗಿ ಅಭಿವೃದ್ಧಿ ಪಡಿಸಬೇಕು ● ಸಾರ್ವಜನಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ನವೀಕರಣಗೊಳಿಸಬೇಕು ● ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಮಂಜೂರು ಮಾಡಲು ಒತ್ತಾಯ ● ಮೈಸೂರಿನಿಂದ ಕುಶಾಲನಗರಕ್ಕೆ ರೈಲು ಸಂಪರ್ಕ ಕಲ್ಪಿಸಲು ಕೇಂದ್ರ ಸರ್ಕಾರಕ್ಕೆ ಒತ್ತಾಯ ● ಜೀವನದಿ ಕಾವೇರಿ ನದಿಯ ಸಂರಕ್ಷಣೆಗೆ ರಾಷ್ಟ್ರೀಯ ನದಿ ಘೋಷಣೆ ಮಾಡಬೇಕು ● ಕನ್ನಡ ಭವನ ಕಾಮಗಾರಿ ತ್ವರಿತಗೊಳಿಸಿ ಮಾಜಿ ಮುಖ್ಯಮಂತ್ರಿ ದಿ.ಗುಂಡೂರಾವ್ ಅವರ ಹೆಸರನ್ನು ನಾಮಕರಣ ಮಾಡಬೇಕು ● ಕುಶಾಲನಗರ ತಾಲೂಕಿನ ನಂಜರಾಯಪಟ್ಟಣ ಮತ್ತು ಹೆಬ್ಬಾಲೆಯನ್ನು ಹೋಬಳಿ ಕೇಂದ್ರವಾಗಿ ಘೋಷಿಸಬೇಕು ಒತ್ತಾಯ ● ಮಾಜಿ ಮುಖ್ಯಮಂತ್ರಿ ದಿ.ಆರ್.ಗುಂಡೂರಾವ್ ಹಾಗೂ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರು ಓದಿರುವ ಇಲ್ಲಿನ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯನ್ನು ನವೀಕರಿಸಿ ಅಭಿವೃದ್ಧಿಗೊಳಿಸಲು ಒತ್ತಾಯ ● ಹಾರಂಗಿ ಜಲಾಶಯದಿಂದ ಪ್ರತಿ ಬೇಸಿಗೆಯಲ್ಲಿ ಶಿರಂಗಾಲ ಗೇಟ್ ತನಕ ನೀರು ಹರಿಸಲು ಒತ್ತಾಯ ● ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಚಟುವಟಿಕೆಗಳನ್ನು ನಡೆಸಲು ಅನುಕೂಲವಾಗುವಂತೆ ಕಚೇರಿಗೆ ಸೂಕ್ತ ನಿವೇಶನ ಒದಗಿಸಿ ಕಟ್ಟಡ ನಿರ್ಮಾಣಕ್ಕೆ ಅನುದಾನ ಒದಗಿಸಲು ಒತ್ತಾಯ.

ವರ್ಣರಂಜಿತ ಮೆರವಣಿಗೆ



ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಶುಕ್ರವಾರ ಏರ್ಪಡಿಸಿದ್ದ ಸಾಹಿತ್ಯ ಸಮ್ಮೇಳನದ ಅಕ್ಷರ ಜಾತ್ರೆಯಲ್ಲಿ ವೈಭವದ ಮೆರವಣಿಗೆ ನಡೆಯಿತು. ಇಲ್ಲಿನ ಕೊಪ್ಪಗೇಟ್ ಬಳಿ ಕಾವೇರಿ ಪ್ರತಿಮೆಗೆ ಪೂಜೆ ಸಲ್ಲಿಸಿ ಸಮ್ಮೇಳನಾಧ್ಯಕ್ಷ ಬಿ.ಆರ್.ನಾರಾಯಣ್ ಅವರ ಮೆರವಣಿಗೆಗೆ ಕೊಡವ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಬಾಚರಾಣಿಯಂಡ ಪಿ.ಅಪ್ಪಣ್ಣ ಚಾಲನೆ ನೀಡಿದರು.

ಕನ್ನಡ ಬಾವುಟ, ತೋರಣದಿಂದ ಅಲಂಕೃತ ವಾಹನದಲ್ಲಿ ಸಮ್ಮೇಳನಾಧ್ಯಕ್ಷ ಬಿ.ಆರ್.ನಾರಾಯಣ್ ಅವರನ್ನು ಮೆರವಣಿಗೆ ಮೂಲಕ ಸಭಾ ಕಾರ್ಯಕ್ರಮಕ್ಕೆ ಕರೆತರಲಾಯಿತು. ಪಟ್ಟಣದ ಬಿಎಂ ರಸ್ತೆಯಲ್ಲಿ ಸಾಗಿ ಬಂದ ಬೃಹತ್ ಮೆರವಣಿಗೆಯಲ್ಲಿ ನೂರಾರು ಕನ್ನಡಾಭಿಮಾನಿಗಳು, ಸಾಹಿತ್ಯಾ ಸಕ್ತರು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ಸಾಹಿತಿಗಳು ಹಾಗೂ ನಾಗರಿಕರು, ವಿವಿಧ ಸಂಘ–ಸಂಸ್ಥೆಯ ಕಾರ್ಯಕರ್ತರು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು. ಕನ್ನಡ ಶಾಲು, ಬಾವುಟ ಹಿಡಿದು ಮೆರವಣಿಗೆಯುದ್ದಕ್ಕೂ ಕನ್ನಡಾಂಬೆಗೆ ಜೈಕಾರ ಮೊಳಗಿಸಿದರು. ಮಂಗಳವಾದ್ಯ ಗಳೊಂದಿಗೆ ಮಹಿಳೆಯರು ಪೂರ್ಣಕುಂಭ ಕಳಶ ಹೊತ್ತು ಸಾಗಿದರು.

ಮೆರವಣಿಗೆಯಲ್ಲಿ ಕನ್ನಡ ಸಂಸ್ಕೃತಿ ಇಲಾಖೆಯ ಪ್ರಾಯೋಜಕತ್ವದಲ್ಲಿ ವೀರಗಾಸೆ ಕುಣಿತ,ಪೂಜಾ ಕುಣಿತ, ಡೊಳ್ಳು ಕುಣಿತ ಸೇರಿದಂತೆ ವಿವಿಧ ಕಲಾ ತಂಡಗಳು ತಮ್ಮ ಕಲಾ ಪ್ರದರ್ಶನ ನೀಡಿ ಮೆರುಗು ನೀಡಿದವು. ಇಲ್ಲಿನ ಭಜನಾ ಮಂಡಳಿಯ ಮಹಿಳೆಯರು ಕೋಲಾಟ ನೃತ್ಯ ಪ್ರದರ್ಶಿಸಿ ಮೆರವಣಿಗೆ ರಂಗುತಂದರು. ಮಾಜಿ ಸೈನಿಕರ ಸಂಘ, ಕೊಡವ ಸಮಾಜ, ಗೌಡ ಸಮಾಜದ ಪದಾಧಿಕಾರಿಗಳು ತಮ್ಮ ಸಂಪ್ರದಾಯಿಕ ಉಡುಗೆ ತೊಡುಗೆ ಧರಿಸಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ನೋಡಿದೆಲ್ಲಡೆ ಕನ್ನಡ ಧ್ವಜಗಳು ರಾರಾಜಿಸಿದವು.

ಮಹಾತ್ಮರ ವೇಷಭೂಷಣ ಧರಿಸಿದ್ದ ಮಕ್ಕಳು ಗಮನ ಸೆಳೆದರು. ಒಟ್ಟಿನಲ್ಲಿ ಪಟ್ಟಣದ ತುಂಬ ನಾಡು–ನುಡಿ ಝೇಂಕಾರ ಅನುರಣಿಸಿತು.

ನೌಕಪಡೆಯ ವಾರ್‌ಶಿಪ್ ಡಿಸೈನ್ ಬ್ಯೂರೋಗೆ ಕೊಡಗಿನ ಐಚೆಟ್ಟಿರ ಬಿ. ಉತ್ತಯ್ಯ ಡಿಜಿ

ನೌಕಪಡೆಯ 3ನೇ ಉನ್ನತ ಸ್ಥಾನದಲ್ಲಿರುವ ಕೊಡಗು ಜಿಲ್ಲೆಯ ಏಕೈಕ ಅಧಿಕಾರಿ



ಸೇರ್ಪಡೆಗೊಂಡ ಉತ್ತಯ್ಯ, ಲೋನಾವರದ ಐ.ಎನ್.ಎಸ್. ಶಿವಾಜಿ ನೌಕಾ ಇಂಜಿನಿಯರಿಂಗ್ ಕಾಲೇಜಿನ ಹಳೆಯ ವಿದ್ಯಾರ್ಥಿಯಾಗಿದ್ದು, ಎಂ.ಟೆಕ್, ಎಂಫಿಲ್ ಪದವಿ ಪಡೆದಿದ್ದಾರೆ.

ಮಡಿಕೇರಿ, ಫೆ.3– ಭಾರತೀಯ ನೌಕಾ ಪಡೆಯಲ್ಲಿ ರಿಯರ್ ಅಡ್ಮಿರಲ್ ಆಗಿ ಸೇವೆ ಸಲ್ಲಿಸುತ್ತಿರುವ ಐಚೆಟ್ಟಿರ ಬಿ.ಉತ್ತಯ್ಯ ವಿಎಸ್‌ಎಂ, ಎವಿಎಸ್‌ಎಂ ಅವರು ಇದೀಗ ನೌಕಾಪಡೆಯ ವಾರ್‌ಶಿಪ್ ಡಿಸೈನ್ ಬ್ಯೂರೋ ನವದೆಹಲಿ ಇದರ ಮಹಾ ನಿರ್ದೇಶಕ (ಡಿ.ಜಿ.)ರಾಗಿ ನೇಮಕ ಗೊಂಡಿದ್ದಾರೆ. ಇವರು ಭಾರತೀಯ ನೌಕಾಪಡೆಯಲ್ಲಿ 3ನೇ ಉನ್ನತ ಸ್ಥಾನದಲ್ಲಿರುವ ಕೊಡಗು ಜಿಲ್ಲೆಯ ಏಕೈಕ ಅಧಿಕಾರಿಯಾಗಿದ್ದಾರೆ.

ಐ.ಬಿ. ಉತ್ತಯ್ಯ ಅವರು ಕಳೆದ ಹಲವು ಸಮಯದಿಂದ ವಿಶಾಖಪಟ್ಟಣದ ನೌಕಾ ನೆಲೆಯಲ್ಲಿ ರಿಯರ್ ಅಡ್ಮಿರಲ್ ಸ್ಥಾನದೊಂದಿಗೆ ಎಡ್ಮಿರಲ್ ಸೂಪರಿಂಟೆಂಡೆಂಟ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಇದೀಗ ರಿಯರ್ ಅಡ್ಮಿರಲ್ ಬಿಮಲ್ ಕುಮಾರನ್ ಅವರಿಂದ ಅಧಿಕಾರ ಸ್ವೀಕರಿಸಿದ್ದು, ಮತ್ತೊಂದು ಮಹತ್ತರ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ಐಚೆಟ್ಟಿರ ಉತ್ತಯ್ಯ ಅವರು ಕೊಡಗಿನ ಮಡಿಕೇರಿ ತಾಲೂಕಿನ ಮಕ್ಕಂದೂರು ಗ್ರಾಮದವರಾಗಿದ್ದು, ಐಚೆಟ್ಟಿರ ದಿ.ಬೆಳ್ಯಪ್ಪ ಹಾಗೂ ಲಲಿತ ಬೆಳ್ಯಪ್ಪ (ತಾಮನೆ ಚೆಪ್ಪುಡಿರ) ಅವರ ಪುತ್ರರಾಗಿದ್ದಾರೆ. ಭಾರತೀಯ ನೌಕಾ ಪಡೆಗೆ 1987ರಲ್ಲಿ

ತಮ್ಮ 35 ವರ್ಷಗಳ ಸೇವಾವಧಿಯಲ್ಲಿ ವಿವಿಧ ಜವಾಬ್ದಾರಿಯುತ ಸ್ಥಾನಗಳಲ್ಲಿ ಕರ್ತವ್ಯ ನಿರ್ವಹಿಸಿರುವ ಐ.ಬಿ. ಉತ್ತಯ್ಯ, ಕಾರವಾರದ ನೌಕಾನೆಲೆಯ ತಾಂತ್ರಿಕ ಹೆಚ್ಚುವರಿ ಮಹಾ ನಿರ್ದೇಶಕರಾಗಿ, ವಿಶಾಖಪಟ್ಟಣದ ನೌಕಾನೆಲೆಯ ಎಡ್ಮಿರಲ್ ಸೂಪರಿಂಟೆಂಡೆಂಟ್ ಆಗಿ ಪೂರ್ವ ನೌಕಾನೆಲೆಯ ಮುಖ್ಯ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ.

ವರ್ತಕನ ಗಮನಕ್ಕೆ ಬಾರದಂತೆ ಅಕೌಂಟ್‌ಗೆ ಕನ್ನ ಹಾಕಿದ್ದ ವಂಚಕನ ಬಂಧನ

ಮಡಿಕೇರಿ, ಫೆ.3– ವರ್ತಕರೊಬ್ಬರ ಮೊಬೈಲ್ ಫೋನ್ ಮೂಲಕ ಫೋನ್ ಪೇ ಮತ್ತು ಗೂಗಲ್ ಪೇ ಆಪ್ ಬಳಸಿ 4,76,456 ರೂ.ಗಳನ್ನು ಸ್ನೇಹಿತರ ಖಾತೆಗಳಿಗೆ ವರ್ಗಾಯಿಸಿಕೊಂಡ ಆರೋಪದಡಿ ಯುವಕನೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ. ಕುಶಾಲನಗರ ಸಮೀಪ ಗುಡ್ಡೆಹೊಸೂರುವಿನ ಬೊಳ್ಳೂರು ಗ್ರಾಮದ ನಿವಾಸಿ ನೂತನ್ ಬಿ.ಎಂ(23) ಎಂಬಾತನೇ ಬಂಧಿತ ಆರೋಪಿ.

ಪ್ರಕರಣ ಹಿನ್ನೆಲೆ: ಕುಶಾಲನಗರದ ಗುಮ್ಮನಕೊಲ್ಲಿಯಲ್ಲಿ ವ್ಯಕ್ತಿಯೊಬ್ಬರು ದಿನಸಿ ಅಂಗಡಿ ನಡೆಸುತ್ತಿದ್ದು, ಆರೋಪಿ ನೂತನ್ ಅಂಗಡಿ ಮಾಲೀಕರ ಮೊಬೈಲ್‌ನಲ್ಲಿರುವ 'ಗೂಗಲ್ ಪೇ' ಹಾಗೂ 'ಫೋನ್ ಪೇ' ಮೂಲಕ 2022ರ ಅಕ್ಟೋಬರ್ 28ರಿಂದ 2023ರ ಜನವರಿ 25ರವರೆಗೆ ಒಟ್ಟು 4,76,456ರೂ.ಗಳನ್ನು ತನ್ನ ಸ್ನೇಹಿತರ ಖಾತೆಗಳಿಗೆ ವರ್ಗಾಯಿಸಿದ್ದ. ಇದು ಅಂಗಡಿ ಮಾಲೀಕರ ಗಮನಕ್ಕೆ ಬಂದಿರಲಿಲ್ಲ ಎನ್ನಲಾಗಿದೆ. ಈ ನಡುವೆ ವರ್ತಕರ ಪುತ್ರಿ ಅನುಷಾ ಎಂಬವರು ಫೆ.1ರಂದು ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ದೂರು ನೀಡಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದ್ದರು. ಮಾಹಿತಿ ತಂತ್ರಜ್ಞಾನ ಕಾಯಿದೆ ಕಲಂ 66(ಡಿ) ಹಾಗೂ ಕಲಂ 420 ಅಡಿ ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಆರಂಭಿಸಿದ್ದರು.

ಕೊಡಗು ಜಿಲ್ಲಾ ಪೊಲೀಸ್ ಅಧೀಕ್ಷಕ ಕೆ.ರಾಮರಾಜನ್ ಹಾಗೂ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಸುಂದರ್ ರಾಜ್ ಅವರ ಮಾರ್ಗದರ್ಶನದಲ್ಲಿ ಸಿ.ಇ.ಎನ್ ಅಪರಾಧ ಪೊಲೀಸ್ ಠಾಣೆಯ ನಿರೀಕ್ಷಕ ರಾಘವೇಂದ್ರ ಜೆ.ಕೆ ಹಾಗೂ ಪೊಲೀಸ್ ಉಪ ನಿರೀಕ್ಷಕ ದೇವರಾಜ್ ಹೆಚ್.ಇ ಹಾಗೂ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿ, ಆರೋಪಿ ನೂತನ್ ಬಿ.ಎಂ. ಎಂಬಾತನನ್ನು ಬಂಧಿಸಿದ್ದಾರೆ. ವಿಚಾರಣೆ ನಡೆಸಿರುವ ಪೊಲೀಸರು ಆರೋಪಿ ವಿರುದ್ಧ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಸಾರ್ವಜನಿಕರು ಸೈಬರ್ ಅಪರಾಧಗಳ ಬಗ್ಗೆ ಎಚ್ಚರವಹಿಸುವಂತೆ ಕೊಡಗು ಜಿಲ್ಲಾ ಸೈಬರ್ ಅಪರಾಧ ವಿಭಾಗ ಮನವಿ ಮಾಡಿದೆ.

ಶೀಘ್ರದಲ್ಲೇ ಬಂಡೀಪುರದಲ್ಲಿ ಹುಲಿಗಣತಿ

ಬೇಸಿಗೆಯಲ್ಲಿ ಅರಣ್ಯ ರಕ್ಷಿಸುವ ಸಂಬಂಧ ಅಗ್ನಿಶಾಮಕ ದಳದಿಂದ ಪ್ರಾತ್ಯಕ್ಷಿಕೆ



ಗುಂಡ್ಲುಪೇಟೆ, ಫೆ.3– ಬೇಸಿಗೆ ಆರಂಭಗೊಂಡಿರುವ ಹಿನ್ನೆಲೆಯಲ್ಲಿ ಬೆಂಕಿಯಿಂದ ಬಂಡೀಪುರವನ್ನು ಸಂರಕ್ಷಿಸಲು ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಹಾಗೂ ನಾಲ್ಕನೇ ಹಂತದ ಹುಲಿ ಗಣತಿ ನಡೆಸುವ ಬಗ್ಗೆ ಅರಣ್ಯ ಇಲಾಖೆ ಬಂಡೀಪುರದ ಸ್ವಾಗತ ಕೇಂದ್ರದಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸಭೆ ನಡೆಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಹುಲಿ ಯೋಜನೆಯ ಕ್ಷೇತ್ರ ನಿರ್ದೇಶಕ ಡಾ.ರಮೇಶ್ ಕುಮಾರ್, ಶೀಘ್ರದಲ್ಲೇ ಹುಲಿ ಗಣತಿಯನ್ನು ಅಚ್ಚುಕಟ್ಟಾಗಿ ಮಾಡಬೇಕಾಗಿದೆ. ಹುಲಿ ಗಣತಿಯ ಭಾಗವಾಗಿ ಮಾಂಸಾಹಾರಿ ಪ್ರಾಣಿಗಳು ದೊಡ್ಡ ಸಸ್ಯಾಹಾರಿ ಪ್ರಾಣಿಗಳನ್ನು ಸಹಾ ಗಣತಿ ಪರಿಗಣಿಸಬೇಕು. ಪ್ರತ್ಯಕ್ಷವಾಗಿ ಕಾಣಸಿಗುವ ಇಲ್ಲವೇ ಕುರುಹುಗಳ ಆಧಾರದ ಮೇಲೆ ನಿಖರವಾದ ಸಮಗ್ರವಾದ ಮಾಹಿತಿ ಸಂಗ್ರಹಿಸಿ ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು ಎಂದು ಸೂಚನೆ ನೀಡಿದರು.

ಇದೇ ಸಂದರ್ಭದಲ್ಲಿ ಬೇಸಿಗೆಯಲ್ಲಿ ಬೆಂಕಿಯಿಂದ ಬಂಡೀಪುರವನ್ನು ಸಂರಕ್ಷಿಸಲು ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಜಿಲ್ಲಾ ಅಗ್ನಿಶಾಮಕ ದಳದ ಅಧಿಕಾರಿ ಕೆ.ಪಿ.ನವೀನ್ ಕುಮಾರ್ ಕಾರ್ಯಾಗಾರ ನಡೆಸಿ ಪ್ರಾತ್ಯಕ್ಷಿಕೆಯೊಂದಿಗೆ ಸಿಬ್ಬಂದಿಗಳಿಗೆ ತರಬೇತಿ ನೀಡಿದರು. ಈ ಸಭೆಯಲ್ಲಿ ಬಂಡೀಪುರ ಉಪವಿಭಾಗದ ಎಸಿಎಫ್ ನವೀನ್, ಗುಂಡ್ಲುಪೇಟೆ ಉಪವಿಭಾಗದ ರವೀಂದ್ರ, ಹೆಡಿಯಾಲ ಉಪವಿಭಾಗದ ಕೆ.ಪರಮೇಶ್ ಸೇರಿದಂತೆ ಎಲ್ಲಾ ವಲಯಗಳ ಅರಣ್ಯಾಧಿಕಾರಿಗಳು, ಉಪ ವಲಯಾರಣ್ಯಾಧಿಕಾರಿಗಳು, ಗಸ್ತು ಸಿಬ್ಬಂದಿಗಳು ಇದ್ದರು.

ಸಂಚಾರಿ ದಂಡ ಮೊತ್ತದಲ್ಲಿ ಶೇ. 50ರಷ್ಟು ರಿಯಾಯಿತಿ

ಚಾಮರಾಜನಗರ, ಫೆ.3– ಸಂಚಾರಿ ನಿಯಮ ಉಲ್ಲಂಘನೆ ಸಂಬಂಧ ಪೊಲೀಸ್ ಇಲಾಖೆಯ ಸಂಚಾರಿ ಇ–ಚಲನ್‌ನಲ್ಲಿ ದಾಖಲಾಗಿರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ.50ರಷ್ಟು ರಿಯಾಯಿತಿ ಕಲ್ಪಿಸಲಾಗಿದ್ದು ಈ ಅವಕಾಶವನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್. ಭಾರತಿ ತಿಳಿಸಿದರು.

ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ವ್ಯಾಜ್ಯ ಪೂರ್ವ ಪರಿಹಾರ ಕೇಂದ್ರದಲ್ಲಿಂದು ಸುದ್ದಿಗೋಷ್ಠಿಯಲ್ಲಿ ಅವರು ಈ ವಿಷಯ ತಿಳಿಸಿದರು.

ಗೌರವಾನ್ವಿತ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಹೈಕೋರ್ಟ್ ನ್ಯಾಯಮೂರ್ತಿ ಗಳಾದ ವೀರಪ್ಪ ಅವರ ಅಧ್ಯಕ್ಷತೆಯಲ್ಲಿ ಜ.27ರಂದು ನಡೆದ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆದಿತ್ತು. ಸರ್ಕಾರವು ದಂಡದ ಮೊತ್ತದಲ್ಲಿ ರಿಯಾಯಿತಿ ನೀಡಿದೆ. ಪೊಲೀಸ್ ಇಲಾಖೆಯ ಇ–ಚಲನ್‌ನಲ್ಲಿ ದಾಖಲಾಗಿರುವ ಬಾಕಿ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ.50 ರಷ್ಟು ರಿಯಾಯಿತಿ ನೀಡಿ ಆದೇಶಿಸಲಾಗಿದೆ ಎಂದರು. ಚಾಮರಾಜನಗರ ಜಿಲ್ಲೆಯಲ್ಲಿ ಫೆ.11ರಂದು ಮೆಗಾ ಲೋಕ್ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಇಂದಿನಿಂದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಫೆ.3– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ಸಂತೇಮರಹಳ್ಳಿ, ಗುಂಡ್ಲುಪೇಟೆ ಹಾಗೂ ಬೇಗೂರು ಉಪವಿಭಾಗ ವ್ಯಾಪ್ತಿಯಲ್ಲಿ ತ್ರೈಮಾಸಿಕ ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಫೆ.4 ಮತ್ತು 5ರಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಫೆ.4ರಂದು ಹೊಂಗನೂರು, ಇರಸವಾಡಿ, ಮಸಣಾಪುರ, ಚಾಟಿಪುರ, ಗಂಗವಾಡಿ, ಬೂದಂಬಳ್ಳಿ, ಬೂದಂಬಳ್ಳಿ ಮೋಳೆ, ಗೂಳಿಪುರ, ಹೊಮ್ಮ, ರೇಚಂಬಳ್ಳಿ, ಹೆಚ್.ಮೂಕಳ್ಳಿ, ಕುರುಬರಹುಂಡಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಫೆ.5ರಂದು ಗುಂಡ್ಲುಪೇಟೆ, ಭರಗಿ, ಕೋಡಿಹಳ್ಳಿ, ಬೇರಂಬಾಡಿ, ನೆನೆಕಟ್ಟೆ, ವೀರನಪುರ ಹಾಗೂ ಹಂಗಳ, ಶಿವಪುರ, ಕಲ್ಲಿಗೌಡನಹಳ್ಳಿ ಎನ್.ಜೆ.ವೈ, ಎಲಚಟ್ಟಿ, ಗೋಪಾಲ್‌ಪುರ ಎನ್.ಜೆ.ವೈ, ದೇವರಹಳ್ಳಿ, ಹೊನ್ನೇಗೌಡನಹಳ್ಳಿ, ಮಲ್ಲಯ್ಯನಪುರ ಮತ್ತು ಹೊಂಗಹಳ್ಳಿ ಐಪಿ, ಮುಂಟಿಪುರ ಐಪಿ, ಹೆಚ್.ಎಸ್.ಹುಂಡಿ ಎನ್.ಜೆ.ವೈ ಸುತ್ತಮುತ್ತಲ ವಿದ್ಯುತ್ ವ್ಯತ್ಯಯವಾಗಲಿದೆ.

ಈರುಳ್ಳಿ ಹೆಚ್ಚಿದರೆ ಮಾತ್ರವಲ್ಲ ಬೆಳೆದರೂ ಕಣ್ಣೀರು...

ಬಾರದ ಬೆಳೆ, ಉಳುಮೆ ಮಾಡಿ ನಾಶ, ಸಂಕಷ್ಟದಲ್ಲಿ ರೈತರು



ಚಾಮರಾಜನಗರ, ಫೆ.3– ಅವಧಿ ಮೀರಿದರೂ ಬೆಳೆ ಬಾರದ ಹಿನ್ನೆಲೆಯಲ್ಲಿ ಮನನೊಂದ ರೈತರು ತಾವು ಬೆಳೆದಿದ್ದ ಸಣ್ಣ ಈರುಳ್ಳಿ ಬೆಳೆಯನ್ನು ಟ್ರಾಕ್ಟರ್‌ನಿಂದ ಉಳುಮೆ ಮಾಡಿ ನಾಶಪಡಿಸಿರುವ ಘಟನೆ ತಾಲೂಕಿನ ಕೆ.ಕೆ. ಹುಂಡಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಶಿವಮಲ್ಲೇಗೌಡ, ನಾಗರಾಜು ಸೇರಿದಂತೆ ಐದಾರು ಮಂದಿ ರೈತರು ಲಕ್ಷಾಂತರ ರೂ. ವೆಚ್ಚ ಮಾಡಿ ಸಣ್ಣ ಈರುಳ್ಳಿ ಬಿತ್ತನೆ ಮಾಡಿದ್ದರು. ಆದರೆ, ಸೂಕ್ತ ಸಮಯದಲ್ಲಿ ಮಳೆ ಬಾರದ ಹಿನ್ನೆಲೆಯಲ್ಲಿ ಈರುಳ್ಳಿ ಸರಿಯಾಗಿ ಕಾಯಿ ಕಟ್ಟಿಲ್ಲ. ಇದರಿಂದ ರೈತರು ಸ್ವತಃ ತಾವೇ ಬೆಳೆ ನಾಶ ಪಡಿಸಿದ್ದಾರೆ. ಪ್ರಸ್ತುತ ಸಾಲದ ಹೊರೆಯಿಂದ ಅನ್ನದಾತರ ಪರಿಸ್ಥಿತಿ ಚಿಂತಾಜನಕವಾಗಿದೆ.

ಎಕರೆಗಟ್ಟಲೆ ಈರುಳ್ಳಿ ಬೆಳೆ ನಾಶ: ಅಲ್ಪಾವಧಿ ಬೆಳೆಯಾಗಿರುವ ಸಣ್ಣ ಈರುಳ್ಳಿ ಸಾಮಾನ್ಯವಾಗಿ 55ರಿಂದ 75 ದಿನಗಳಲ್ಲಿ ಬೆಳೆ ಕಟಾವಿಗೆ ಬರಲಿದೆ. ಆದರೆ, ಗುಂಡ್ಲುಪೇಟೆ ತಾಲೂಕಿನ ಎಪಿಎಂಸಿಯಲ್ಲಿ ಬಿತ್ತನೆ ಈರುಳ್ಳಿ ತಂದು ನಾಟಿ ಮಾಡಿ ಅದನ್ನು ತಿಂಗಳುಗಟ್ಟಲೆ ಪೋಷಿಸಿ ದರೂ ನಿಗದಿತ ಸಮಯದಲ್ಲಿ ಮಳೆ ಬಾರದ ಹಿನ್ನಲೆಯಲ್ಲಿ ಕಾಯಿ ಕಟ್ಟದೇ ಗ್ರಾಮದ ರೈತರು ಲಕ್ಷಾಂತರ ರೂಪಾಯಿ ನಷ್ಟ ಅನುಭವಿಸಿದ್ದಾರೆ. ಕೆ.ಕೆ.ಹುಂಡಿಯ ಒಬ್ಬೊಬ್ಬ ರೈತ ಎರಡರಿಂದ ಐದು ಲಕ್ಷ ರೂಪಾಯಿ ಖರ್ಚು ಮಾಡಿ ಈರುಳ್ಳಿ ಬಿತ್ತನೆ ಮಾಡಿದ್ದರು. ತಿಂಗಳಿನಿಂದ ಕಷ್ಟಪಟ್ಟು ದುಡಿದು, ಪ್ರಾಣಿಗಳಿಂದ ರಕ್ಷಿಸಿದ್ದ ಬೆಳೆ ಕೈ ಸೇರದಿದ್ದರಿಂದ ಬೇರೆ ದಾರಿ ಕಾಣದೇ ಎಕರೆಗಟ್ಟಲೆ ಬೆಳೆದಿದ್ದ ಬೆಳೆಯನ್ನು ಅವರೇ ಸ್ವತಃ ನಾಶಪಡಿಸಿದ್ದಾರೆ.

ಪ್ರಸ್ತುತ ಮಾರುಕಟ್ಟೆಯಲ್ಲಿ ಸಣ್ಣ ಈರುಳ್ಳಿ ಪ್ರತಿ ಕೆಜಿಗೆ 35–40 ರೂಪಾಯಿ ಇದೆ. ಆದರೆ, ಈ ರೈತರು ಹಾಕಿದ ಬೆಳೆಯೇ ಕೈಗೆ ಬರದಿದ್ದರಿಂದ ಬೆಲೆ ಇದ್ದರೂ ಏನು ಮಾಡಲಾಗದ ಅಸಹಾಯಕ ಸ್ಥಿತಿ ರೈತರದ್ದಾಗಿದೆ. ಈ ಸಂಬಂಧ ತೋಟಗಾರಿಕೆ ಹಾಗೂ ಕೃಷಿ ಇಲಾಖೆ ಅಧಿಕಾರಿಗಳು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ನೊಂದ ರೈತರ ನೆರವಿಗೆ ಧಾವಿಸಬೇಕು ಎನ್ನುವುದು ಸ್ಥಳೀಯ ರೈತರ ಆಗ್ರಹವಾಗಿದೆ.



ಸಾಲ ಮಾಡಿ ಲಕ್ಷಾಂತರ ರೂಪಾಯಿ ಬಂಡವಾಳ ಹಾಕಿ ಈರುಳ್ಳಿ ಬೆಳೆದಿದ್ದೆ. ಬೆಳೆಯೇ ಬರಲಿಲ್ಲ. ಇದು ಸೇರಿ ಸತತ ಐದು ಬೆಳೆಗಳನ್ನು ಕಳೆದುಕೊಂಡಿದ್ದು, ಸಂಕಷ್ಟಕ್ಕೆ ಸಿಲುಕಿದ್ದೇನೆ. ಸಾಲ ಕೊಟ್ಟವರು ಮನೆ ಬಾಗಿಲಿಗೆ ಬರುತ್ತಿದ್ದಾರೆ, ಸರ್ಕಾರ ನಮ್ಮ ನೆರವಿಗೆ ಬರಬೇಕು.

-ನಾಗರಾಜು, ರೈತ.



ಬಿತ್ತನೆ ಬೀಜ, ಗೊಬ್ಬರ, ಕೂಲಿ ಕಾರ್ಮಿಕರಿಗೆಂದು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಈರುಳ್ಳಿ ಬೆಳೆಯಲಾಗಿತ್ತು. ಆದರೆ, ಸೂಕ್ತ ಇಳುವರಿ ಬಾರದಿರುವುದರಿಂದ ನಷ್ಟವಾಗಿದ್ದು, ಸರ್ಕಾರ ನಮ್ಮ ನೆರವಿಗೆ ಆಗಮಿಸಬೇಕು.

-ಶಿವಮಲ್ಲೇಗೌಡ, ರೈತ.

ಕೆ.ಕೆ.ಹುಂಡಿ ಗ್ರಾಮದಲ್ಲಿ ರೈತರು ಬೆಳೆದಿದ್ದ ಈರುಳ್ಳಿ ಬೆಳೆ ಕಾಯಿಕಟದ ಹಿನ್ನೆಲೆಯಲ್ಲಿ ನಾಶಪಡಿಸಿರುವ ಬಗ್ಗೆ ವರದಿ ತರಿಸಿಕೊಂಡು ಅವರಿಗೆ ಮುಂದೆ ಏನೂ ಮಾಡಬೇಕೆಂದು ಮಾರ್ಗದರ್ಶನ ನೀಡಲಾಗುವುದು. ಜೊತೆಗೆ ಇಲಾಖೆಯಿಂದ ಅಗತ್ಯ ನೆರವು ನೀಡಲಾಗುವುದು.

-ಶಿವಪ್ರಸಾದ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕರು.

ವಿದ್ಯುತ್ ಸ್ಪರ್ಶ; ಕಬ್ಬಿನ ಬೆಳೆ ನಾಶ

ಚಾಮರಾಜನಗರ, ಫೆ.2– ಜಮೀನಿನ ಮಧ್ಯದಲ್ಲಿ ಹಾದು ಹೋಗಿದ್ದ ವಿದ್ಯುತ್ ತಂತಿ ಕಬ್ಬಿನ ಬೆಳೆ ಸ್ಪರ್ಶಿಸಿ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ತಗುಲಿ ಕಬ್ಬಿನ ಬೆಳೆ ನಾಶವಾಗಿರುವ ಘಟನೆ ತಾಲೂಕಿನ ಚಂದಕವಾಡಿ ಹೋಬಳಿಯ ಅಯ್ಯನಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರತ್ನಮ್ಮ ಅವರಿಗೆ ಸೇರಿದ ಜಮೀನಿನಲ್ಲಿ ಘಟನೆ ನಡೆದಿದೆ. ಸುಮಾರು ಅರ್ಧ ಎಕರೆಯಷ್ಟು ಕಬ್ಬು ಸಂಪೂರ್ಣ ನಾಶವಾಗಿದೆ. ಜಮೀನಿನಲ್ಲಿದ್ದ ಎಂಟು ತೆಂಗಿನ ಮರಗಳು ಕೂಡ ಬೆಂಕಿಯಲ್ಲಿ ಭಸ್ಮವಾಗಿದೆ ಹಾಗೂ ಇದೇ ಗ್ರಾಮದಲ್ಲಿ ಮೊನ್ನೆ ಕೂಡ ಸುಂದ್ರಪ್ಪ ಅವರಿಗೆ ಸೇರಿದ ಜಮೀನಿನಲ್ಲಿ ಬೆಂಕಿ ಬಿದ್ದಿದ್ದು ಅಗ್ನಿಶಾಮಕ ದಳದ ನೆರವಿನಿಂದ ಬೆಂಕಿಯನ್ನು ನಂದಿಸಿದ್ದರು. ಬೆಳೆಗೆ 17 ತಿಂಗಳು ತುಂಬಿದ್ದರು ಸಹ ಕಾರ್ಖಾನೆ ಅವರು ಕಟಾವಿಗೆ ಮುಂದಾಗದೆ ತಡ ಮಾಡುತ್ತಿರುವುದೇ ಈ ಅವಘಡಗಳಿಗೆ ಕಾರಣವಾಗಿದೆ ಹಾಗೂ ಕಾರ್ಖಾನೆಯವರು ಈ ಕೂಡಲೇ ಬೆಳೆಯನ್ನು ಕಟಾವು ಮಾಡಬೇಕು. ಒಂದು ಎಕರೆ ಜಮೀನಿಗೆ ಸುಮಾರು ಒಂದು ಲಕ್ಷದವರೆಗೆ ನಷ್ಟವಾಗುತ್ತಿದ್ದು ಈ ನಷ್ಟವನ್ನು ಕಾರ್ಖಾನೆ ಅವರೇ ಭರಿಸಿ ಕೊಡಬೇಕಾಗಿ ರೈತರು ಆಗ್ರಹಿಸಿದರು.

ಹನೂರು ಪಶು ಆಸ್ಪತ್ರೆಯಲ್ಲಿ ಸಭಾಂಗಣ ಉದ್ಘಾಟನೆ



ಹನೂರು, ಫೆ.3– ಹನೂರು ಪಟ್ಟಣದಲ್ಲಿ ನೂತನವಾಗಿ ನಿರ್ಮಿಸಿರುವ ಪಶು ಆಸ್ಪತ್ರೆಯ ಸಭಾಂಗಣವನ್ನು ಶಾಸಕ ನರೇಂದ್ರ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಆಸ್ಪತ್ರೆಗೆ ಬರುವ ಸಾರ್ವಜನಿಕರಿಗೆ ಮತ್ತು ಪಶುಪಾಲನೆ ಮಾಡುವ ರೈತರಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಈ ಸಭಾಂಗಣವನ್ನು ನಿರ್ಮಾಣ ಮಾಡಲಾಗಿದೆ. ಹಸು, ಕುರಿ, ಮೇಕೆಗಳಿಗೆ ಯಾವುದಾದರೂ ಕಾಯಿಲೆಗಳು ಬಂದಂತ ಸಂದರ್ಭದಲ್ಲಿ ಪಶು ವೈದ್ಯರು ಮತ್ತು ಪಶುಪಾಲಕರು ಒಂದೆಡೆ ಕುಳಿತು ಸಂವಾದ ಮಾಡುವ ಹಿತ ದೃಷ್ಟಿಯಿಂದ ಈ ಸಭಾಂಗಣ ಅನುಕೂಲತೆಯನ್ನು ಪಡೆದುಕೊಳ್ಳಬೇಕು ಎಂದರು.

ಚಾಮರಾಜನಗರ ಜಿಲ್ಲೆಯಲ್ಲಿಯೇ ಪಶುಪಾಲಕರು ಮತ್ತು ಪಶುಗಳು (ಹಸು ಎಮ್ಮೆ ಕುರಿ ಮೇಕೆ) ಹೆಚ್ಚಾಗಿರುವುದು ಹನೂರು ತಾಲ್ಲೂಕಿನಲ್ಲಿ. ಬಹಳ ವಿಸ್ತಾರವಾಗಿರುವ ಇಂತಹ ಹನೂರು ತಾಲೂಕಿನಲ್ಲಿ ಒಬ್ಬರೇ ಒಬ್ಬರು ಪಶು ವೈದ್ಯರು ಕಾರ್ಯ ನಿರ್ವಹಿಸುವುದು ಸವಾಲಿನ ಕೆಲಸವಾಗಿದೆ. ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಹಾಗೂ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿದ್ದೇನೆ ಎಂದು ಅವರು ಹೇಳಿದರು. ಪಶು ವೈದ್ಯರು ಹೇಳುವ ಪ್ರಕಾರ ನಮ್ಮಲ್ಲಿ ಪಶು ಆಸ್ಪತ್ರೆಗಳು ಹೆಚ್ಚಾಗಿದ್ದು, ಪಶು ವೈದ್ಯರು ಮತ್ತು ಸಿಬ್ಬಂದಿಗಳ ಕೊರತೆ ಇದೆ. ಕಳೆದ ಏಳೆಂಟು ವರ್ಷಗಳಿಂದ ಪಶುಪಾಲನ ಇಲಾಖೆಯವರು ಯಾವುದೇ ಸಿಬ್ಬಂದಿಗಳ ನೇಮಕಾತಿ ಮಾಡಿಲ್ಲದಿರುವುದು ಈ ಸ್ಥಿತಿಗೆ ಕಾರಣವಾಗಿದೆ. ಪಶು ಇಲಾಖೆಯ ಕೆಲಸ ಕಾರ್ಯಗಳು ಶೇ. 90 ರಷ್ಟು ಫೀಲ್ಡ್ ನಲ್ಲೇ ಕರ್ತವ್ಯ ನಿರ್ವಹಿಸಬೇಕಾಗಿದೆ. ಎಲ್ಲೆಲ್ಲಿ ಹಸು ಸಾಕಾಣಿಕೆ ಮಾಡುತ್ತಿದ್ದಾರೆ ಅಂತಹ ಗ್ರಾಮಗಳಿಗೆ ಭೇಟಿ ನೀಡಿ ಪಶುಗಳಿಗೆ ಚಿಕಿತ್ಸೆ ನೀಡಿ ಸಮಸ್ಯೆಗಳನ್ನು ಬಗೆಹರಿಸಬೇಕು. ಆದ್ದರಿಂದ ಪಶು ಇಲಾಖೆಗೆ ಸಿಬ್ಬಂದಿಗಳ ಅಗತ್ಯವಿದೆ. ಇನ್ನು ಮುಂದೆಯಾದರೂ ಸರ್ಕಾರ ಎಚ್ಚೆತ್ತುಕೊಂಡು ಇಲಾಖೆಗೆ ಅಗತ್ಯ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪಪಂ ಉಪಾಧ್ಯಕ್ಷ ಗಿರೀಶ್, ಸದಸ್ಯರಾದ ಹರೀಶ್, ಸಂಪತ್ ಕುಮಾರ್, ಸುದೇಶ್, ಪಶು ವೈದ್ಯಾಧಿಕಾರಿ ಸಿದ್ದರಾಜು ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚೇತನ್ ದೊರೆರಾಜ್ ಇನ್ನಿತರಿದ್ದರು.

ಕರುವಿನ ಮೇಲೆ ಶ್ವಾನಗಳ ಗುಂಪು ದಾಳಿ

ಬೀದಿ ನಾಯಿಗಳ ಹಾವಳಿ ತಡೆಯುವಲ್ಲಿ ವಿಫಲ

ಬೇಗೂರು(ಗುಂಡ್ಲುಪೇಟೆ), ಫೆ.3– ಸಮೀಪದ ಬೆಳಚಲವಾಡಿ ಗ್ರಾಮದಲ್ಲಿ ಕರುವೊಂದರ ಮೇಲೆ ಶ್ವಾನಗಳ ಗುಂಪೊಂದು ದಾಳಿ ನಡೆಸಿರುವ ಘಟನೆ ನಡೆದಿದೆ.



ಬೇಗೂರು ಸಮೀಪದ ಬೆಳಚಲವಾಡಿ ಗ್ರಾಮದ ಬಿ.ಎಮ್.ಕುಮಾರ್ ಅವರ ಕರುವಿನ ಮೇಲೆ ಬೀದಿ ನಾಯಿಗಳ ಗುಂಪೊಂದು ಹಠಾತ್ತನೆ ದಾಳಿ ನಡೆಸಿ ಕಿವಿ, ತಲೆ, ಕಣ್ಣು ಹಾಗೂ ಬೆನ್ನಿನ ಭಾಗಗಳನ್ನು ಗಾಯಗೊಳಿಸಿದ್ದು, ಕರು ಕಿರುಚಿಕೊಂಡಾಗ ಇದನ್ನು ಗಮನಿಸಿದ ಮಾಲೀಕ ಕುಮಾರ್ ಮತ್ತು ಗ್ರಾಮಸ್ಥರು ಶ್ವಾನಗಳಿಂದ ಕರುವನ್ನು ಬಿಡಿಸಲು ಪ್ರಯತ್ನಿಸಿದರು. ಆದರೆ ಶ್ವಾನಗಳು ಮಾಲೀಕನ ಮೇಲೆ ದಾಳಿ ನಡೆಸಲು ಮುಂದಾದಾಗ ಗ್ರಾಮಸ್ಥರು ದೂರದಿಂದಲೇ ಕಲ್ಲಿನಿಂದ ಹೊಡೆದು ಶ್ವಾನಗಳಿಂದ ಕರುವನ್ನು ರಕ್ಷಿಸಿದ್ದಾರೆ. ಈ ಹಿಂದೆ ಹಲವು ಬಾರಿ ಈ ರೀತಿ ಶ್ವಾನಗಳು ಕರುಗಳ ಮೇಲೆ ಹಾಗೂ ಕುರಿಮರಿಗಳ ಮೇಲೆ ದಾಳಿ ನಡೆಸಿರುವುದಲ್ಲದೆ ಎಷ್ಟೋ ಬಾರಿ ಶಾಲೆಗೆ ಹೋಗುವ ಮಕ್ಕಳ ಮೇಲೂ ಸಹ ಎರಗಿರುವ ಪ್ರಸಂಗ ನಡೆದಿದೆ. ಅದೇ ರುಚಿಯ ದಾರಿಯನ್ನಿಡಿದು ಕರುವಿನ ಮೇಲೆ ದಾಳಿ ನಡೆಸಿ ಗಾಯಗೊಳಿಸಿದೆ ಹೀಗೆ ಮುಂದುವರೆದರೆ ಮುಂದೊಂದು ದಿನ ಮಕ್ಕಳು ಹಾಗೂ ಸಾರ್ವಜನಿಕರ ಮೇಲೂ ಸಹ ದಾಳಿ ನಡೆಸುವ ಸಾಧ್ಯತೆ ಇದೆ. ಕೂಡಲೇ ಶ್ವಾನಗಳ ಹಾವಳಿ ನಿಗ್ರಹಕ್ಕೆ ಗಮನ ಹರಿಸಬೇಕು ಎಂದು ಗ್ರಾಮಸ್ಥರು ಅಗ್ರಹಿಸಿದ್ದಾರೆ

ಈಗಾಗಲೇ ಬೀದಿ ನಾಯಿಗಳ ಹಾವಳಿ ಬಗ್ಗೆ ಹಲವು ಬಾರಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಗಮನಕ್ಕೆ ತಂದಿದ್ದು ಇದುವರೆಗು ಬೀದಿನಾಯಿಗಳ ಹಾವಳಿ ತಪ್ಪಿಸುವಲ್ಲಿ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಇನ್ನಾದರು ಈ ಬಗ್ಗೆ ಗಮನ ಹರಿಸಿ ಕೂಡಲೇ ಕ್ರಮ ಕೈಗೊಳ್ಳುವರೇ ಕಾದು ನೋಡಬೇಕಿದೆ

ಮೈಸೂರು ಮಿತ್ರ

ಒಂದನೇ ಪುಟದಿಂದ

ಕಾಮಗಾರಿಗೆ 1200 ಕೋಟಿ ಅನುದಾನ ಹಂಚಿಕೆ

ಪಡೆಯಲಾಗುವುದು ಎಂದು ತಿಳಿಸಿದರು. ಚಾಮರಾಜನಗರ, ಸಕಲೇಶಪುರ, ಸುಬ್ರಹ್ಮಣ್ಯ ರಸ್ತೆ, ತಿಪಟೂರು, ಅರಸೀಕೆರೆ, ತಾಳಗುಪ್ಪ, ಹರಿಹರ, ರಾಣಿಬೆನ್ನೂರು, ಚಿತ್ರದುರ್ಗ, ಬಂಟ್ವಾಳ, ಹಾಸನ, ಸಾಗರ ಜಂಬುಗಾರು, ಶಿವಮೊಗ್ಗ ಟೌನ್, ಚಿಕ್ಕಮಗಳೂರು ಮತ್ತು ದಾವಣಗೆರೆ ರೈಲು ನಿಲ್ದಾಣ ಸೇರಿ ಅಭಿವೃದ್ಧಿ 15 ರೈಲು ನಿಲ್ದಾಣಗಳನ್ನು ಮೈಸೂರು ರೈಲು ನಿಲ್ದಾಣದ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲಾಗುವುದು. ಇದಕ್ಕಾಗಿ 8 ರಿಂದ 10 ಕೋಟಿ ರೂ. ನೀಡಲಾಗುತ್ತಿದೆ ಎಂದು ಹೇಳಿದರು.

ಹೊಸ ಮಾರ್ಗಗಳ ನಿರ್ಮಾಣಕ್ಕೆ ಸಮೀಕ್ಷೆ: ಅಮೃತ ಭಾರತ ಯೋಜನೆಯಡಿ 5 ಕಿ.ಮೀಟರ್ ವ್ಯಾಪ್ತಿಯಲ್ಲಿ 50 ಸಾವಿರ ಜನಸಂಖ್ಯೆ ಹೊಂದಿರುವ ಪಟ್ಟಣಗಳಿಗೆ ರೈಲು ಸಂಪರ್ಕವನ್ನು ಕಲ್ಪಿಸಲು ಸಮೀಕ್ಷೆ ಕಾರ್ಯವನ್ನು ನಡೆಸಲಾಗುವುದು. 3ನೇ ಹಂತದ ನಗರಗಳಾದ ಹಿರಿಯೂರು, ಕೊಳ್ಳೇಗಾಲ ಮೊದಲಾದವು ರೈಲ್ವೆ ಸೇವೆಯನ್ನು ಭವಿಷ್ಯದಲ್ಲಿ ಪಡೆಯಲಿವೆ. ಮುಂದಿನ 2 ವರ್ಷದಲ್ಲಿ ಸಮೀಕ್ಷೆ ಮುಗಿಯಲಿದ್ದು, ಡಿಪಿಆರ್ ಸಿದ್ಧಪಡಿಸಿ ಹೊಸ ಮಾರ್ಗಗಳಿಗೆ ಅನುದಾನ ಪಡೆಯಲಾಗುವುದು ಎಂದರು.

ಶೇ.33 ರಷ್ಟು ಅನುದಾನ ಹೆಚ್ಚಳ: 75 ವರ್ಷಗಳಲ್ಲಿಯೇ ನೈರುತ್ಯ ರೈಲ್ವೆಗೆ ಅತೀ ಹೆಚ್ಚು ಅನುದಾನ ಸಿಕ್ಕಿದೆ. ಕಳೆದ ಬಾರಿಯ ಬಜೆಟ್‌ನಲ್ಲಿ 6,900 ಕೋಟಿ ನೀಡಲಾಗಿತ್ತು. ಈ ಬಾರಿ 9,200 ಕೋಟಿ ರೂ. ನೀಡಲಾಗಿದ್ದು, ಶೇ.33 ರಷ್ಟು ಅನುದಾನ ಹೆಚ್ಚುವರಿಯಾಗಿ ಸಿಕ್ಕಿದೆ. ರಾಜ್ಯಕ್ಕೆ ಒಟ್ಟು 7,561 ಕೋಟಿ ರೂ.ದೊರೆತಿದೆ. ಸ್ವಾತಂತ್ರ್ಯ ನಂತರ ಸಿಕ್ಕ ಭಾರಿ ಅನುದಾನ ಇದಾಗಿದೆ ಎಂದು ತಿಳಿಸಿದರು.

ನೈರುತ್ಯ ರೈಲ್ವೆ ಮೈಸೂರು ವಿಭಾಗದ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ರಾಹುಲ್ ಅಗರ್ವಾಲ್, ಹೆಚ್ಚುವರಿ ವಿಭಾಗೀಯ ವ್ಯವಸ್ಥಾಪಕ ವಿನಾಯಕ್ ನಾಯಕ್, ವಾಣಿಜ್ಯ ವ್ಯವಸ್ಥಾಪಕ ಮಂಜುನಾಥ್ ಕನಮಡಿ, ಲೋಹಿತೇಶ್ವರ್ ಮತ್ತಿತರರಿದ್ದರು.

7561 ಕೋಟಿ ಭಾರೀ ಅನುದಾನ

400 ವಂದೇ ಭಾರತ್ ರೈಲುಗಳ ಗುರಿ: ಭಾರತೀಯ ರೈಲ್ವೆ ಈಗಾಗಲೇ ದೇಶಾದ್ಯಂತ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳನ್ನು ಆರಂಭಿಸಿರುವುದು ಎಲ್ಲರಿಗೂ ತಿಳಿದಿದೆ. ಈಗಾಗಲೇ 8 ವಂದೇ ಭಾರತ್ ರೈಲುಗಳು ಪ್ರಯಾಣಿಕರಿಗೆ ಸೇವೆ ನೀಡುತ್ತಿವೆ. ಆ.15 ರೊಳಗೆ 75 ವಂದೇ ಭಾರತ್ ರೈಲುಗಳನ್ನು ಮತ್ತು ಮುಂದಿನ ಮೂರ್ನಾಲ್ಕು ವರ್ಷಗಳಲ್ಲಿ 400 ವಂದೇ ಭಾರತ್ ರೈಲುಗಳ ಸೇವೆ ಒದಗಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ.

ವಂದೇ ಮೆಟ್ರೋ ರೈಲುಗಳು: ವಂದೇ ಭಾರತ್ ರೈಲುಗಳ ಜೊತೆಗೆ ವಂದೇ ಮೆಟ್ರೋ ರೈಲುಗಳು ಶೀಘ್ರದಲ್ಲೇ ಬರಲಿವೆ. ಇವು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳ ಮಿನಿ ಆವೃತ್ತಿಗಳಾಗಿವೆ. ವಂದೇ ಮೆಟ್ರೋ ರೈಲುಗಳ ತಯಾರಿಕೆ ಈ ವರ್ಷ ಪೂರ್ಣಗೊಳ್ಳಲಿದೆ. ಮುಂದಿನ ವರ್ಷ ಅಥವಾ ಈ ವರ್ಷದ ಅಂತ್ಯದಲ್ಲಿ ವಂದೇ ಮೆಟ್ರೋ ರೈಲುಗಳು ಪ್ರಯಾಣಿಕರ ಸಂಚಾರಕ್ಕೆ ಲಭ್ಯವಾಗಲಿದೆ. ವಂದೇ ಮೆಟ್ರೋ ರೈಲುಗಳನ್ನು ದೊಡ್ಡ ನಗರಗಳ ಹತ್ತಿರದ ಭಾಗಗಳಿಗೆ ಸಂಚರಿಸುವ ಪ್ರಯಾಣಿಕರ ಅನುಕೂಲಕ್ಕಾಗಿ ಆರಂಭಿಸಲಾಗುತ್ತಿದೆ. ಪ್ರಧಾನಿ ಮೋದಿಯವರ ದೂರದೃಷ್ಟಿಯ ಪ್ರಕಾರ ಸಂಪೂರ್ಣ ಮೇಡ್ ಇನ್ ಇಂಡಿಯಾ ವಂದೇ ಮೆಟ್ರೋ ರೈಲುಗಳು ಶೀಘ್ರದಲ್ಲೇ ಸಂಚಾರ ಆರಂಭಿಸಲಿವೆ ಎಂದು ಹೇಳಿದ್ದಾರೆ.

ಚುನಾವಣೆಗೆ ಆಗ್ರಹಿಸಿ ಕಾಂಗ್ರೆಸ್ ಪ್ರತಿಭಟನೆ

ಖಂಡಿಸಿ ನಿನ್ನೆಯೇ ಕಾಂಗ್ರೆಸ್ ಸದಸ್ಯರೆಲ್ಲಾ ಪ್ರತಿಭಟನೆ ನಡೆಸಿದ್ದೆವು. ಇಂದು ನಗರ ಕಾಂಗ್ರೆಸ್ ನೇತೃತ್ವದಲ್ಲಿ ಪ್ರತಿಭಟನೆ ಮುಂದುವರೆಸಿದ್ದೇವೆ. ನಾಳೆ(ಫೆ.4) ಪ್ರಾದೇಶಿಕ ಆಯುಕ್ತರನ್ನು ಭೇಟಿ ಮಾಡಲಿದ್ದೇವೆ. ಪಾಲಿಕೆ ಆಡಳಿತ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ತಾವು ಮಧ್ಯ ಪ್ರವೇಶಿಸಿ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಆಯ್ಕೆಗೆ ಚುನಾವಣೆ ನಡೆಸುವಂತೆ ಮನವಿ ಸಲ್ಲಿಸಲಿದ್ದೇವೆ. ಒಟ್ಟಾರೆ ಚುನಾವಣೆ ನಡೆಸುವವರೆಗೂ ಹೋರಾಟ ಮುಂದುವರೆಸಲಿದ್ದೇವೆ ಎಂದು ತಿಳಿಸಿದರು.

ಮೇಯರ್ ಆಯ್ಕೆಯಾದ 10 ದಿನಗಳಲ್ಲಿ ಸ್ಥಾಯಿ ಸಮಿತಿಗಳ ರಚನೆ ಪೂರ್ಣಗೊಳಿಸಬೇಕು. ಆದರೆ ಶಿವಕುಮಾರ್ ಮೇಯರ್ ಆಗಿ ಸುಮಾರು 6 ತಿಂಗಳಾಗಿದ್ದು, 2–3 ಕೌನ್ಸಿಲ್ ಸಭೆ ನಡೆಸಿದ್ದಾರೆ. ಈವರೆಗೂ ಒಂದಿಲ್ಲೊಂದು ನೆಪ ಹೇಳಿ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಆಯ್ಕೆ ಚುನಾವಣೆಯನ್ನು ಮುಂದೂಡಿಕೊಂಡು ಬಂದಿದ್ದಾರೆ. ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಪಟ್ಟು ಹಿಡಿದಿದ್ದರಿಂದ 15 ದಿನಗಳಲ್ಲಿ ಚುನಾವಣೆ ನಡೆಸುವುದಾಗಿ ನಿರ್ಣಯ ಪ್ರಕಟಿಸಿದ್ದರು. ಆದರೆ 2 ತಿಂಗಳ ಬಳಿಕ ನಿನ್ನೆಗೆ ದಿನಾಂಕ ನಿಗದಿ ಮಾಡಿದ್ದರು. ಚುನಾವಣೆ ಆರಂಭವಾಗಲು 15 ನಿಮಿಷ ಇರುವಂತೆ ಮೇಯರ್ ಕಚೇರಿಯಿಂದ ನಿರ್ಗಮಿಸಿದ್ದಾರೆ. ಅನಾರೋಗ್ಯದ ಕಾರಣ ಜೆಡಿಎಸ್‌ನ ಕೆಲ ಸದಸ್ಯರು ಗೈರಾಗುವ ಕಾರಣ ಚುನಾವಣೆ ಮುಂದೂಡಿರುವುದಾಗಿ 12.30ಕ್ಕೆ ಕೌನ್ಸಿಲ್ ಕಾರ್ಯದರ್ಶಿಗೆ ಪತ್ರ ಕಳುಹಿಸಿದರು ಎಂದು ಕಿಡಿಕಾರಿದರು.

ಅದೇನೇ ಇದ್ದರೂ ಮೇಯರ್ ಅವರು ಚುನಾವಣಾ ಸಭೆಯಲ್ಲಿ ಹಾಜರಾಗಿ, ಕೋರಂ ಪರಿಶೀಲಿಸಿ, ಜೆಡಿಎಸ್ ಸದಸ್ಯರು ಕಳುಹಿಸಿದ್ದ ಪತ್ರವನ್ನು ಓದಿದ ನಂತರ ತೆರಳಬಹುದಿತ್ತು. ಆದರೆ ಏಕಾಏಕಿ ಕಾಣೆಯಾಗುವ ಮೂಲಕ ಅವರಿಗೆ ಸಂವಿಧಾನ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ ಬಗ್ಗೆ ಗೌರವವಿಲ್ಲ ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ. ಇಂದು ಅವರಿಗೆ ಅನಾರೋಗ್ಯವೆಂದು ಕೌನ್ಸಿಲ್ ಸಭೆಯನ್ನೂ ಮುಂದೂಡಿದ್ದಾರೆ. ಇಂತಹ ಸಂದರ್ಭಗಳಲ್ಲಿ ಉಪಮೇಯರ್ ಸಭೆ ನಡೆಸಬೇಕು. ಆದರೆ ಸ್ಥಾಯಿ ಸಮಿತಿ ಅಧ್ಯಕ್ಷರ ಚುನಾವಣೆ ಸಂಬಂಧ ಉತ್ತರಿಸಲು ಹೆದರಿ ಕೌನ್ಸಿಲ್ ಸಭೆಯನ್ನೇ ಮುಂದೂಡಿದ್ದಾರೆ. ಇದು ಬಿಜೆಪಿಯ ಹಿಡನ್ ಅಜೆಂಡಾ ಎಂದು ಆರೋಪಿಸಿದರು.

ಬಜೆಟ್ ಕತೆಯೇನು?: ಸ್ಥಾಯಿ ಸಮಿತಿಗಳ ಅಧ್ಯಕ್ಷರ ಆಯ್ಕೆಯಾಗದಿರುವುದರಿಂದ ಸಾರ್ವಜನಿಕ ಕೆಲಸ ಕಾರ್ಯಗಳಿಗೆ ತುಂಬಾ ತೊಂದರೆಯಾಗಿದೆ. ಶೇ.24.07ರಡಿ ಪರಿಶಿಷ್ಟ ಜಾತಿ, ಪಂಗಡದ ಫಲಾನುಭವಿಗಳಿಗೆ ವೈಯಕ್ತಿಕ ಸೌಲಭ್ಯ ಕಲ್ಪಿಸಬೇಕಾದಲ್ಲಿ ಅದಕ್ಕೆ ಸ್ಥಾಯಿ ಸಮಿತಿ ಅನುಮೋದನೆ ಅಗತ್ಯ. ಶೇ.7.25ರ ಅಡಿಯಲ್ಲಿ ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗದವರಿಗೂ ಸೌಲಭ್ಯ ನೀಡಲು ಸಾಧ್ಯವಾಗುತ್ತಿಲ್ಲ. ಮುಖ್ಯವಾಗಿ ಪಾಲಿಕೆಯ 2023–24ನೇ ಸಾಲಿನ ಬಜೆಟ್ ಅನ್ನು ತಿಂಗಳಲ್ಲಿ ಮಂಡಿಸಬೇಕು. ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷರೇ ಇಲ್ಲ ಎಂದರೆ ಯಾವ ಬಜೆಟ್ ಮಂಡಿಸಲು ಸಾಧ್ಯ. ನಿನ್ನೆಯ ಬೆಳವಣಿಗೆ ಬಗ್ಗೆ ಕಾನೂನು ಚೌಕಟ್ಟಿನಲ್ಲಿ ಪಾಲಿಕೆ ಆಯುಕ್ತರು ಹಾಗೂ ಕೌನ್ಸಿಲ್ ಕಾರ್ಯದರ್ಶಿ ಸರ್ಕಾರಕ್ಕೆ ವರದಿ ನೀಡಿಲ್ಲ. ಅಂದರೆ ಅಧಿಕಾರಿಗಳೂ ಶಾಮೀಲಾಗಿದ್ದಾರೆ ಎಂದು ಆರೋಪಿಸಿದರು.

ಜೆಡಿಎಸ್–ಬಿಜೆಪಿ ಒಂದೇ: ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ಬಿಜೆಪಿ ಹಾಗೂ ಜೆಡಿಎಸ್ ಸೇರಿಕೊಂಡು ರಾಜ್ಯದ ಜೊತೆಗೆ ಮೈಸೂರು ಪಾಲಿಕೆಯನ್ನೂ ಹಾಳು ಮಾಡುತ್ತಿವೆ. ಈ ಎರಡೂ ಪಕ್ಷಗಳನ್ನೂ ಸಮಾನವಾಗಿ ವಿರೋಧಿಸಬೇಕು. ಬಿಜೆಪಿಯ ಬಿ ಟೀಂನಂತೆ ಜೆಡಿಎಸ್ ವರ್ತಿಸುತ್ತಿರುವುದು ನಾಚಿಗೆಗೇಡಿನ ಸಂಗತಿ. ಸ್ಥಾಯಿ ಸಮಿತಿ ಅಧ್ಯಕ್ಷರ ಆಯ್ಕೆ ಚುನಾವಣೆ ನಡೆಸದೆ ಮೇಯರ್ ನಿಯಮ ಉಲ್ಲಂಘಿಸಿದ್ದಾರೆ. ಇದು ಒಬ್ಬರೇ ಅಧಿಕಾರ ನಡೆಸಬೇಕೆಂಬ ಬಿಜೆಪಿಯ ಹುನ್ನಾರ. ಕೇಂದ್ರ, ರಾಜ್ಯ ಹಾಗೂ ಮೈಸೂರು ನಗರ ಪಾಲಿಕೆಯಲ್ಲಿ ಬಿಜೆಪಿ ಆಡಳಿತದಲ್ಲಿದೆ. ಈ ಡಕೋಟ ಟ್ರಿಬಲ್ ಇಂಜಿನ್ ಮೈಸೂರಿಗೆ ನೀಡಿರುವ ಕೊಡುಗೆ ಬಗ್ಗೆ ಮೇಯರ್ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಬೇಕು. ಒಂದೂವರೆ ತಿಂಗಳಲ್ಲಿ ಸಾರ್ವತ್ರಿಕ ಚುನಾವಣೆ ಘೋಷಣೆಯಾಗುತ್ತದೆ. ನಂತರ ಅಡ್ಡಿಯಿಲ್ಲದೆ ಸರ್ವಾಧಿಕಾರ ಮುಂದುವರೆಸಬಹುದು ಎಂಬ ಅಜೆಂಡಾ ಬಿಜೆಪಿಯದ್ದಾಗಿದೆ ಎಂದು ಕಿಡಿಕಾರಿದರಲ್ಲದೆ, ಪ್ರಾದೇಶಿಕ ಆಯುಕ್ತರಿಗೆ ಮನವಿ ನೀಡಿದ ಬಳಿಕ ವಾರದೊಳಗೆ ಚುನಾವಣೆ ನಡೆಸದಿದ್ದರೆ ನ್ಯಾಯಾಲಯದ ಮೆಟ್ಟಿಲೇರಿ ಪಾಲಿಕೆಯನ್ನು ಸೂಪರ್ ಸೀಡ್ ಮಾಡಲು ಮನವಿ ಮಾಡೋಣ. ಈ ನಿಟ್ಟಿನಲ್ಲಿ ಒಗ್ಗಟ್ಟಿನಿಂದ ಹೋರಾಟ ಮುಂದುವರೆಸಬೇಕೆಂದು ತಿಳಿಸಿದರು.

ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಪಾಲಿಕೆ ಸದಸ್ಯರಾದ ಶೋಭಾ ಸುನಿಲ್, ಹೆಚ್.ಎಂ.ಶಾಂತಕುಮಾರಿ, ಪಲ್ಲವಿ ಬೇಗಂ ಮತ್ತಿತರರು ಮಾತನಾಡಿ, ಮೇಯರ್ ಹಾಗೂ ಬಿಜೆಪಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಮಾಜಿ ಉಪಮೇಯರ್ ಶ್ರೀಧರ್, ಕಾರ್ಪೊರೇಟರ್‌ಗಳಾದ ಗೋಪಿ, ಶಿವಕುಮಾರ್, ಪ್ರದೀಪ್‌ಚಂದ್ರ, ಲೋಕೇಶ್ ಪಿಯಾ, ಅಕ್ಮಲ್ ಪಾಷ, ಬಷೀರ್ ಅಹಮದ್, ಉಷಾ, ಮಾಜಿ ಸದಸ್ಯರಾದ ಸುನಿಲ್, ಶಿವಮಾದು, ಕೆ.ಆರ್.ಕ್ಷೇತ್ರದ ಮುಖಂಡ ಪ್ರದೀಪ್ ಕುಮಾರ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ಡಿಕೆಶಿ ಭೇಟಿ ಮಾಡಿದ ನಟ ಸುದೀಪ್

ನಟ ಸುದೀಪ್ ಅವರು ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತಾರೆ ಎನ್ನುವ ಊಹಾಪೋಹಗಳು ಕೇಳಿ ಬರುತ್ತಿವೆ.ಈ ಬಾರಿ ವಿಧಾನಸಭಾ ಚುನಾವಣೆಗೆ ಇನ್ನು ಕೆಲವೇ ದಿನಗಳು ಬಾಕಿ ಇರುವ ಹಿನ್ನೆಲೆಯಲ್ಲಿ ಸುದೀಪ್ ಕಾಂಗ್ರೆಸ್ ಪಕ್ಷದಿಂದ ಚುನಾವಣೆಗೆ ಸ್ಪರ್ಧಿಸುತ್ತಾರಾ ಎನ್ನುವ ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ.

ಆದರೆ ಈ ಬಗ್ಗೆ ನಟ ಸುದೀಪ್ ಅವರಾಗಲೀ ಅಥವಾ ಡಿ.ಕೆ. ಶಿವಕುಮಾರ್ ಅವರಾಗಲೀ ಚರ್ಚೆಯ ಗುಟ್ಟು ಬಿಟ್ಟುಕೊಟ್ಟಿಲ್ಲ. ವಿಧಾನಸಭೆ ಚುನಾವಣೆಯ ಹಿನ್ನೆಲೆಯಲ್ಲಿ ಚುನಾವಣಾ ಪ್ರಚಾರ ಸಭೆಗಳಿಗೆ ಬರುವಂತೆ ನಟ ಸುದೀಪ್ ಅವರಿಗೆ ಡಿ.ಕೆ. ಶಿವಕುಮಾರ್ ಆಹ್ವಾನ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ರಾಜ್ಯದ ಹಲವು ವಿಧಾನಸಭಾ ಕ್ಷೇತ್ರಗಳಲ್ಲಿ ವಾಲ್ಮೀಕಿ ಸಮುದಾಯದ ಮತಗಳು ನಿರ್ಣಾಯಕವಾಗಿರುವ ಕಾರಣ ಸುದೀಪ್ ಮೂಲಕ ವಾಲ್ಮೀಕಿ ಮತ ಸೆಳೆಯಲು ಕಸರತ್ತು ನಡೆಸಲಾಗಿದೆ. ಸುದೀಪ್ ಭೇಟಿ ಕುರಿತು ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿರುವ ಡಿಕೆಶಿ, ನಾನಾ ಚಿತ್ರರಂಗಗಳಲ್ಲಿ ಛಾಪು ಮೂಡಿಸಿ ಕರ್ನಾಟಕದ ಕೀರ್ತಿ ಹೆಚ್ಚಿಸಿದ ನಟ ಕಿಚ್ಚ ಸುದೀಪ್ ಅವರನ್ನು ಭೇಟಿ ಮಾಡಿದೆ. ಈ ವೇಳೆ ಕನ್ನಡ ಚಿತ್ರರಂಗ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸಿದೆವು. ಕನ್ನಡ ಚಿತ್ರರಂಗದ ಸಮಸ್ಯೆಗಳನ್ನು ಬಗೆಹರಿಸಲು ಕಾಂಗ್ರೆಸ್ ರೂಪಿಸುತ್ತಿರುವ ವಿಶೇಷ ಪ್ರಣಾಳಿಕೆಗೆ ಅವರ ಸಲಹೆಗಳನ್ನು ಪಡೆದಿದ್ದೇನೆ ಎಂದು ಬರೆದುಕೊಂಡಿದ್ದಾರೆ.

ನಿರ್ದೇಶನದ ನಂತರವೇ ಮೇಕೆದಾಟು ಜಾರಿ

ರೂ. 1 ಸಾವಿರ ಕೋಟಿ ಮೀಸಲಿಡಲಾಗಿದೆ. ಸಮಗ್ರ ಯೋಜನಾ ವರದಿಗೆ ಅನುಮತಿ ದೊರೆಯದೆ ಸರ್ಕಾರ ಅಸಹಾಯಕವಾಗಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದರು. ಕೇಂದ್ರ ಬಜೆಟ್‌ನಲ್ಲಿ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ, ವಸತಿ, ಕೃಷಿ, ನೀರಾವರಿಗೆ ಆದ್ಯತೆ ನೀಡಲಾಗಿದೆ. ಉದ್ಯೋಗ ಖಾತ್ರಿಗೆ ಅನುದಾನ ಕಡಿಮೆಯಾಗಿದೆ ಎನ್ನುವುದು ಸರಿಯಲ್ಲ. ರಾಜ್ಯವು ಹಲವು ಯೋಜನೆಗಳನ್ನು ಉದ್ಯೋಗ ಖಾತ್ರಿಯಲ್ಲಿ ವಿಲೀನಗೊಳಿಸಿದೆ. ಸ್ಥಳೀಯ ಸಂಪನ್ಮೂಲಗಳನ್ನೂ ಬಳಸಲಾಗುತ್ತಿದೆ ಎಂದರು.

ಮುಂದುವರೆದ ಪಾಲಿಕೆ ಅದಾಲತ್; ಸಮಸ್ಯೆ ಹೊತ್ತು ತಂದ ನಾಗರಿಕರು

ಸಮರ್ಪಕ ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ, ಕಸ ವಿಲೇವಾರಿ ದೂರುಗಳೇ ಹೆಚ್ಚು



ಪಾಲಿಕೆ ವಲಯ 6ರ ಕಚೇರಿಯಲ್ಲಿ ನಡೆದ ಅದಾಲತ್‌ನಲ್ಲಿ ಉಪಮೇಯರ್ ಡಿ.ರೂಪಾ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು. ಪಾಲಿಕೆ ಸದಸ್ಯರಾದ ರಮೇಶ್ (ರಮಣಿ), ಪ್ರಮೀಳಾ ಭರತ್, ರಂಗಸ್ವಾಮಿ ಇತರರು ಉಪಸ್ಥಿತರಿದ್ದರು.



ಪಾಲಿಕೆ ವಲಯ 7ರ ಕಚೇರಿಯಲ್ಲೂ ಉಪಮೇಯರ್ ಡಿ.ರೂಪಾ ಸಾರ್ವಜನಿಕರಿಂದ ಅರ್ಜಿ ಸ್ವೀಕರಿಸುವ ಸಂದರ್ಭದಲ್ಲಿ ಪಾಲಿಕೆ ಸದಸ್ಯರಾದ ಅಶ್ವಿನಿ ಶರತ್, ಅಕ್ಮಲ್ ಪಾಷಾ ಇನ್ನಿತರರು ಹಾಜರಿದ್ದರು.

ಮೈಸೂರು, ಫೆ3 (ಆರ್‌ಕೆಬಿ)– ಸಾರ್ವಜನಿಕರ ನಾನಾ ಕುಂದುಕೊರತೆಗಳನ್ನು ಪರಿಹರಿಸಲು ನಗರಪಾಲಿಕೆಯ ಎಲ್ಲಾ 9 ವಲಯ ಕಚೇರಿಗಳಲ್ಲಿ ಪಾಲಿಕೆ ಅದಾಲತ್ ಮುಂದುವರಿದಿದ್ದು, ಶುಕ್ರವಾರ ವಲಯ 6 ಮತ್ತು 7ರಲ್ಲಿ ಅದಾಲತ್ ನಡೆಯಿತು. ಸುಮಾರು 25 ಅರ್ಜಿಗಳು ಸಲ್ಲಿಕೆಯಾದವು.

ಮಂಡಿಮೊಹಲ್ಲಾದ ಪುಲಿಕೇಶಿ ರಸ್ತೆಯಲ್ಲಿರುವ ಡಾ.ಅಂಬೇಡ್ಕರ್ ವೃತ್ತದ ಬಳಿಯ ಪಾಲಿಕೆ ವಲಯ ಕಚೇರಿ 7ರಲ್ಲಿ ಉಪಮೇಯರ್ ಡಾ.ಜಿ.ರೂಪಾ ಅದಾಲತ್ ಉದ್ಘಾಟಿಸಿದರು. ಅವರ ಅಧ್ಯಕ್ಷತೆಯಲ್ಲೇ ನಡೆದ ಅದಾಲತ್ ಸಂದರ್ಭದಲ್ಲಿ ಸಾರ್ವಜನಿಕರಿಂದ 13 ಕುಂದುಕೊರತೆ ಅರ್ಜಿಗಳನ್ನು ಸ್ವೀಕರಿಸಿದರು. ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿ ವಿದ್ಯಾವರ್ಧಕ ಕಾಲೇಜಿನ ಎದುರಿನಲ್ಲಿರುವ ಪಾಲಿಕೆ 6ರ ವಲಯ ಕಚೇರಿಯಲ್ಲಿ ನಡೆದ ಅದಾಲತ್‌ನಲ್ಲೂ ಅವರು 12 ಅರ್ಜಿಗಳನ್ನು ಸ್ವೀಕರಿಸಿದರು. ಒಟ್ಟಾರೆ ಎರಡು ಕಚೇರಿಯಿಂದ 25 ಅರ್ಜಿಗಳು ಸಲ್ಲಿಕೆಯಾದವು.

ಪುಲಿಕೇಶಿ ರಸ್ತೆಯಲ್ಲಿರುವ ವಲಯ 7ರ ಕಚೇರಿಯಲ್ಲಿ ಅದಾಲತ್ ಉದ್ಘಾಟನೆಗೊಳ್ಳುತ್ತಿದ್ದಂತೆ, 8, 9, 17, 26, 27 ಮತ್ತು 28ನೇ ವಾರ್ಡ್ ವ್ಯಾಪ್ತಿಯ ವಲಯ 7ರ ಕಚೇರಿಯಲ್ಲಿ ಸಾರ್ವಜನಿಕರು ಉಪಮೇಯರ್ ಡಾ.ರೂಪಾ ಅವರಿಗೆ ದೂರು ಅರ್ಜಿಗಳನ್ನು ಸಲ್ಲಿಸಿದರು. ಈ ಪೈಕಿ ಕುಡಿಯುವ ನೀರು, ಒಳಚರಂಡಿ, ಮೂಲಭೂತ ಸೌಕರ್ಯಗಳ ಕೊರತೆ, ಕಳಪೆ ನೈರ್ಮಲ್ಯ ಸೇರಿದಂತೆ ನಾಗರಿಕ ಸೌಕರ್ಯ, ಸಮಸ್ಯೆಗಳ ಕುರಿತಂತೆ ಹೆಚ್ಚು ದೂರುಗಳು ಸಲ್ಲಿಸಲ್ಪಟ್ಟವು.

ವೀರನಗೆರೆ ನಿವಾಸಿಗಳು ಪಾಲಿಕೆಯಿಂದ ಅನಿಯಮಿತ ನೀರು ಸರಬರಾಜು ಮಾಡುತ್ತಿರುವ ಬಗ್ಗೆ ದೂರು ನೀಡಿ, ಅನೇಕ ದಿನಗಳಿಂದ ಈ ಸಮಸ್ಯೆ ಇದೆ. ಅನೇಕ ಬಾರಿ ಮನವಿ ಮಾಡಿದ್ದರೂ ಸಮಸ್ಯೆ ಬಗೆಹರಿದಿಲ್ಲ. ತಕ್ಷಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ಪದಾಧಿಕಾರಿ ವಿಜಯಕುಮಾರ್, ಮಂಡಿ ಮೊಹಲ್ಲಾದಲ್ಲಿ ಅಧಿಕೃತ ಪರಿಶೀಲನೆ ನಡೆಸದೆ 13ನೇ ಕ್ರಾಸ್‌ನಲ್ಲಿ ರಸ್ತೆ ಡಾಂಬರೀಕರಣ ಸೇರಿದಂತೆ ಅಭಿವೃದ್ಧಿ ಕಾಮಗಾರಿ ಬಗ್ಗೆ ದೂರಿದರು.

ಬನ್ನಿಮಂಟಪದ ಸಾಮಾಜಿಕ ಕಾರ್ಯಕರ್ತ ಹಾರೂನ್ ರಶೀದ್ ಅವರು, 8ನೇ ವಾರ್ಡ್ ವ್ಯಾಪ್ತಿಯ ಬನ್ನಿಮಂಟಪದ ಹಲವು ಭಾಗಗಳಲ್ಲಿ ಅಸಮರ್ಪಕ ಒಳಚರಂಡಿ ವ್ಯವಸ್ಥೆ, ಕಸ ತ್ಯಾಜ್ಯ, ಕಸ ಸಂಗ್ರಹಣೆ ಮತ್ತು ವಿಲೇವಾರಿ ಸರಿಯಾಗಿ ನಡೆಯುತ್ತಿಲ್ಲ. ಖಾತೆ ವಿತರಣೆಯಲ್ಲಿ ವಿಳಂಬವಾಗುತ್ತಿರುವ ಬಗ್ಗೆ ಉಪಮೇಯರ್ ಅವರ ಗಮನ ಸೆಳೆದರು.

ನವೆಂಬರ್ 29, 2018 ರ ದಿನಾಂಕದ 'ಸ್ಟಾರ್ ಆಫ್ ಮೈಸೂರ್'ನ ಪ್ರತಿಯನ್ನು ಪ್ರದರ್ಶಿಸಿ, 'ಕಟ್ಟಡ ಕಾನೂನುಗಳನ್ನು ಉಲ್ಲಂಘಿಸಿದ್ದಕ್ಕಾಗಿ ಜೈಲು ಶಿಕ್ಷೆ ವಿಧಿಸಲಾಗಿದೆ' ಎಂಬ ಶೀರ್ಷಿಕೆಯ ಸುದ್ದಿ ಲೇಖನವನ್ನು ಉಪಮೇಯರ್ ಅವರಿಗೆ ತೋರಿಸಿದರು. ಕಟ್ಟಡ ಕಾನೂನು ಉಲ್ಲಂಘಿಸುವವರ ವಿರುದ್ಧ ಪಾಲಿಕೆ ಯಾವ ಕ್ರಮ ತೆಗೆದುಕೊಂಡಿದೆ ಎಂದು ಪ್ರಶ್ನಿಸಿದರು. ಟಿಪ್ಪು ಮಸೀದಿ ಬಳಿಯ ಕಸವನ್ನು ದಿನಗಟ್ಟಲೆ ತೆರವು ಮಾಡುತ್ತಿಲ್ಲ. ಸೂಕ್ತ ಚರಂಡಿ ನಿರ್ಮಿಸಿಲ್ಲ. ಕೂಡಲೇ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಬನ್ನಿಮಂಟಪದ ಆನೆಗುಂದಿ ರಸ್ತೆಯ ನಿವಾಸಿ ಡಾ.ಎಸ್.ಎಸ್.ಪ್ರಸಾದ್ ಅವರು, ತಮ್ಮ ಪ್ರದೇಶದ ಹಲವು ಪ್ರದೇಶಗಳಲ್ಲಿ ಕಸ ವಿಲೇವಾರಿ ಬಗ್ಗೆ ಎಂಸಿಸಿಯ ನಿರಾಸಕ್ತಿಯನ್ನು ಪ್ರಶ್ನಿಸಿದರು. ತೆರವು ಮಾಡದ ಕಸದ ರಾಶಿಗಳು ಈಗಾಗಲೇ ಪ್ರದೇಶದ ಹಲವಾರು ರಸ್ತೆಗಳಲ್ಲಿ ಹರಡಿಕೊಂಡಿದ್ದು, ಪರಿಸ್ಥಿತಿ ಹದಗೆಡುವ ಮೊದಲು ತಕ್ಷಣವೇ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

> ಕಳೆದ ಡಿಸೆಂಬರ್‌ನಲ್ಲಿ ನಗರಪಾಲಿಕೆ ಮುಖ್ಯ ಕಚೇರಿ ಆವರಣದಲ್ಲಿ ಐದು ದಿನಗಳ ಬೃಹತ್ ಅದಾಲತ್ ನಡೆಸಲಾಗಿತ್ತು. ಆ ಸಂದರ್ಭದಲ್ಲಿ ಬಂದ ದೂರುಗಳನ್ನು ಪರಿಹರಿಸಲಾಗಿದೆ. ಪಾಲಿಕೆ ವಲಯ ಕಚೇರಿಗಳಲ್ಲಿ ಬಂದಿರುವ ದೂರುಗಳನ್ನು ಮುಂದಿನ ಮೂರು ದಿನಗಳಲ್ಲಿ ಪರಿಹರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಸಾಧ್ಯವಾದಷ್ಟು ಯಾವುದೇ ಸಾರ್ವಜನಿಕ ದೂರುಗಳನ್ನು ತಕ್ಷಣ ಪರಿಹರಿಸಲು ಪಾಲಿಕೆ ಪ್ರಯತ್ನಿಸುತ್ತಿದೆ. ಸರ್ಕಾರದ ಅನುಮತಿ ಮತ್ತು ಮಧ್ಯಸ್ಥಿಕೆ ಅಗತ್ಯವಿರುವ ಸಮಸ್ಯೆಗಳು ಮಾತ್ರ ಬಾಕಿ ಉಳಿದಿವೆ.
>
> – ಡಾ.ರೂಪಾ, ಉಪಮೇಯರ್

ಅದಾಲತ್ ಸಂದರ್ಭದಲ್ಲಿ ವಲಯ 7ರ ಅಭಿವೃದ್ಧಿ ಅಧಿಕಾರಿ, ಆರೋಗ್ಯ ಅಧಿಕಾರಿಗಳು ಅದಾಲತ್‌ಗೆ ಗೈರು ಹಾಜರಾಗಿರುವ ಬಗ್ಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು. ಸಂಬಂಧಿಸಿದ ಅಧಿಕಾರಿಗಳೇ ಇಲ್ಲದೆ ಅದಾಲತ್ ನಡೆಸುವುದರಲ್ಲಿ ಅರ್ಥವಿದೆಯೇ ಎಂದು ಪ್ರಶ್ನಿಸಿದರು.


ಪಾಲಿಕೆ ಸದಸ್ಯರಾದ ಅಶ್ವಿನಿ ಶರತ್, ಅಕ್ಮಲ್ ಪಾಷಾ ಮತ್ತು ರಫೀಕ್, ಕಿರಿಯ ಎಂಜಿನಿಯರ್‌ಗಳಾದ ಪಿ.ಎಸ್. ರಾಜೇಶ್ ಮತ್ತು ಪಿ.ರಂಜಿತಾ, ವಲಯ–7 ವ್ಯವಸ್ಥಾಪಕ ಆರ್.ಯೋಗೇಂದ್ರ, ಕಂದಾಯ ಅಧಿಕಾರಿ ಬಿ.ಟಿ. ಧನಲಕ್ಷ್ಮಿ ಇನ್ನಿತರರು ಉಪಸ್ಥಿತರಿದ್ದರು.

ಮುಂದಿನ ಅದಾಲತ್ ಫೆ.7ರಂದು ವಲಯ 8 ಮತ್ತು 9ರಲ್ಲಿ ನಡೆಯಲಿದೆ.

ಮೈಸೂರಲ್ಲಿ ಏಳು ದಿನಗಳ ರಾಷ್ಟ್ರೀಯ ಭಾವೈಕ್ಯತಾ ಶಿಬಿರಕ್ಕೆ ಚಾಲನೆ

ರಾಷ್ಟ್ರೀಯ ಏಕತೆ ದುರ್ಬಲಗೊಳಿಸುವ ಶಕ್ತಿ, ಆಲೋಚನೆಗಳ ವಿರೋಧಿಸುವುದು ಎಲ್ಲರ ಕರ್ತವ್ಯ

ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ಅಭಿಮತ



ಮೈಸೂರು, ಫೆ3(ಆರ್‌ಕೆಬಿ)– ರಾಷ್ಟ್ರೀಯ ಏಕತೆಯನ್ನು ದುರ್ಬಲಗೊಳಿಸುವ ಶಕ್ತಿ ಮತ್ತು ಆಲೋಚನೆಗಳನ್ನು ವಿರೋಧಿಸುವುದು ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಿದೆ ಎಂದು ಕರ್ನಾಟಕ ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ ತಿಳಿಸಿದರು.

ಮೈಸೂರಿನ ಸರಸ್ವತಿಪುರಂನ ಸಾಹುಕಾರ್ ಚೆನ್ನಯ್ಯ ರಸ್ತೆಯಲ್ಲಿರುವ ಎನ್‌ಎಸ್‌ಎಸ್ ಭವನದ ಸಭಾಂಗಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಎನ್‌ಎಸ್‌ಎಸ್ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಜಂಟಿಯಾಗಿ ಆಯೋಜಿಸಿದ್ದ ಏಳು ದಿನಗಳ ರಾಷ್ಟ್ರೀಯ ಭಾವೈಕ್ಯತಾ ಶಿಬಿರಕ್ಕೆ ಶುಕ್ರವಾರ ಚಾಲನೆ ನೀಡಿ ಅವರು ಮಾತನಾಡಿದರು.

ವಿವಿಧತೆಯಲ್ಲಿ ಏಕತೆ ಹೊಂದಿರುವ ನಮ್ಮ ದೇಶ ಭೌಗೋಳಿಕ ಹಾಗೂ ಭಾಷಿಕವಾಗಿ ವೈವಿಧ್ಯತೆ ಹೊಂದಿದೆ. ವಿವಿಧ ರಾಜ್ಯ, ಪ್ರದೇಶಗಳಲ್ಲಿ ವಾಸಿಸುವ ನಾವು ವಿಭಿನ್ನ ಆಹಾರ, ವಿವಿಧ ಉಡುಪು, ವಿವಿಧ ಭಾಷೆಗಳನ್ನು ಮಾತನಾಡುತ್ತೇವೆ. ವಿವಿಧ ಧರ್ಮಗಳಿಗೆ ಸೇರಿದ್ದರೂ ನಾವೆಲ್ಲರೂ ಒಂದೇ ಎಂಬುದು ನಮ್ಮ ಗುರಿಯಾಗಬೇಕು. ಎನ್‌ಎಸ್‌ಎಸ್ ಸಂಸ್ಥೆಯಲ್ಲಿ ಪ್ರತಿಯೊಬ್ಬರೂ ಸೇವಾ ಮನೋಭಾವನೆ ರೂಢಿಸಿಕೊಂಡಿರುವುದು ಸಂತಸದ ವಿಷಯ ಎಂದು ಹೇಳಿದರು.

ನಂತರ ಮಾತನಾಡಿದ ಮೈಸೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿ ಪ್ರೊ.ಎಚ್.ರಾಜಶೇಖರ್ ಮಾತನಾಡಿ, ರಾಷ್ಟ್ರದ ಏಕೀಕರಣಕ್ಕೆ ಅಡ್ಡಿಯಾಗುವ ಅಂಶಗಳ ವಿಷಯ ಹಲವಿದೆ. ಭಾಷಾ ಶಾಸ್ತ್ರದ, ಪ್ರಾದೇಶಿಕತೆ, ಕೋಮುವಾದ, ಜಾತಿವಾದ ಜೊತೆಗೆ ಅನೇಕ ಭಾಷೆಗಳು ನಮ್ಮಲ್ಲಿವೆ. ದೇಶವನ್ನು ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸುವುದು ಭಾರತೀಯರ ಭಾವನೆಯಲ್ಲಿ ಮಹತ್ತರ ಬದಲಾವಣೆಯನ್ನು ದುರುಪಯೋಗಪಡಿಸಿಕೊಂಡಿದೆ ಎಂದರು.

ನಾವು ಬೇರೆ ರಾಜ್ಯದ ಹಾಗೂ ದೇಶದ ಭಾಷೆಗಳನ್ನು ಕಲಿತರೆ ನಾವೆಲ್ಲರೂ ಒಂದೇ ಎಂಬ ಮನೋಭಾವನೆ ಮೂಡುತ್ತದೆ. ಮುಂದಿನ ದಿನದಲ್ಲಿ ಪ್ರತಿಯೊಬ್ಬರಲ್ಲೂ ನಾವೆಲ್ಲ ಒಂದೇ ಎನ್ನುವ ಮನೋಭಾವ ಮೂಡಿದರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜಕ ಡಾ.ಎಂ.ಬಿ.ಸುರೇಶ, ಎಸ್‌ಎಸ್‌ಎಸ್–ಇಟಿಐ ಸಂಯೋಜಕ ಪ್ರೊ.ಬಿ.ಚಂದ್ರಶೇಖರ್, ಕನ್ನಡ ಪ್ರಾಧ್ಯಾಪಕ ಪ್ರೊ.ಸುರೇಶ್, ಸಲಹೆಗಾರರಾದ ಕೆ.ಟಿ.ವೀರಪ್ಪ, ತರಬೇತಿ ಅಧಿಕಾರಿ ಕೆ.ಎ.ಕಾರ್ಯಪ್ಪ, ನಿವೃತ್ತ ಕಾರ್ಯಕ್ರಮ ಸಂಯೋಜನಾಧಿಕಾರಿ ಪ್ರೊ.ಬಿ.ಕೆ.ಶಿವಣ್ಣ, ಪ್ರೊ.ಬಿ.ಕೆ. ಜಗದೀಶ್, ಪ್ರೊ.ಜೆ.ಬಿ.ಶಿವರಾಜು, ಪ್ರೊ.ಕೆ.ಎಂ.ವೀರಯ್ಯ, ಪ್ರೊ.ಸತ್ಯನಾರಾಯಣ, ಪ್ರೊ.ಕೆ.ಕಾಳಚನ್ನೇಗೌಡ, ಡಾ.ರುದ್ರಯ್ಯ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಆಮ್ ಆದ್ಮಿ ಪಕ್ಷ ಸೇರ್ಪಡೆ ಕಾರ್ಯಕ್ರಮ

ಮೈಸೂರು,ಫೆ.3(ಎಂಟಿವೈ)– ತಿ.ನರಸೀಪುರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಫೆ.5ರಂದು ಬೆಳಗ್ಗೆ 11 ಗಂಟೆಗೆ ನಡೆಯುವ ಆಮ್ ಆದ್ಮಿ ಪಕ್ಷದ ಸೇರ್ಪಡೆ ಕಾರ್ಯಕ್ರಮದಲ್ಲಿ ತಿ.ನರಸೀಪುರ ಹಾಗೂ ನಂಜನಗೂಡು ವಿಧಾನಸಭಾ ಕ್ಷೇತ್ರದ ಹಲವು ಮುಖಂಡರು ಆಮ್ ಆದ್ಮಿ ಪಕ್ಷ ಸೇರ್ಪಡೆಯಾಗುತ್ತಿದ್ದಾರೆ ಎಂದು ದಲಿತ ವಿದ್ಯಾರ್ಥಿ ಹೋರಾಟಗಾರ ಸೋಸಲೆ ಸಿದ್ದರಾಜು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 20 ವರ್ಷಗಳ ಕಾಲ ದಲಿತ ವಿದ್ಯಾರ್ಥಿ ಹೋರಾಟಗಾರನಾಗಿದ್ದ ನಾನು ಕರಾಟೆ ಕ್ಷೇತ್ರದಲ್ಲೂ ಗುರುತಿಸಿಕೊಂಡಿದ್ದೆ. ಈ ಹಿಂದೆ ಬಿಎಸ್ಪಿಯಲ್ಲಿದ್ದು, ಕೊಳ್ಳೇಗಾಲ ಶಾಸಕ ಎನ್.ಮಹೇಶ್ ನಮ್ಮ ನಾಯಕರು. ಅವರು ಬಿಜೆಪಿಗೆ ಸೇರ್ಪಡೆಗೊಂಡರು. ತಟಸ್ಥವಾಗಿದ್ದ ನಾನು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ತಿ.ನರಸೀಪುರ ಕ್ಷೇತ್ರದಿಂದ ಸ್ಪರ್ಧಿಸುವುದಕ್ಕಾಗಿ ಬೆಂಬಲಿಗರೊಂದಿಗೆ ಆಮ್ ಆದ್ಮಿ ಪಕ್ಷ ಸೇರುತ್ತಿದ್ದೇನೆ ಅಲ್ಲದೆ, ನಂಜನಗೂಡು ಕ್ಷೇತ್ರದ ಬಿಜೆಪಿ ಎಸ್ಸಿ ಮೋರ್ಚಾ ಕಾರ್ಯದರ್ಶಿಯಾಗಿದ್ದ ಡಾ.ತಿಮ್ಮಯ್ಯ, ಬೆಂಬಲಿಗರೊಂದಿಗೆ ಆಮ್ ಆದ್ಮಿ ಪಕ್ಷ ಸೇರುತ್ತಿದ್ದಾರೆ. ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಎಎಪಿ ರಾಜ್ಯ ನಾಯಕರಾದ ಪೃಥ್ವಿರೆಡ್ಡಿ, ಭಾಸ್ಕರ್‌ರಾವ್ ಮತ್ತು ಮುಖ್ಯಮಂತ್ರಿ ಚಂದ್ರು ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು.

ಕ್ಯಾಥೋಲಿಕ್ ಕ್ರಿಶ್ಚಿಯನ್ ಸಮುದಾಯಕ್ಕೆ ಕಳಂಕ ತರುವ ಯತ್ನ

ನಾಳೆ ಮೈಸೂರಲ್ಲಿ ಶಾಂತಿ ಮೆರವಣಿಗೆ



ಮೈಸೂರು,ಫೆ3(ಎಂಟಿವೈ)– ಮೈಸೂರಿನ ಕ್ಯಾಥೋಲಿಕ್ ಕ್ರಿಶ್ಚಿಯನ್ ಸಮುದಾಯದ ಮೇಲೆ ಕೆಲವರು ಇಲ್ಲಸಲ್ಲದ ಸುಳ್ಳು ಆರೋಪ ಮಾಡಿ ಕಳಂಕ ತರುವ ಪ್ರಯತ್ನ ಮಾಡುತ್ತಿರುವುದನ್ನು ಖಂಡಿಸಿ ಫೆ.5ರಂದು ಮಧ್ಯಾಹ್ನ 3ಗಂಟೆಗೆ ಮೈಸೂರಲ್ಲಿ ಶಾಂತಿ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಮೈಸೂರು ಧರ್ಮಕ್ಷೇತ್ರದ ಜನಧ್ವನಿ ಮ್ಯಾಥ್ಯೂ ಸುರೇಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಕೆಲವರು ಗೊಂದಲ ಸೃಷ್ಟಿಸುತ್ತಿದ್ದಾರೆ. ಕ್ಯಾಥೋಲಿಕ ಧರ್ಮಕ್ಷೇತ್ರದ ಮೇಲೆ ಕಳಂಕ ತರುತ್ತಿದ್ದಾರೆ. ಮೈಸೂರಲ್ಲೇ ಇರುವ ಕೆಲವು ಬಾಂಬೆ ಹಾಗೂ ರೋಮ್‌ನಲ್ಲಿನ ಮಾಧ್ಯಮಗಳಿಗೆ ಸುಳ್ಳು ಮಾಹಿತಿ ನೀಡುತ್ತಿದ್ದಾರೆ. ಸುಳ್ಳು ವರದಿಗಳಿಂದ ಸಮುದಾಯದ ಮೇಲೆ ತಪ್ಪು ಸಂದೇಶ ರವಾನೆಯಾಗುತ್ತಿದೆ. ಇದರಿಂದ ಸೌಹಾರ್ದತೆ ಮತ್ತು ನ್ಯಾಯಕ್ಕಾಗಿ ಸಮಾನ ಮನಸ್ಕರು ಸೇರಿ ಪ್ರಾರ್ಥನಾ ಮತ್ತು ಶಾಂತಿ ರ‍್ಯಾಲಿ ನಡೆಸುತ್ತಿದ್ದೇವೆ ಎಂದರು.

ಕ್ರೈಸ್ತ ಸಮುದಾಯಕ್ಕೆ ಸೇರಿದ ಕೆಲವರು ಕಳೆದ ಮೂರು ವರ್ಷದಿಂದ ಧರ್ಮ ಸಭೆ ಬಗ್ಗೆ ಸುಳ್ಳು ಆರೋಪ ಮಾಡಿಕೊಂಡೇ ಬರುತ್ತಿದ್ದಾರೆ. ಇದರಿಂದ ನಮ್ಮ ವಿಶ್ವಾಸಕ್ಕೆ ಧಕ್ಕೆಯಾಗುತ್ತಿದೆ. ಧಾರ್ಮಿಕ ಭಾವನೆಗೆ ಕುಂದುಂಟಾಗುತ್ತಿದೆ. ಈ ಹಿನ್ನೆಲೆಯಲ್ಲಿ ಫೆ5ರಂದು ಮಧ್ಯಾಹ್ನ 3ಕ್ಕೆ ಸಂತ ಫಿಲೋಮಿನಾ ಚರ್ಚ್ ಆವರಣದಿಂದ ಬನ್ನಿಮಂಟಪದಲ್ಲಿರುವ ಬಿಷಪ್ ಹೌಸ್‌ವರೆಗೂ ಶಾಂತಿ ಮೆರವಣಿಗೆ ನಡೆಸಿ, ಆಡಳಿತಾಧಿಕಾರಿಗಳಿಗೆ ಮನವಿ ಸಲ್ಲಿಸುವುದಾಗಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರೇಮಾನಂದ ಡಿಮೆಲ್ಲೋ, ಹೆಮಿಲಿ, ಜೇವಿಯರ್ ಸುನೀಲ್ ಇದ್ದರು.

ಕನ್ನಡ, ಹಿಂದಿ ಹಳೇ ಚಿತ್ರಗೀತೆಗಳ ಗಾಯನ



ಮೈಸೂರು,ಫೆ3(ಎಂಟಿವೈ)– ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಫೆ. 5 ರಂದು ಸಂಜೆ 6ಕ್ಕೆ ಹಳೆಯ ಕನ್ನಡ ಹಾಗೂ ಹಿಂದಿ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ವಿ. ಜಾರ್ಜ್ ಪ್ರಭಾಕರ್ ಆರ್ಕೆಸ್ಟ್ರಾ ಮತ್ತು ಗಜಲ್ ಪಾರ್ಟಿ ಸಂಸ್ಥೆಯ ಮುಖ್ಯಸ್ಥ ವಿ.ಜಾರ್ಜ್ ಪ್ರಭಾಕರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿ. ಜಾರ್ಜ್ ಪ್ರಭಾಕರ್ ಆರ್ಕೆಸ್ಟ್ರಾ ಮತ್ತು ಗಜಲ್ ಪಾರ್ಟಿ ಸಂಸ್ಥೆಯ 41ನೇ ವಾರ್ಷಿಕೋತ್ಸವದ ಅಂಗವಾಗಿ ಸಂಗೀತ ಸಂಜೆ ಆಯೋಜಿಸಲಾಗಿದೆ. 10 ಮಂದಿ ಗಾಯಕರು ಅಂದು ಸಂಜೆ 6 ರಿಂದ ರಾತ್ರಿ 9.30ರವರೆಗೆ ಕನ್ನಡ ಮತ್ತು ಹಿಂದಿ ಭಾಷೆಯ ಹಳೆಯ ಚಲನಚಿತ್ರಗಳ 30ಕ್ಕೂ ಹೆಚ್ಚು ಗೀತೆಗಳನ್ನು ಹಾಡಲಿದ್ದಾರೆ. ಕಾರ್ಯಕ್ರಮಕ್ಕೆ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ವಿಠಲ್‌ರಾವ್, ಗುರು, ಪ್ರಕಾಶ್, ಬಿ.ಕುಮಾರಸ್ವಾಮಿ ಇದ್ದರು.

ಎಸ್ಸಿ–ಎಸ್ಟಿ ಅಲೆಮಾರಿ ವಸತಿ ಅನುದಾನ ಅನ್ಯ ಉದ್ದೇಶಕ್ಕೆ ವರ್ಗಾವಣೆ

ಅಲೆಮಾರಿ, ಅರೆ ಅಲೆಮಾರಿ ಸಮುದಾಯದ ಮುಖಂಡರ ಆರೋಪ



ಮೈಸೂರು,ಫೆ.3(ಎಂಟಿವೈ)– ರಾಜ್ಯ ಸರ್ಕಾರ ಕಳೆದ ಎರಡು ವರ್ಷದ ಬಜೆಟ್‌ನಲ್ಲಿ ಎಸ್ಸಿ–ಎಸ್ಟಿ ಅಲೆಮಾರಿ, ಅರೆ ಅಲೆಮಾರಿ ವಿಮುಕ್ತ ಬುಡಕಟ್ಟು ಸಮುದಾಯಗಳ ವಸತಿ ಯೋಜನೆಗೆ ಬಿಡುಗಡೆ ಮಾಡಿದ್ದ 550 ಕೋಟಿ ರೂ. ಅನುದಾನವನ್ನು ಮುಂದುವರೆದ ವಸತಿ ಕಾಮಗಾರಿಗೆ ವರ್ಗಾಯಿಸುವ ಮೂಲಕ ಅಲೆಮಾರಿ ವಿಮುಕ್ತ ಬುಡಕಟ್ಟು ಸಮುದಾಯಕ್ಕೆ ಅನ್ಯಾಯವೆಸಗಿದೆ ಎಂದು ಎಸ್ಸಿ–ಎಸ್ಟಿ ಅಲೆಮಾರಿ ವಿಮುಕ್ತ ಬುಡಕಟ್ಟು ಮಹಾಸಭಾ ಜಿಲ್ಲಾಧ್ಯಕ್ಷ ಅಂಬರೀಷ್ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲೂ ಅಲೆಮಾರಿ, ಅರೆ ಅಲೆಮಾರಿ ಜನಾಂಗ ತೀರ ಸಂಕಷ್ಟದಲ್ಲಿ ಜೀವನ ನಡೆಸುವಂತಾಗಿದೆ. ರಾಜ್ಯ ಸರ್ಕಾರ ಎಸ್ಸಿ–ಎಸ್ಟಿ ಅಲೆಮಾರಿ, ಅರೆ ಅಲೆಮಾರಿ ವಿಮುಕ್ತ ಬುಡಕಟ್ಟು ಸಮುದಾಯಗಳ ವಸತಿ ಯೋಜನೆಗೆ 2021–22ನೇ ಸಾಲಿನ ಬಜೆಟ್‌ನಲ್ಲಿ 250 ಕೋಟಿ ರೂ. ಅನುದಾನ ಮೀಸಲಿಟ್ಟಿತ್ತು. 2022–23ನೇ ಸಾಲಿನ ಬಜೆಟ್‌ನಲ್ಲಿ 300 ಕೋಟಿ ರೂ. ಮೀಸಲಿಟ್ಟಿತ್ತು. ಆದರೆ, ಎರಡು ವರ್ಷದ ಬಜೆಟ್‌ನಲ್ಲಿ ಮೀಸಲಿಟ್ಟಿದ್ದ ಅನುದಾನವನ್ನು ಅರೆ ಅಲೆಮಾರಿಗಳ ವಸತಿ ಸೌಲಭ್ಯಕ್ಕಾಗಿ ಬಳಸದೆ, ಇದೀಗ ಮುಂದುವರೆದ ವಸತಿ ಕಾಮಗಾರಿಗೆ ವರ್ಗಾವಣೆ ಮಾಡಲಾಗಿದೆ. ಇದರಿಂದ ಅಲೆಮಾರಿ ಹಾಗೂ ಅರೆ ಅಲೆಮಾರಿಗಳ ಸ್ಥಿತಿ ಇನ್ನಷ್ಟು ಶೋಚನೀಯವಾಗಲು ಸರ್ಕಾರವೇ ಸಂಚು ನಡೆಸಿದಂತಾಗಿದೆ ಎಂದು ಕಿಡಿಕಾರಿದರು.

ಸರ್ಕಾರ ಕೂಡಲೇ ಎಚ್ಚೆತ್ತುಕೊಳ್ಳಬೇಕು. ಅಲೆಮಾರಿಗಳ ವಸತಿ ಸೌಲಭ್ಯಕ್ಕಾಗಿ ಮೀಸಲಿಟ್ಟಿದ್ದ ಅನುದಾನವನ್ನು ನಮ್ಮ ಸಮುದಾಯಕ್ಕೆ ವಸತಿ ಸೌಲಭ್ಯ ಕಲ್ಪಿಸುವುದಕ್ಕಾಗಿಯೇ ವಿನಿಯೋಗಿಸಬೇಕು. ಅಲೆಮಾರಿಗಳು ಗೌರವದಿಂದ ಜೀವನ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು. ವರ್ಗಾವಣೆ ಮಾಡಿರುವ ಅನುದಾನ ಮತ್ತೆ ಹಿಂಪಡೆದು ಮೂಲ ಉದ್ದೇಶಕ್ಕೆ ಬಳಸಿಕೊಳ್ಳಬೇಕು. ಇಲ್ಲದಿದ್ದರೆ ಸರ್ಕಾರದ ವಿರುದ್ಧ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಅಲೆಮಾರಿ ಮಹಾಸಭಾದ ಸದಸ್ಯ ಮೋಹನ ಕಾಯಕ ಮಾತನಾಡಿ, ರಾಜ್ಯದಲ್ಲಿ 25 ಲಕ್ಷ ಮಂದಿ ಅಲೆಮಾರಿ ಹಾಗೂ ಅರೆ ಅಲೆಮಾರಿ ಜನರಿದ್ದಾರೆ. ಪರಿಶಿಷ್ಟ ಜಾತಿ ಪಟ್ಟಿಗೆ ಸೇರುವ ಅಲೆಮಾರಿ, ವಿಮುಕ್ತ ಅಲೆಮಾರಿ, ಹಂದಿಜೋಗಿ. ಸಿಳ್ಳೆಕ್ಯಾತ, ಬುಡ್ಗಜಂಗಮ, ಸುಡುಗಾಡು ಸಿದ್ದ, ಚನ್ನದಾಸ, ದೊಂಬರು, ಘಂಟಿಚೋರ್, ಕೊರಮ, ಕೊರಚ, ಮಾಂಗ್ ಗಾರುಡಿ ಸೇರಿದಂತೆ 51 ಜಾತಿ ಸೇರುತ್ತದೆ. ಎಸ್ಟಿಯಲ್ಲಿ ಅಲೆಮಾರಿ ಬುಡಕಟ್ಟು, ಮೇದ, ಹಕ್ಕಿಪಿಕ್ಕಿ, ಇರುಳಿಗ, ರಾಜಗೊಂಡ ಸೇರಿದಂತೆ 23 ಜನಾಂಗ ಸೇರುತ್ತದೆ. ಈ 74 ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದ ಜನರು ಸ್ವಂತ ಮನೆಯಿಲ್ಲದೆ, ರಸ್ತೆಗಳ ಬದಿ, ಖಾಲಿ ಜಾಗದಲ್ಲಿ ಟೆಂಟ್, ಗುಡಿಸಲು ಹಾಕಿಕೊಂಡು ಜೀವನ ನಡೆಸುವ ಅನಿವಾರ್ಯ ಸ್ಥಿತಿ ಎದುರಾಗಿದೆ. ಸರ್ಕಾರಗಳು ಇಂದಿಗೂ ಅಲೆಮಾರಿಗಳ ಜೀವನ ಸುಧಾರಿಸಲು ಯಾವುದೇ ಕ್ರಮ ಕೈಗೊಂಡಿಲ್ಲ. ಬಜೆಟ್‌ನಲ್ಲಿ ಮೀಸಲಿಟ್ಟ ಅನುದಾನವನ್ನು ಬೇರೆ ಉದ್ದೇಶಕ್ಕಾಗಿ ವರ್ಗಾವಣೆ ಮಾಡಿರುವುದು ಖಂಡನೀಯ. ಕೂಡಲೇ ಸರ್ಕಾರ ವರ್ಗಾವಣೆ ಮಾಡಿರುವ ಅನುದಾನವನ್ನು ಮೂಲ ಉದ್ದೇಶಕ್ಕಾಗಿಯೇ ವಿನಿಯೋಗಿಸಲು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ, ಹಂತ ಹಂತವಾಗಿ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿ, ತಕ್ಕ ಪಾಠ ಕಲಿಸುವುದಕ್ಕೂ ಸಿದ್ಧರಿದ್ದೇವೆ ಎಂದು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಎಸ್ಸಿ–ಎಸ್ಟಿ ಅಲೆಮಾರಿ ವಿಮುಕ್ತ ಬುಡಕಟ್ಟು ಮಹಾಸಭಾ ಪದಾಧಿಕಾರಿಗಳಾದ ಎನ್.ರವಿಕುಮಾರ್, ಮಂಜುನಾಥ್, ಪಿ. ನಾಗರಾಜ್, ಎಂ.ಮುತ್ತುರಾಜ್, ಬಸವಣ್ಣ ಇದ್ದರು.

ಮೈಸೂರು ಮಿತ್ರ

ಯುವತಿಗೆ ಪ್ರೀತಿ ದೋಖಾ; ರೇಪ್, ಹತ್ಯೆ ಯತ್ನ

ಪ್ರತಿಷ್ಠಿತ ಬೇಕರಿ ಮಾಲೀಕನ ಪುತ್ರನ ಬಂಧನ

ಮೈಸೂರು, ಫೆ 3– ಪದವೀಧರ ಯುವತಿಯನ್ನು ಮದುವೆಯಾಗುವುದಾಗಿ ನಂಬಿಸಿ, ಪ್ರೀತಿಯ ನಾಟಕವಾಡಿ, ಹತ್ಯೆಗೆ ಪ್ರಯತ್ನಿಸಿದ ಆರೋಪದ ಮೇಲೆ ಈಕೆಯ ಸಹಪಾಠಿಯೂ ಆಗಿದ್ದ ಮೈಸೂರಿನ ಕುವೆಂಪುನಗರದ ಪ್ರತಿಷ್ಠಿತ ಬೇಕರಿ ಮಾಲೀಕನ ಮಗನನ್ನು ಬಂಧಿಸಲಾಗಿದ್ದು, ಆತನ ಕುಟುಂಬದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದೆ.

ಯುವತಿಯನ್ನು ವಂಚಿಸಿದ ಬೇಕರಿ ಮಾಲೀಕನ ಮಗ ಮನೋಜ್ ಅಲಿಯಾಸ್ ಹೃತಿಕ್(24), ಆತನ ತಂದೆ ಎಂ. ನಾರಾಯಣ್(48), ತಾಯಿ ಶೈಲಜಾ(45), ಸಹೋದರಿ ಎನ್. ಅರ್ಪಿತಾ(26), ಬೇಕರಿಯ ಮಾನವ ಸಂಪನ್ಮೂಲ ಅಧಿಕಾರಿ ಶೋಭಾ(36) ಆರೋಪಕ್ಕೆ ಗುರಿಯಾಗಿರುವವರು.

ವಿವರ: ಬೇಕರಿ ಮಾಲೀಕನ ಮಗ ಮನೋಜ್ ಅಲಿಯಾಸ್ ಹೃತಿಕ್, ಸಂತ್ರಸ್ತ ಯುವತಿಯ ಸಹಪಾಠಿಯಾಗಿದ್ದು, ಮಹಾರಾಜ ಕಾಲೇಜಿನಲ್ಲಿ ಬಿಎ ವ್ಯಾಸಂಗ ಮಾಡುತ್ತಿದ್ದಾಗ ಆಕೆಗೆ ಪರಿಚಯವಾಗಿ, ಪ್ರೀತಿಸುವಂತೆ ಗೋಗರೆದು, ಬೆದರಿಸಿ ಕೊನೆಗೆ ಮದುವೆಯಾಗುವುದಾಗಿ ನಂಬಿಸಿ ಯುವತಿ ಪ್ರೀತಿಯನ್ನು ಗಳಿಸಿಕೊಂಡಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಕಳೆದ ನಾಲ್ಕೂವರೆ ವರ್ಷಗಳಿಂದ ಪ್ರೀತಿಯ ನಾಟಕವಾಡುತ್ತಿದ್ದ ಈತ ಜೆ.ಪಿ.ನಗರದಲ್ಲಿರುವ ಅವರ ಮನೆಯಲ್ಲಿ ಯಾರೂ ಇಲ್ಲದ ವೇಳೆ ಯುವತಿಯನ್ನು ಕರೆದೊಯ್ದು ಬಲವಂತವಾಗಿ ದೈಹಿಕ ಸಂಪರ್ಕ ಹೊಂದಿದ್ದಲ್ಲದೇ, ಬೋಗಾದಿಯ ಓವೈಓ ರೂಂಗೂ ಕೂಡ ಕರೆದೊಯ್ದು ಅಲ್ಲಿಯೂ ಆಕೆಯ ವಿರೋಧದ ನಡುವೆಯೂ ದೈಹಿಕ ಸಂಪರ್ಕ ಹೊಂದಿದ್ದಾನೆ ಎಂದು ಆರೋಪಿಸಲಾಗಿದೆ.

ಈ ವಿಚಾರವನ್ನು ಆತನ ತಂದೆ ಎಂ.ಎಸ್. ನಾರಾಯಣ್, ತಾಯಿ ಶೈಲಜಾ ಮತ್ತು ಅಕ್ಕ ಅರ್ಪಿತಾ ಅವರಿಗೆ ತಿಳಿಸಿದಾಗ, ಯುವತಿಯನ್ನು ಬಾಯಿಗೆ ಬಂದಂತೆ ಬೈದ ಅವರುಗಳು, ನೀವು ಬಡವರು, ನಿಮ್ಮ ಕುಟುಂಬಕ್ಕೂ ನಮ್ಮ ಕುಟುಂಬಕ್ಕೂ ಅಂತಸ್ತಿನ ವ್ಯತ್ಯಾಸವಿದೆ ಎಂದು ಹೇಳಿ ಮದುವೆಗೆ ನಿರಾಕರಿಸಿದ್ದಲ್ಲದೇ, ಸ್ವಲ್ಪ ಹಣ ಕೊಡುವುದಾಗಿ ಆಮಿಷವೊಡ್ಡಿದ್ದಾರೆ. ಅದಕ್ಕೆ ಯುವತಿ ಒಪ್ಪದಿದ್ದಾಗ ಅವರ ಬೇಕರಿಯಲ್ಲಿ ಮಾನವ ಸಂಪನ್ಮೂಲ ಅಧಿಕಾರಿಯಾಗಿರುವ ಶೋಭಾ ಎಂಬಾಕೆಯನ್ನು ಕರೆಸಿ ನಿಂದಿಸುವಂತೆ ಮಾಡಿದ್ದಾರೆ. ಆ ವೇಳೆ ಅವರುಗಳು ನಾವು ಹೇಳಿದಂತೆ ಕೇಳದಿದ್ದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ ಎಂದು ಯುವತಿ ನೀಡಿದ ದೂರಿನಲ್ಲಿ ತಿಳಿಸಿದ್ದಾಳೆ.

ಜನವರಿ 23ರಂದು ರಾತ್ರಿ ಯುವತಿ ವಾಸವಿರುವ ಚಾಮರಾಜ ಮೊಹಲ್ಲಾ ಮನೆ ಮುಂದೆ ತನ್ನ ಕಾರನ್ನು (ಕೆಎ 09–ಎಂಹೆಚ್ 1232) ನಿಲ್ಲಿಸಿಕೊಂಡ ಮನೋಜ್ ಅಲಿಯಾಸ್ ಹೃತಿಕ್ ಯುವತಿಯನ್ನು ಕರೆಸಿಕೊಂಡು ಜಗಳ ಮಾಡಿದ್ದಲ್ಲದೇ, ನೀನು ಜೀವಂತ ಇದ್ದರೆ ತಾನೇ ನಮ್ಮ ಕುಟುಂಬದವರ ವಿರುದ್ಧ ಸಾಕ್ಷಿ ಹೇಳುತ್ತೀಯಾ, ನಿನ್ನನ್ನೇ ಮುಗಿಸಿಬಿಟ್ಟರೆ ಸಾಕ್ಷಿ ಇರುವುದಿಲ್ಲ ಎಂದು ಹೇಳಿ ಯಾವುದೋ 20ರಿಂದ 30 ಮಾತ್ರೆಗಳನ್ನು ಆಕೆಗೆ ನುಂಗಿಸಿ ನಂತರ ಆತನೇ ಯುವತಿಯನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾನೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಯುವತಿ ನೀಡಿರುವ ದೂರಿನನ್ವಯ ಭಾರತೀಯ ದಂಡ ಸಂಹಿತೆ 376, 307, 504, 506, 34ರಡಿ ಪ್ರಕರಣ ದಾಖಲಿಸಿ ಕೊಂಡಿರುವ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮೂರು ದಿನಗಳ 'ಕಾಲೇಜ್ ಇಂಗ್ಲಿಷ್ ಥಿಯೇಟರ್ ಫೆಸ್ಟಿವಲ್'ಗೆ ಚಾಲನೆ





'ಕಾಲೇಜ್ ಇಂಗ್ಲಿಷ್ ಥಿಯೇಟರ್ ಫೆಸ್ಟಿವಲ್'ಗೆ ಹಿರಿಯ ರಂಗಭೂಮಿ ಕಲಾವಿದೆ ರಾಮೇಶ್ವರಿ ವರ್ಮಾ ಚಾಲನೆ ನೀಡಿದರು. (ಎಡದಿಂದ) ವಿದ್ಯಾರ್ಥಿನಿ ಎಸ್.ಪಿ.ಮೇಕಲಾ ಶರ್ಮಾ, ಸಂಚಾಲಕಿ ಸೀಮಂತಿನಿ ಬಿ. ಶರ್ಮಾ, ಇಂಗ್ಲಿಷ್ ಥಿಯೇಟರ್ ಫೋರಂನ ಸಂಸ್ಥಾಪಕ ಸದಸ್ಯ ಡಾ ಅನಿಲ್ ಕುಮಾರ್, ನಿವೃತ್ತ ಐಎಎಸ್ ಅಧಿಕಾರಿ ಎ.ಕೆ.ಮೊನ್ನಪ್ಪ ಉಪಸ್ಥಿತರಿದ್ದರು. ಮತ್ತೊಂದು ಚಿತ್ರದಲ್ಲಿ 'ಡಾಕ್ಟರ್ ಫೌಸ್ಟಸ್' ನಾಟಕದ ದೃಶ್ಯ ಕಾಣಬಹುದು

ಮೈಸೂರು, ಫೆ.3(ಎಂಕೆ)– ಮೈಸೂರಿನ ರಾಮಕೃಷ್ಣನಗರದಲ್ಲಿರುವ ರಮಾ ಗೋವಿಂದ ರಂಗಮಂದಿರದಲ್ಲಿ ಮೈಸೂರ್ ಇಂಗ್ಲಿಷ್ ಥಿಯೇಟರ್ ಫೋರಂ (ಎಂಇಟಿಎಫ್)ವತಿಯಿಂದ ಮೂರು ದಿನಗಳ ಕಾಲ ಆಯೋಜಿಸಿರುವ ಮೊಟ್ಟ ಮೊದಲ 'ಕಾಲೇಜ್ ಇಂಗ್ಲಿಷ್ ಥಿಯೇಟರ್ ಫೆಸ್ಟಿವಲ್'ಗೆ ಶುಕ್ರವಾರ ಚಾಲನೆ ದೊರೆಯಿತು.

ಹಿರಿಯ ರಂಗಭೂಮಿ ಕಲಾವಿದೆ ರಾಮೇಶ್ವರಿ ವರ್ಮಾ, ಗಿಡಕ್ಕೆ ನೀರೆರೆಯುವ ಮೂಲಕ ಫೆಸ್ಟಿವಲ್‌ಗೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಕನ್ನಡದಷ್ಟೇ ಇಂಗ್ಲಿಷ್ ರಂಗಭೂಮಿಯೂ ಬಹಳ ಮುಖ್ಯ. ವಿಶ್ವಕ್ಕೆ ನಮ್ಮ ಆಲೋಚನೆ ಹಾಗೂ ನಮ್ಮಲ್ಲಿರುವ ಕೌಶಲ್ಯತೆಯನ್ನು ತಿಳಿಸಬೇಕಾದರೆ ಇಂಗ್ಲಿಷ್ ಭಾಷೆ ಅತ್ಯಂತ ಮುಖ್ಯವಾಗಿದೆ. ಕಳೆದ 20 ವರ್ಷದಲ್ಲಿ ಇಂಗ್ಲಿಷ್ ವಿಶ್ವ ಮಟ್ಟದಲ್ಲಿ ಗುರುತಿಸಿಕೊಂಡಿರುವ ಭಾಷೆಯಾಗಿದ್ದು, ಸಂವಹನ ದೃಷ್ಟಿಯಿಂದ ಇಂಗ್ಲಿಷ್ ನಮಗೆ ಅತ್ಯಂತ ಅವಶ್ಯಕವಾಗಿದೆ ಎಂದರು.

ಬೆಂಗಳೂರು, ಬಾಂಬೆಯಲ್ಲಿ ಇಂಗ್ಲಿಷ್ ಥಿಯೇಟರ್ ಇವೆ. ಈಗ ಮೈಸೂರಿನಲ್ಲಿ ಪ್ರಥಮ ಬಾರಿಗೆ ಇಂಗ್ಲಿಷ್ ಥಿಯೇಟರ್ ಫೆಸ್ಟಿವಲ್ ಆಯೋಜನೆ ಮಾಡಿರುವುದು ಶ್ಲಾಘನೀಯ. ಅಲ್ಲದೇ ರಂಗಭೂಮಿ ನಮ್ಮ ಮಾತು ನಡವಳಿಕೆ, ಸೇರಿದಂತೆ ಎಲ್ಲ ಬಗೆಯ ಕೌಶಲ್ಯತೆಗಳನ್ನು ಕಲಿಸುತ್ತದೆ. ಅದರಲ್ಲೂ ಮುಖ್ಯವಾಗಿ ರಂಗಭೂಮಿಯಲ್ಲಿ ಅತ್ಯಂತ ಒಳ್ಳೆಯ ಸ್ನೇಹಿತರು ಸಿಗುತ್ತಾರೆ. ಅವರೊಂದಿಗಿನ ಸ್ನೇಹ ದೀರ್ಘ ಕಾಲದವರೆಗೂ ಉಳಿಯುತ್ತದೆ ಎಂದು ತಿಳಿಸಿದರು.

> **ಡ್ರಾಮಾ ಕ್ಲಬ್ ಸ್ಥಾಪನೆಯಾಗಬೇಕು...**
> ಶಾಲಾ–ಕಾಲೇಜುಗಳಲ್ಲಿ ಡ್ರಾಮಾ ಕ್ಲಬ್ ಸ್ಥಾಪನೆಯಾಗಬೇಕು. ಡ್ರಾಮಾ ಕ್ಲಬ್ ಮೂಲಕ ವಿದ್ಯಾರ್ಥಿಗಳಿಗೆ ಅಭಿನಯ, ನೃತ್ಯ, ಸಂಗೀತ ಮುಂತಾದ ಕಲೆಗಳನ್ನು ಕಲಿಸುವ ಕೆಲಸವಾಗಬೇಕು. ಇದರಿಂದ ವಿದ್ಯಾರ್ಥಿಗಳಲ್ಲಿ ಕೌಶಲ್ಯತೆ ಹೆಚ್ಚಾಗುತ್ತದೆ.
> – ಎ.ಕೆ.ಮೊನ್ನಪ್ಪ, ನಿವೃತ್ತ ಐಎಎಸ್ ಅಧಿಕಾರಿ

ಇಂಗ್ಲಿಷ್ ಥಿಯೇಟರ್ ಫೆಸ್ಟಿವಲ್‌ನಿಂದ ಇಂಗ್ಲಿಷ್ ಭಾಷೆ ಕಲಿಯುವುದು ಸುಲಭ. ಅಲ್ಲದೇ ಕಲಿಯುವ ಆತ್ಮವಿಶ್ವಾಸವನ್ನು ರಂಗಭೂಮಿ ನೀಡುತ್ತದೆ. ಶಾಲಾ–ಕಾಲೇಜು ಮಕ್ಕಳಲ್ಲಿ ಏಕಾಗ್ರತೆ ಜೊತೆಗೆ ಅಸಾಧಾರಣ ಬುದ್ಧಿಶಕ್ತಿ ಹೆಚ್ಚಳಕ್ಕೆ ರಂಗಭೂಮಿ ಸಹಕಾರಿಯಾಗಲಿದೆ. ವಿದ್ಯಾರ್ಥಿಗಳಲ್ಲಿರುವ ಭಯ, ಆತಂಕಗಳನ್ನು ದೂರಮಾಡುವುದಲ್ಲದೆ ರಂಗಭೂಮಿ ಕಲೆ, ಸಾಹಿತ್ಯ, ಸಂಸ್ಕೃತಿ ಹಾಗೂ ಇತಿಹಾಸದ ಮೇಲು ಬೆಳಕು ಚೆಲ್ಲುತ್ತದೆ ಎಂದು ಹೇಳಿದರು.

ನಾಟಕ ಪ್ರದರ್ಶನ: ಬಳಿಕ ನೈಟ್ ಗ್ಲೋರಿ ತಂಡದಿಂದ 'ಡಾಕ್ಟರ್ ಫೌಸ್ಟಸ್' ನಾಟಕ ಪ್ರದರ್ಶನಗೊಂಡಿತು. ಜೆ. ವಿಲಿಯಂ ಜೋಸೆಫ್ ಅವರ ನಿರ್ದೇಶನದಲ್ಲಿ ಮೂಡಿ ಬಂದ ನಾಟಕದಲ್ಲಿ ಅಫ್ನಾನ್ ಪಾಷಾ, ಸ್ಮೃತಿ, ಅವಿನ್, ಕೀರ್ತನಾ, ಆಮಿನಾ, ಅಭಿಯಾ, ಎರುಮ್, ಪ್ರಾವ್ ಮತ್ತು ದಕ್ಷ್ ಅಭಿನಯ ಅಚ್ಚುಕಟ್ಟಾಗಿತ್ತು. ಇಂಗ್ಲಿಷ್ ಥಿಯೇಟರ್ ಫೋರಂನ ಸಂಸ್ಥಾಪಕ ಸದಸ್ಯ ಡಾ.ವಿ.ಆರ್. ಅನಿಲ್‌ಕುಮಾರ್, ಸಂಚಾಲಕಿ ಸೀಮಂತಿನಿ ಬಿ.ಶರ್ಮಾ ಮತ್ತಿತರರು ಉಪಸ್ಥಿತರಿದ್ದರು.

ವಿಶ್ವದ ಟಾಪ್ 20 ಶ್ರೀಮಂತರ ಪಟ್ಟಿಯಿಂದ ಅದಾನಿ ಹೊರಕ್ಕೆ

ನವದೆಹಲಿ, ಫೆ.3– ಅಮೆರಿಕ ಮೂಲದ ಹೂಡಿಕೆ ಸಂಶೋಧನಾ ಸಂಸ್ಥೆ ಹಿಂಡನ್ ಬರ್ಗ್ ರಿಸರ್ಚ್ ವರದಿಯ ಬಳಿಕ ಅದಾನಿ ಕಂಪನಿಯ ಷೇರುಗಳ ಬೆಲೆಯಲ್ಲಿ ಭಾರಿ ಕುಸಿತವಾಗಿದ್ದು, ಉದ್ಯಮಿ ಗೌತಮ್ ಅದಾನಿ ಅವರು ಶುಕ್ರವಾರ ವಿಶ್ವದ ಟಾಪ್ 20 ಶ್ರೀಮಂತರ ಪಟ್ಟಿಯಿಂದ ಹೊರಬಿದ್ದಿದ್ದಾರೆ.

ಮೈಸೂರು ತಿಲಕನಗರದ ಅಂಧ ಮಕ್ಕಳ ಸರ್ಕಾರಿ ಶಾಲೆ ಆವರಣದಲ್ಲಿ

ನೀರಿನ ಟ್ಯಾಂಕ್ ನಿರ್ಮಾಣ ವಿರೋಧಿಸಿ ವಿಶೇಷಚೇತರ ಪ್ರತಿಭಟನೆ

ಮೈಸೂರು,ಫೆ.3(ಪಿಎಂ)– ತಿಲಕನಗರದ ಅಂಧ ಮಕ್ಕಳ ಸರ್ಕಾರಿ ಶಾಲೆ ಆವರಣದಲ್ಲಿ ಉದ್ದೇಶಿತ 10 ಲಕ್ಷ ಲೀಟರ್ ಸಾಮರ್ಥ್ಯದ ಬೃಹತ್ ನೀರಿನ ಟ್ಯಾಂಕ್ ನಿರ್ಮಾಣ ಕಾಮಗಾರಿ ಕೈಬಿಡಬೇಕೆಂದು ಒತ್ತಾಯಿಸಿ ಕರ್ನಾಟಕ ಅಂಧರ ಸಂಘ ಮತ್ತು ಕರ್ನಾಟಕ ಕಿವುಡರ ಸಂಘದ ಜಂಟಿ ಆಶ್ರಯದಲ್ಲಿ ಶುಕ್ರವಾರ ದಿಢೀರ್ ಪ್ರತಿಭಟನೆ ನಡೆಸಲಾಯಿತು.

ಇಲ್ಲಿನ ಪುಲಕೇಶಿ ರಸ್ತೆಯ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿ ಕಚೇರಿ ಇರುವ ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರದ ಎದುರು ಜಮಾಯಿಸಿದ ಪ್ರತಿಭಟನಾಕಾರರು, ವಿಶೇಷಚೇತರ ಶೈಕ್ಷಣಿಕ ಶ್ರೇಯೋಭಿವೃದ್ಧಿಗೆ ಮೀಸಲಾಗಿರುವ ಆವರಣದಲ್ಲಿ ಈ ರೀತಿ ಸಾರ್ವಜನಿಕ ಉದ್ದೇಶದ ನೀರಿನ ಟ್ಯಾಂಕ್ ನಿರ್ಮಾಣ ಮಾಡಲು ಮುಂದಾಗಿರುವುದು ಕಾನೂನು ಬಾಹಿರ ಎಂದು ಆರೋಪಿಸಿದರು.

ಉದ್ದೇಶಿತ ಟ್ಯಾಂಕ್ ನಿರ್ಮಿಸಲು ಈಗಾಗಲೇ ಕಾಂಪೌಂಡ್ ಒಡೆದಿದ್ದು, ಹಲವು ಮರಗಳನ್ನು ಕಡಿಯಲಾಗಿದೆ ಜೊತೆಗೆ ಇಲ್ಲಿ ಶಿಥಿಲಗೊಂಡಿದ್ದ ಹಳೇ ಕ್ವಾರ್ಟಸ್‌ನ ಕಟ್ಟಡಗಳನ್ನು ನೆಲಸಮಗೊಳಿಸಲಾಗಿದೆ ಎಂದು ದೂರಿದರು.



'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಕರ್ನಾಟಕ ಅಂಧರ ಸಂಘದ ನಿರ್ದೇಶಕ ಮಹದೇವು, 1901ರಲ್ಲಿ ಅಂದಿನ ಮೈಸೂರು ಸಂಸ್ಥಾನದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಅಂಧರು ಮತ್ತು ಶ್ರವಣದೋಷ ಉಳ್ಳವರ ಶಿಕ್ಷಣಕ್ಕಾಗಿ 16 ಎಕರೆ ಭೂಮಿ ಮೀಸಲಿರಿಸಿದ ಜಾಗವೇ ಇಂದಿನ ಅಂಧ ಮಕ್ಕಳ ಸರ್ಕಾರಿ ಶಾಲೆ ಆವರಣ. ಅಂದು ಶ್ರೀನಿವಾಸ್ ಎಂಬುವವರು ತಮ್ಮ ಮನೆಯಲ್ಲಿ ವಿಶೇಷಚೇತನರಿಗೆ ಶಿಕ್ಷಣ ನೀಡುತ್ತಿದ್ದನ್ನು ಗಮನಿಸಿದ ನಾಲ್ವಡಿಯವರು, ಸದರಿ 16 ಎಕರೆ ಭೂಮಿಯನ್ನು ಶ್ರೀನಿವಾಸ್ ಅವರಿಗೆ ನೀಡಿದರು. ವಿಶೇಷ ಚೇತನರ ಶೈಕ್ಷಣಿಕ ಚಟುವಟಿಕೆಗಳಿಗೆ ಸೀಮಿತವಾಗಿ ಬಳಸಬೇಕೆಂಬ ಷರತ್ತಿನಡಿ ಮಹಾರಾಜರು ಈ ಭೂಮಿ ನೀಡಿದ್ದರು ಎಂದು ತಿಳಿಸಿದರು.

ಸ್ವಾತಂತ್ರ್ಯ ನಂತರ ಸದರಿ ಆಸ್ತಿಯು ಸಮಾಜ ಕಲ್ಯಾಣ ಇಲಾಖೆಗೆ ಅಧೀನಕ್ಕೆ ಒಳಪಟ್ಟಿತು. 1990ರ ನಂತರ ಸೃಜಿಸಲಾದ ಅಂಗವಿಕಲರ ಕಲ್ಯಾಣ ಇಲಾಖೆ ಅಧೀನಕ್ಕೆ ಸದರಿ ಆಸ್ತಿ ಒಳಪಟ್ಟಿದೆ. ಅಂಗವಿಕಲರ ಶೈಕ್ಷಣಿಕ ಶ್ರೇಯೋಭಿವೃದ್ಧಿಗೆ ಈ ಜಾಗ ಮೀಸಲಿಡಲಾಗಿದೆ. ಹಾಗಾಗಿ ಇಲ್ಲಿ ಸಾರ್ವಜನಿಕ ನೀರಿನ ಟ್ಯಾಂಕ್ ನಿರ್ಮಿಸಲು ಅವಕಾಶವಿಲ್ಲ. ಬೇರೆ ಜಾಗದಲ್ಲಿ ಕಟ್ಟಿಕೊಳ್ಳಲು ನಮ್ಮದೇನು ತಕರಾರು ಇಲ್ಲ ಎಂದು ಹೇಳಿದರು.

> **ಇಂದು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ಮುಂದುವರಿಕೆ**
> ಬೆಳಗ್ಗೆಯಿಂದ ಸಂಜೆವರೆಗೆ ಪ್ರತಿಭಟನೆ ನಡೆಸಿದ್ದೇವೆ. ಉಪವಿಭಾಗಾಧಿಕಾರಿಗಳು ಸ್ಥಳಕ್ಕೆ ಬಂದು ನಮ್ಮ ಅಹವಾಲು ಆಲಿಸಿದ್ದು, ಜಿಲ್ಲಾಧಿಕಾರಿಗಳ ಗಮನಕ್ಕೆ ತರುವುದಾಗಿ ಹೇಳಿದ್ದಾರೆ. ನಾಳೆ (ಫೆ.4) ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ಮುಂದುವರೆಸುತ್ತೇವೆ. ಅದಕ್ಕೂ ಜಗ್ಗಲಿಲ್ಲವೆಂದರೆ ಬೆಂಗಳೂರಲ್ಲಿ ಮುಖ್ಯಮಂತ್ರಿ ನಿವಾಸದ ಎದುರು ಪ್ರತಿಭಟನೆ ಮಾಡುತ್ತೇವೆ.
> -ಮಹದೇವು, ಕರ್ನಾಟಕ ಅಂಧರ ಸಂಘದ ನಿರ್ದೇಶಕ

ಕರ್ನಾಟಕ ಅಂಧರ ಸಂಘದ ಕಾರ್ಯದರ್ಶಿ ಶ್ರೀನಿವಾಸ್, ಪದಾಧಿಕಾರಿಗಳಾದ ಬಸಪ್ಪಣ್ಣ ಶಿವಲಿಂಗಯ್ಯ, ಯೋಗೇಂದ್ರಸ್ವಾಮಿ, ಕರ್ನಾಟಕ ಕಿವುಡರ ಸಂಘದ ಶ್ರೀಧರ್ ಮತ್ತು ಪದಾಧಿಕಾರಿಗಳು, ಮಾನವ ಹಕ್ಕುಗಳ ಹೋರಾಟಗಾರ ಪ್ರಸನ್ನ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೆ.ಆರ್.ಕ್ಷೇತ್ರದ ಫಲಾನುಭವಿಗಳಿಗೆ 10 ದಿನ ನೇತ್ರ ತಪಾಸಣಾ, ಶಸ್ತ್ರ ಚಿಕಿತ್ಸಾ ಶಿಬಿರ



ಮೈಸೂರು, ಫೆ3(ಎಂಟಿವೈ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿನ ಎಸ್‌ಎಂಟಿ ಆಸ್ಪತ್ರೆಯಲ್ಲಿ ಆಯೋಜಿಸಲಾಗಿರುವ 10 ದಿನಗಳ ನೇತ್ರ ತಪಾಸಣಾ ಹಾಗೂ ಕಣ್ಣಿನ ಶಸ್ತ್ರಚಿಕಿತ್ಸಾ ಶಿಬಿರಕ್ಕೆ ಶಾಸಕ ಎಸ್.ಎ.ರಾಮದಾಸ್ ಚಾಲನೆ ನೀಡಿದರು.

ಕೆ.ಆರ್.ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಾರ್ವಜನಿಕರಿಗಾಗಿ ಆಯೋಜಿಸಲಾಗಿರುವ ಈ ಕಣ್ಣಿನ ಉಚಿತ ಶಸ್ತ್ರಚಿಕಿತ್ಸಾ ಶಿಬಿರದಲ್ಲಿ ದಿನಕ್ಕೆ 30 ಮಂದಿಯಂತೆ 300 ಮಂದಿಯ ನೇತ್ರ ಶಸ್ತ್ರಚಿಕಿತ್ಸೆಗೆ ಉದ್ದೇಶಿಸಲಾಗಿದ್ದು, ಮೊದಲ ದಿನ 30 ಶಸ್ತ್ರಚಿಕಿತ್ಸೆ ನಡೆಸಲಾಗಿದೆ.

ಶಿಬಿರಕ್ಕೆ ಚಾಲನೆ ನೀಡಿದ ಬಳಿಕ ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಪ್ರಧಾನ ಮಂತ್ರಿ ನರೇಂದ್ರ ಮೋದಿ ದೇಶದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಕೃಷಿ ಕ್ಷೇತ್ರಕ್ಕೆ ಮೊದಲ ಆದ್ಯತೆ ನೀಡಿದ್ದಾರೆ. ಜನರಿಗೆ ಮೂಲ ಸೌಲಭ್ಯ ಕಲ್ಪಿಸುವುದರೊಂದಿಗೆ ಆರೋಗ್ಯ ಸೇವೆ ಒದಗಿಸಲು ಹೆಚ್ಚಿನ ಒತ್ತು ನೀಡುತ್ತಿದ್ದಾರೆ. ರಾಜ್ಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ 'ನೇತ್ರಜ್ಯೋತಿ' ಕಾರ್ಯಕ್ರಮ ಜಾರಿಗೊಳಿಸಿದ್ದಾರೆ. ಆ ಯೋಜನೆ ಯಶಸ್ವಿ ಅನುಷ್ಠಾನಗೊಳಿಸಲು ಕೆ.ಆರ್.ಕ್ಷೇತ್ರದಲ್ಲಿ ಶಿಬಿರ ಆಯೋಜಿಸಲಾಗಿದೆ ಎಂದರು.

ಕೆ.ಆರ್.ಕ್ಷೇತ್ರದಲ್ಲಿ ನಿರಂತರವಾಗಿ ಸರ್ಕಾರಿ ಸವಲತ್ತುಗಳನ್ನು ವಿತರಿಸಲು ಅದಾಲತ್ ನಡೆಸಲಾಗುತ್ತಿದೆ. ಈ ಅದಾಲತ್‌ನಲ್ಲಿ ಆಧಾರ್ ಕಾರ್ಡ್ ನವೀಕರಣ, ವಾರ್ಡ್‌ನಲ್ಲಿರುವ ಸಮಸ್ಯೆ ನಿವಾರಣೆ, ಆರೋಗ್ಯ ತಪಾಸಣೆ, ಉಚಿತ ಮಧುಮೇಹ ಮತ್ತು ಕಣ್ಣಿನ ತಪಾಸಣೆ ಶಿಬಿರ ನಡೆಸಲಾಗಿದೆ. ಕೆ.ಆರ್.ಕ್ಷೇತ್ರದಲ್ಲಿ ಸಮೀಕ್ಷೆ ನಡೆಸಿದಾಗ 60 ಸಾವಿರ ಮಂದಿಗೆ ಮಧುಮೇಹ ಇರುವುದು ದೃಢಪಟ್ಟಿದೆ. ಈ ಹಿನ್ನೆಲೆಯಲ್ಲಿ ಆರೋಗ್ಯ ತಪಾಸಣೆ ಶಿಬಿರ ನಡೆಸಲಾಗುತ್ತಿದೆ. ಆರೋಗ್ಯ ಕಾಪಾಡಲು ಕಾರ್ಯಕ್ರಮ ರೂಪಿಸಲಾಗುತ್ತಿದೆ ಎಂದು ತಿಳಿಸಿದರು.

ಎಸ್‌ಎಂಟಿ ಆಸ್ಪತ್ರೆಯಲ್ಲಿ ಆರಂಭಿಸಿರುವ 10 ದಿನಗಳ ನೇತ್ರ ತಪಾಸಣಾ ಶಿಬಿರದಲ್ಲಿ ದಿನಕ್ಕೆ 30 ಮಂದಿಗೆ ಕಣ್ಣಿನ ಶಸ್ತ್ರಚಿಕಿತ್ಸೆ ನಡೆಸಲಾಗುವುದು. ಒಟ್ಟು 300 ಮಂದಿ ಈ ಯೋಜನೆಯ ಪ್ರಯೋಜನ ಪಡೆದುಕೊಳ್ಳಲಿದ್ದಾರೆ ಅದಕ್ಕಾಗಿ ಎಸ್‌ಎಂಟಿ ಆಸ್ಪತ್ರೆಯಲ್ಲಿ ಪ್ರತ್ಯೇಕ ವಾರ್ಡ್ ತೆರೆಯಲಾಗಿದೆ. ಶಸ್ತ್ರಚಿಕಿತ್ಸೆಗೆ ಒಳಗಾದವರಿಗೆ ಉಚಿತ ಔಷಧ ಹಾಗೂ ಕನ್ನಡಕ ನೀಡಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್, ನಗರಪಾಲಿಕೆ ಸದಸ್ಯ ಮ.ವಿ.ರಾಮಪ್ರಸಾದ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಹೊರರೋಗಿ, ಒಳರೋಗಿ, ಶಸ್ತ್ರಚಿಕಿತ್ಸಾ ವಿಭಾಗ ಪ್ರಾರಂಭ

ಮೈಸೂರು, ಫೆ.3– ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಅಧೀನದಲ್ಲಿರುವ ಪಿಕೆಟಿಬಿ ಮತ್ತು ಸಿಡಿ ಆಸ್ಪತ್ರೆಯ ಆವರಣದಲ್ಲಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಫೆ.6 ರಂದು ಹೊರರೋಗಿ ವಿಭಾಗವನ್ನು ಹಾಗೂ ಟ್ರಾಮಾಕೇರ್ ಸೆಂಟರ್‌ನಲ್ಲಿ ಒಳರೋಗಿ ವಿಭಾಗ ಮತ್ತು ಶಸ್ತ್ರಚಿಕಿತ್ಸೆಗಳನ್ನು ಪ್ರಾರಂಭಿಸಲಾಗುತ್ತಿದೆ. ಸದರಿ ಸರ್ಕಾರಿ ಆಸ್ಪತ್ರೆಗಳ ಸೌಲಭ್ಯಗಳನ್ನು ಸಾರ್ವಜನಿಕರು ಪಡೆಯುವಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಗಿಲು ಮುರಿದು ಚಿನ್ನಾಭರಣ ಕಳವು

ಮೈಸೂರು, ಫೆ. 3– ಮೈಸೂರಿನ ಮಾನಸ ಗಂಗೋತ್ರಿ ವಸತಿ ಗೃಹದಲ್ಲಿ ಮತ್ತೊಂದು ಕಳವು ನಡೆದಿರುವುದು ಬೆಳಕಿಗೆ ಬಂದಿದೆ. ವಸತಿ ಗೃಹದ ಸಂಖ್ಯೆ ಎಲ್–9ರ ಹಿಂಬಾಗಿಲು ಮುರಿದು ಕಳವು ಮಾಡಲಾಗಿದ್ದು, ತಡವಾಗಿ ವರದಿಗಿದೆ.

ವಿವರ: ಮೈಸೂರು ವಿವಿಯಲ್ಲಿ ಪ್ರಥಮ ದರ್ಜೆ ಸಹಾಯಕನಾಗಿರುವ ವಿ. ಮಹದೇವ(38) ಎಂಬುವರು ಮಾನಸ ಗಂಗೋತ್ರಿ 7ನೇ ಕ್ರಾಸ್‌ನಲ್ಲಿರುವ ವಸತಿ ಗೃಹ ಸಂಖ್ಯೆ ಎಲ್–9ರಲ್ಲಿ ವಾಸವಿದ್ದಾರೆ. ಇವರ ಅಜ್ಜಿಗೆ ಅನಾರೋಗ್ಯ ಕಾರಣ ಜನವರಿ 21ರಂದು ಶ್ರೀರಾಂಪುರದಲ್ಲಿರುವ ಅಜ್ಜಿ ಮನೆಗೆ ಹೋಗಿ ಅವರನ್ನು ಆಸ್ಪತ್ರೆಗೆ ದಾಖಲಿಸಿದ ನಂತರ ಜನವರಿ 27ರಂದು ಮಧ್ಯಾಹ್ನ ವಸತಿ ಗೃಹಕ್ಕೆ ಬಂದು ವಾಪಸ್ ಹೋಗಿದ್ದಾರೆ. ಫೆಬ್ರವರಿ 1ರಂದು ಸಂಜೆ ಅವರು ಮತ್ತೆ ವಸತಿ ಗೃಹಕ್ಕೆ ಬಂದಾಗ ಅದರ ಹಿಂಬಾಗಿಲನ್ನು ಮೀಟಿ ಒಳ ನುಗ್ಗಿರುವ ಖದೀಮರು, 67 ಗ್ರಾಂ ತೂಕದ ಚಿನ್ನಾಭರಣ, 200 ಗ್ರಾಂ ತೂಕದ ಬೆಳ್ಳಿ ಪದಾರ್ಥ ಹಾಗೂ 10 ಸಾವಿರ ರೂ. ನಗದು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಜಯಲಕ್ಷ್ಮೀಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಪ್ರಕರಣಕ್ಕೂ 2 ದಿನಗಳ ಹಿಂದೆ ಇದೇ ವಸತಿ ಗೃಹದಲ್ಲಿ ಮತ್ತೊಂದು ಮನೆ ಬಾಗಿಲು ಮುರಿದು ಕಳವು ಮಾಡಲಾಗಿತ್ತು.

ಮೈಸೂರು ವಿವಿ ಪರಿಶಿಷ್ಟ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಬಿಡುಗಡೆಗೆ ಪ್ರಜಾಪಾರ್ಟಿ ಆಗ್ರಹ



ಮೈಸೂರು,ಫೆ3(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಕೂಡಲೇ ಶಿಷ್ಯವೇತನ ಬಿಡುಗಡೆ ಮಾಡುವಂತೆ ಕರ್ನಾಟಕ ಪ್ರಜಾ ಪಕ್ಷದ ರಾಜ್ಯಾಧ್ಯಕ್ಷ ಡಾ.ಬಿ. ಶಿವಣ್ಣ ಒತ್ತಾಯಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ವಿವಿಯಲ್ಲಿ 250 ಮಂದಿ ಪಜಾತಿ, ಪ.ಪಂಗಡದ ಪಿಹೆಚ್‌ಡಿ ವಿದ್ಯಾರ್ಥಿಗಳು ಸಂಶೋಧನೆಯಲ್ಲಿ ತೊಡಗಿದ್ದಾರೆ. ಈ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2022–23ನೇ ಸಾಲಿನಲ್ಲಿ 2.47 ಕೋಟಿ ರೂ. ಬಿಡುಗಡೆಯಾಗಿದೆ ಆದರೆ ವಿವಿ ಅಧಿಕಾರಿಗಳು ಸಂಶೋಧನಾ ವಿದ್ಯಾರ್ಥಿಗಳಿಗೆ ಈ ಶಿಷ್ಯವೇತನ ಹಣವನ್ನು ವಿದ್ಯಾರ್ಥಿಗಳ ಬ್ಯಾಂಕಿನ ಖಾತೆಗೆ ಜಮಾ ಮಾಡದೇ ಬೇಜವಾಬ್ದಾರಿ ಧೋರಣೆ ಅನುಸರಿಸುತ್ತಿದ್ದಾರೆ. ಇದರಿಂದ ಸಂಶೋಧನಾ ವಿದ್ಯಾರ್ಥಿಗಳು ತೊಂದರೆಗೀಡಾಗಿದ್ದಾರೆ. ಹಣ ಬಿಡುಗಡೆ ಮಾಡುವಂತೆ ಕೇಳಿದರೆ, ಒಂದಲ್ಲ ಒಂದು ಸಬೂಬು ಹೇಳಿ ಕಾಲಹರಣ ಮಾಡುತ್ತಿದ್ದಾರೆ. ಈ ವಿಚಾರವಾಗಿ ಸಂಶೋಧನಾ ವಿದ್ಯಾರ್ಥಿಗಳು ಹಲವಾರು ಬಾರಿ ತಮ್ಮ ಅಳಲನ್ನು ತೋಡಿಕೊಂಡು ಶಿಷ್ಯವೇತನ ಬಿಡುಗಡೆಗೊಳಿಸುವಂತೆ ಮನವಿ ಮಾಡಿದ್ದರೂ ಸ್ಪಂದಿಸುತ್ತಿಲ್ಲ ಎಂದು ದೂರಿದರು.

ಮೈಸೂರು ವಿವಿಯಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಎಲ್ಲಾ ಹುದ್ದೆಗಳೂ ಲಕ್ಷ ಲಕ್ಷ ರೂ.ಗಳಿಗೆ ಬಿಕರಿಯಾಗುತ್ತಿವೆ. ಸಂಸದ ಪ್ರತಾಪ ಸಿಂಹ ಈ ಹಿಂದೆ ವಿವಿ ಕುಲಪತಿ ಹುದ್ದೆ 40 ಲಕ್ಷ ರೂ.ಗೆ ಮಾರಾಟವಾಗುತ್ತಿರುವ ಬಗ್ಗೆ ಗಂಭೀರ ಆರೋಪ ಮಾಡಿದ್ದಾರೆ. ಇದು ವಿವಿಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಕ್ಕೆ ಎತ್ತಿಹಿಡಿದ ಕೈಗನ್ನಡಿಯಾಗಿದೆ. ಈ ಹಿಂದಿನ ಕುಲಪತಿಗಳು ನಿವೃತ್ತಿಗೆ 15 ದಿನ ಇರುವಾಗಲೇ ತರಾತುರಿಯಲ್ಲಿ ಸುಮಾರು 8 ಕೋಟಿ ಮೊತ್ತದ ಕಾಮಗಾರಿಗೆ ಒಪ್ಪಿಗೆ ನೀಡಿದ್ದಾರೆ ರಸ್ತೆ ಅಭಿವೃದ್ಧಿ ಕಾಮಗಾರಿಗಾಗಿ ಕೋಟಿಗಟ್ಟಲೆ ಹಣ ವಿನಿಯೋಗಿಸಿದ್ದರೂ, ಕೇವಲ ಒಂದೇ ಒಂದು ಇಂಚು ಡಾಂಬರ್ ಹಾಕಿಲ್ಲ ಎಂದು ಕಿಡಿಕಾರಿದರು.


ಸುದ್ದಿಗೋಷ್ಠಿಯಲ್ಲಿ ಜೋಸೆಫ್ ಸ್ಟೀಫನ್, ಮಂಜುನಾಥ್, ಬೋರೇಗೌಡ, ಆದರ್ಶ, ಕುಮಾರಸ್ವಾಮಿ ಇದ್ದರು.

ವಿಧಾನ ಸಭಾ ಚುನಾವಣೆ - 2023

ಫೆ.13 ರಂದು ವಿ.ವಿ.ಪಾಟ್: ಪಕ್ಷ ಪ್ರತಿನಿಧಿಗಳು ಪರಿಶೀಲನೆಗೆ ಅವಕಾಶ

ಮೈಸೂರು, ಫೆ.3–ವಿಧಾನ ಸಭೆ ಚುನಾವಣೆ 2023 ರ ಸಿದ್ಧತೆಗಳು ಭರದಿಂದ ಸಾಗಿದ್ದು, ಮತದಾನ ಪ್ರಕ್ರಿಯೆ ಭಾಗವಾದ ವಿ.ವಿ.ಪಾಟ್(V.V.PAT) ಗಳು ಫೆ.13 ರಂದು ಜಿಲ್ಲೆಗೆ ಆಗಮಿಸಲಿವೆ ಎಂದು ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ಹೇಳಿದರು.

ಜಿಲ್ಲಾಡಳಿತ ಭವನದಲ್ಲಿ ಶುಕ್ರವಾರ ನಡೆದ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆಯಲ್ಲಿ ಮಾತನಾಡಿದ ಅವರು ಅಂದು ಹೈದರಾಬಾದ್ ನಿಂದ 9 ಲಾರಿಗಳಲ್ಲಿ ವಿ.ವಿ.ಪಾಟ್ ಗಳನ್ನು ತರಲಾಗುವುದು. ಎಲ್ಲಾ ಪಕ್ಷಗಳ ಪ್ರತಿನಿಧಿಗಳು ವಿ.ವಿ.ಪಾಟ್‌ಗಳನ್ನು ಪರಿಶೀಲಿಸಬಹುದಾಗಿದೆ. ತಮಗೆ ಯಾವುದೇ ಸಂದೇಹಗಳಿದ್ದರೆ ಪರಿಹರಿಸಿಕೊಳ್ಳಬಹುದಾಗಿದೆ ಎಂದರು. ವಿ.ವಿ.ಪಾಟ್ ಗಳನ್ನು ಹೈದರಾಬಾದ್ ನಿಂದ ನಮ್ಮ ಅಧಿಕಾರಿಗಳು ಸ್ವೀಕರಿಸಿದ ಕ್ಷಣದಿಂದ ವಿಡಿಯೋ ಚಿತ್ರೀಕರಣ ಮಾಡಲಾಗುತ್ತಿದೆ. ಪ್ರತಿ ಹಂತವನ್ನೂ ನೀವುಗಳು ನೋಡಬಹುದಾಗಿದೆ ಎಂದರು. ಆನಂತರ ಅಣಕು ಮತದಾನ ನಡೆಸಲಾಗುವುದು. ಒಟ್ಟಾರೆ ಯಾವುದೇ ಸಂದೇಹವಿಲ್ಲದಂತೆ ಚುನಾವಣೆ ನಡೆಸುವುದೇ ನಮ್ಮ ಉದ್ದೇಶ ಎಂದರು.



ಗುರುವಾರ ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಉಪಮುಖ್ಯಮಂತ್ರಿ ಹಾಗೂ ಹಾಲಿ ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥ ನಾರಾಯಣ್ ಅವರನ್ನು ಮೈಸೂರಿನ ಕಾವೇರಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮುಖ್ಯಸ್ಥರಾದ ಡಾ. ಚಂದ್ರಶೇಖರ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್ ಕುಮಾರ್ ಗೌಡ, ಬಿಜೆಪಿ ಮುಖಂಡ ರಮೇಶ್ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ಸರ್ಫರಾಜ್ ಚಿಸ್ತಿ ಸಾಹೆಬ್ ತಂಡದಿಂದ ಫೆ. 13ಕ್ಕೆ ಖವ್ವಾಲಿ

ಮೈಸೂರು, ಫೆ. 3– ಚಿಸ್ತಿಯಾ ಫೌಂಡೇಷನ್ ಗ್ರೂಪ್ ಮತ್ತು ಮುಷಾಯಕೀನ್ ಜಂಟಿಯಾಗಿ ಈ ವರ್ಷವೂ ಕ್ವಾಜಾ ಗರೀಬ್ ನವಾಜ್ 811ನೇ ಉರುಸ್ ಷರೀಫ್ ಮತ್ತು ರಾಜಾಸ್ಥಾನದ ಆಲಿ ಅಲೈಹಿಸಲಾಮ್ ಜನ್ಮ ವಾರ್ಷಿಕೋತ್ಸವದ ಅಂಗವಾಗಿ ಜಶ್ನೆ ಮೌಲಾ ಅಲಿ–ಒ–ಈದ್ ಚಿಸ್ತಿಯಾ–ಒ–ಮೆಹಫಿಲ್ ಸಮಾ (ಖವ್ವಾಲಿ) ಕಾರ್ಯಕ್ರಮವನ್ನು ಫೆ. 13ರ ಸೋಮವಾರದಂದು ಸಂಜೆ 7 ಗಂಟೆಗೆ ಉದಯಗಿರಿಯ ಆರ್.ಕೆ. ಪ್ಯಾಲೇಸ್ ಫಂಕ್ಷನ್ ಹಾಲ್‌ನಲ್ಲಿ ಏರ್ಪಡಿಸಲಾಗಿದೆ.



ಅಂತರರಾಷ್ಟ್ರೀಯ ಖ್ಯಾತಿಯ ಸೂಫಿ ಖವ್ವಾಲ್ ಕಲಾವಿದ ಜನಾಬ್ ಸರ್ಫರಾಜ್ ಚಿಸ್ತಿ ಸಾಹೆಬ್ ಮತ್ತು ತಂಡದವರು ಪ್ರಥಮ ಬಾರಿಗೆ ದೆಹಲಿಯಿಂದ ಐತಿಹಾಸಿಕ ನಗರ ಮೈಸೂರಿಗೆ ಆಗಮಿಸಿ ಮೆಹಫಿಲ್ ಸಮಾ (ಖವ್ವಾಲಿ) ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ. ಹೆಚ್ಚಿನ ವಿವರಗಳಿಗಾಗಿ ಮೊಬೈಲ್ ನಂ.: 9900269007, 9740985712, 9901957665, 9986539461 ಸಂಪರ್ಕಿಸಬಹುದು.

ಶನಿ ಮಹಾ ಶಾಂತಿ

ಮೈಸೂರು, ಫೆ.3– ಮೈಸೂರಿನ ದೇವರಾಜ ಮೊಹಲ್ಲಾದ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಫೆ. 5ನೇ ಭಾನುವಾರ ಬೆಳಗ್ಗೆ 9 ಗಂಟೆಗೆ ಹುಣ್ಣಿಮೆ ಪ್ರಯುಕ್ತ ಕರ್ಕಾಟಕ, ತುಲಾ, ಮಕರ, ಕುಂಭ, ಮೀನ ರಾಶಿಯವರಿಗೆ ವಿಶೇಷ ಶನಿ ಶಾಂತಿ ಮತ್ತು ಮಹಾ ಮೃತ್ಯುಂಜಯ ಹೋಮ, ಬಾಧಾ ನಿವಾರಕ ಶ್ರೀ ಸುದರ್ಶನ ಹೋಮ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೈ.ಕುಮಾರ್, ಜಾತಕ ವಿಮರ್ಶಕರು (ದೂ.9845183392, 9845183399) ಇವರನ್ನು ಸಂಪರ್ಕಿಸಬಹುದು.

ಫೆ.6ರಂದು ಜೆಎಸ್‌ಎಸ್ ಉನ್ನತ ಶಿಕ್ಷಣ ಸಂಶೋಧನಾ ಅಕಾಡೆಮಿಯ 13ನೇ ಘಟಿಕೋತ್ಸವ

ಮೈಸೂರು, ಫೆ.3(ಆರ್‌ಕೆಬಿ)– ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ 13ನೇ ಘಟಿಕೋತ್ಸವ ಫೆ.6ರಂದು ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ರಾಜೇಂದ್ರ ಸಭಾಂಗಣದಲ್ಲಿ ನಡೆಯಲಿದೆ ಎಂದು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಕುಲಪತಿ ಡಾ.ಸುರೀಂದರ್ ಸಿಂಗ್ ತಿಳಿಸಿದರು.



ಮೈಸೂರಿನ ಬನ್ನಿಮಂಟಪದಲ್ಲಿನ ಕಾಲೇಜು ಸಭಾಂಗಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಅಂದು ಬೆಳಗ್ಗೆ 11 ಗಂಟೆಗೆ ಘಟಿಕೋತ್ಸವದ ಉದ್ಘಾಟನಾ ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ಸಮಕುಲಾಧಿಪತಿ ಡಾ.ಬಿ.ಸುರೇಶ್ ಭಾಗವಹಿಸುವರು ಎಂದರು.

ಘಟಿಕೋತ್ಸವದಲ್ಲಿ ವಿವಿ ನಿಕಾಯಗಳಿಗೆ ಸೇರಿದ ಒಟ್ಟು 2339 ಪದವೀಧರರು ಪದವಿ ಮತ್ತು ಡಿಪ್ಲೊಮಾಗಳನ್ನು ಪಡೆಯಲಿದ್ದು, 65 ವಿದ್ಯಾರ್ಥಿಗಳಿಗೆ ಪಿಎಚ್‌ಡಿ ಪ್ರದಾನ ಮಾಡಲಾಗುತ್ತಿದೆ. ಹಾಗೆಯೇ 25 ವಿದ್ಯಾರ್ಥಿಗಳು ಮಾಸ್ಟರ್ ಆಫ್ ಫಿಲಾಸಫಿ, 6 ವಿದ್ಯಾರ್ಥಿಗಳಿಗೆ ಡಾಕ್ಟರೇಟ್ ಆಫ್ ಮೆಡಿಸಿನ್ (ಡಿಎಂ) ಮತ್ತು ಎಂಸಿಹೆಚ್ ಪದವಿ ಪ್ರದಾನ ಮಾಡಲಾಗುತ್ತಿದೆ. ಅಲ್ಲದೆ 60 ಮಂದಿ ಟಾಪರ್ಸ್‌ಗಳಿಗೆ ಅವರ ಶೈಕ್ಷಣಿಕ ಸಾಧನೆಗಾಗಿ 83 ಪದಕಗಳು ಮತ್ತು ಪ್ರಮಾಣ ಪತ್ರಗಳನ್ನು ನೀಡಲಾಗುವುದು ಎಂದು ತಿಳಿಸಿದರು.

ಕಳೆದ 11 ವರ್ಷಗಳಲ್ಲಿ ಏಳು ನಿಕಾಯಗಳಿಂದ ಒಟ್ಟು 13966 ವಿದ್ಯಾರ್ಥಿಗಳು ವಿವಿ ಪದವಿಗಳನ್ನು ಪಡೆದಿದ್ದಾರೆ. ಈ ವರ್ಷದ 2339 ಪದವೀಧರರ ಪೈಕಿ 1360 ವಿದ್ಯಾರ್ಥಿನಿಯರಿದ್ದು, 979 ಹುಡುಗರಿದ್ದಾರೆ ಎಂದು ಹೇಳಿದರು.

ಪದವಿ, ಸ್ನಾತಕೋತ್ತರ, ಡಾಕ್ಟರೇಟ್ (ಪಿಎಚ್.ಡಿ) ಮತ್ತು ವೃತ್ತಿಪರ ಶಿಕ್ಷಣ ನೀಡುತ್ತಿರುವ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯು 11 ವರ್ಷಗಳಲ್ಲಿ ತನ್ನ ಗುಣಮಟ್ಟ ಮತ್ತು ಉತ್ಕೃಷ್ಟತೆಯ ಪ್ರಯಾಣದಲ್ಲಿ ಅಗಾಧ ಪ್ರಗತಿ ಕಂಡಿದೆ. ಈ ಅಕಾಡೆಮಿಯನ್ನು ಕೇಂದ್ರ ಸಂಪನ್ಮೂಲ ಸಚಿವಾಲಯ ದಡಿಯ ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗವು (ಯುಜಿಸಿ) ಪರಿಗಣಿತ ವಿಶ್ವವಿದ್ಯಾನಿಲಯ ವೆಂದು ಘೋಷಿಸಿದೆ ಎಂದರು. ಭವಿಷ್ಯದಲ್ಲಿ ಜೆಎಸ್‌ಎಸ್ ಎಎಚ್‌ಇಆರ್ ನೂತನವಾಗಿ ಹೊರಹೊಮ್ಮುವ ಕ್ಷೇತ್ರಗಳಲ್ಲಿ ಮಲ್ಟಿ ಡಿಸಿಪ್ಲಿನರಿ ಕಾರ್ಯಕ್ರಮಗಳನ್ನು ರಚಿಸಲು ಬಯಸುತ್ತದೆ. ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ, ವಿನ್ಯಾಸ, ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ, ಕಂಪ್ಯೂಟರ್ ಅಪ್ಲಿಕೇಶನ್ ಮತ್ತು ಕಾನೂನು ನಿಕಾಯದಡಿ ಕಾನೂನು ಶಾಲೆಯನ್ನು ತೆರೆಯುವ ಗುರಿ ಹೊಂದಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕುಲಸಚಿವ ಡಾ.ಬಿ.ಮಂಜುನಾಥ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಆರ್. ಸುಧೀಂದ್ರ ಭಟ್ ಹಾಗೂ ಡೀನ್‌ಗಳು ಉಪಸ್ಥಿತರಿದ್ದರು.

ರೈತರ ಬದುಕು ಹಸನಾಗಲು, ಮಹಿಳೆಯರು ಸ್ವಾವಲಂಬಿಗಳಾಗಲು, ಮಕ್ಕಳ ಬದುಕು ಉಜ್ವಲಗೊಳ್ಳಲು

ಬಿಜೆಪಿ, ಕಾಂಗ್ರೆಸ್ ತಿರಸ್ಕರಿಸಿ, ಜೆಡಿಎಸ್‌ಗೆ ಅಧಿಕಾರ ನೀಡಿ

ಜನತೆಗೆ ಜೆಡಿಎಸ್ ಯುವ ಘಟಕದ ಅಧ್ಯಕ್ಷ, ನಟ ನಿಖಿಲ್ ಕುಮಾರಸ್ವಾಮಿ ಮನವಿ



ತಿ.ನರಸೀಪುರ, ಫೆ.3– ರೈತರ ಬದುಕು ಹಸನಾಗಲು, ಮಹಿಳೆಯರು ಸ್ವಾವಲಂಬಿಗಳಾಗಲು ಹಾಗೂ ಮಕ್ಕಳ ಬದುಕು ಉಜ್ವಲಗೊಳ್ಳಲು ಜಾತ್ಯತೀತ ಜನತಾ ದಳ ಸ್ವಂತ ಬಲದ ಮೇಲೆ ಸರ್ಕಾರ ರಚಿಸಬೇಕು. ಬಿಜೆಪಿ–ಕಾಂಗ್ರೆಸ್ ಎರಡೂ ರಾಷ್ಟ್ರೀಯ ಪಕ್ಷಗಳನ್ನು ಮುಂಬರುವ ಚುನಾವಣೆಯಲ್ಲಿ ತಿರಸ್ಕರಿಸಿ, ಕನ್ನಡಿಗರ, ರೈತರ ಪರವಿರುವ ಜೆಡಿಎಸ್ ಪಕ್ಷಕ್ಕೆ ಅಧಿಕಾರ ನೀಡುವಂತೆ ಜೆಡಿಎಸ್ ಯುವ ಘಟಕದ ಅಧ್ಯಕ್ಷ, ನಟ ನಿಖಿಲ್ ಕುಮಾರಸ್ವಾಮಿ ಜನತೆಗೆ ಮನವಿ ಮಾಡಿದರು.

ತಾಲೂಕಿನ ಬನ್ನೂರಿನಲ್ಲಿ ಶುಕ್ರವಾರ ನಡೆದ ಜೆಡಿಎಸ್ ಯುವ ಚೈತನ್ಯ ಯಾತ್ರೆಯಲ್ಲಿ ಕಾರ್ಯಕರ್ತರು ಹಾಗೂ ಅಭಿಮಾನಿಗಳಿಂದ ಅದ್ಧೂರಿ ಸ್ವಾಗತ ಸ್ವೀಕರಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳಿಗೆ ಅವಕಾಶ ನೀಡಿ ಯಾತನೆ ಅನುಭವಿಸಿದ್ದೀರಿ. ಕುಮಾರಣ್ಣನವರ 20 ಹಾಗೂ 14 ತಿಂಗಳ ಉತ್ತಮ ಆಡಳಿತ ನೋಡಿರುವುದರಿಂದ ಒಮ್ಮೆಯಾದರೂ ಜೆಡಿಎಸ್‌ಗೆ ಪೂರ್ಣ ಪ್ರಮಾಣದ ಸರ್ಕಾರ ನಡೆಸಲು ಬಹುಮತ ನೀಡಬೇಕು ಎಂದರು.

ಮುಖ್ಯಮಂತ್ರಿಯಾಗಿದ್ದ ಅಲ್ಪ ಅವಧಿಯಲ್ಲಿ ಹೆಚ್.ಡಿ. ಕುಮಾರಸ್ವಾಮಿ ಅವರು ರೈತರ 36 ಸಾವಿರ ಕೋಟಿ ಸಾಲ ಮನ್ನಾ ಮಾಡಿದರು. ಇದೀಗ ನಾಡಿನ ಜನರ ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ಟೊಂಕಕಟ್ಟಿ ಪಂಚರತ್ನ ಯಾತ್ರೆ ಮೂಲಕ ಏಕಾಂಗಿ ಹೋರಾಟ ನಡೆಸುತ್ತಿದ್ದಾರೆ. ರೈತರ ಬೆಳೆಗಳಿಗೆ ನ್ಯಾಯಯುತ ಬೆಲೆ, ಬಡವರ ಕೈಗೆ ಆರೋಗ್ಯ ಸೇವೆ ಸಿಗುವಂತಾಗಬೇಕು. ನಾಡು–ನುಡಿ ರಕ್ಷಣೆಯಾಗಲು ರಾಜ್ಯದಲ್ಲಿ ಕನ್ನಡ ನಾಡಿನ ಸರ್ಕಾರ ಅಧಿಕಾರಕ್ಕೆ ಬರಬೇಕು ಎಂದರು.

ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರ್ಕಾರ ಶೇ.40 ಕಮಿಷನ್ ಮೂಲಕ ಲೂಟಿ ಮಾಡುತ್ತಿದ್ದರೆ, ದುರ್ಬಲ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವ ಕನಸು ಕಾಣುತ್ತಿದೆ. ಉದ್ಯಮ ವಲಯಕ್ಕೆ ಅನುಕೂಲ ಕಲ್ಪಿಸಲು ದೇಶದ ಆರ್ಥಿಕ ನೀತಿಗಳಲ್ಲಿ ಮಾರ್ಪಾಡು ಮಾಡಿದ್ದರಿಂದ ಆರ್ಥಿಕ ಸ್ಥಿತಿ ತೀರಾ ಹದಗೆಡುತ್ತಿದ್ದು, ಯುವ ಜನತೆಗೆ ಉದ್ಯೋಗಾವಕಾಶಗಳು ಮರೀಚಿಕೆಯಾಗುತ್ತಿವೆ. ಸುದೀರ್ಘ ಅವಧಿಗೆ ಅಧಿಕಾರ ನಡೆಸಿದ ಬಿಜೆಪಿ, ಕಾಂಗ್ರೆಸ್ ಪಕ್ಷಗಳು ಜನರ ಹಿತ ಕಾಪಾಡುವಲ್ಲಿ ಸಂಪೂರ್ಣ ವಿಫಲವಾಗಿವೆ ಎಂದು ಆರೋಪಿಸಿದರು.

ಇಂತಹ ಶಾಸಕರನ್ನು ಕಳೆದುಕೊಳ್ಳಬೇಡಿ: ಜನ ಸಾಮಾನ್ಯರ ಕೈಗೆ ಸಿಗುವ ಎಂ.ಅಶ್ವಿನ್ ಕುಮಾರ್ ಅವರಂತಹ ಶಾಸಕರನ್ನು ಕ್ಷೇತ್ರದ ತಂದೆ ತಾಯಿಯರು ಕಳೆದುಕೊಳ್ಳಬೇಡಿ. ಜೆಡಿಎಸ್ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರಲು 130 ಕ್ಷೇತ್ರಗಳಲ್ಲಿ ಪಕ್ಷದ ಶಾಸಕರನ್ನು ಗೆಲ್ಲಿಸಬೇಕಾದ ಜವಾಬ್ದಾರಿ ಕಾರ್ಯಕರ್ತರ ಮೇಲಿದೆ. ಅದರಲ್ಲಿ ತಿ.ನರಸೀಪುರ ಕ್ಷೇತ್ರವೂ ಒಂದು ಎಂದರು.

ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, 2023ರ ವಿಧಾನಸಭಾ ಚುನಾವಣೆಯಲ್ಲಿ ಸ್ಪಷ್ಟ ಬಹುಮತದೊಂದಿಗೆ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಲಿದ್ದು, ಸಂಪುಟದಲ್ಲಿ ಅಶ್ವಿನ್ ಕುಮಾರ್ ಸಚಿವರಾಗುವ ಅವಕಾಶ ಇರುವುದರಿಂದ ಕ್ಷೇತ್ರದ ಜನತೆ ನನ್ನ ಕೈ ಹಿಡಿದರೆ ಅವರನ್ನು ಈ ಬಾರಿ ಬೆಂಬಲಿಸಿ ಮರು ಆಯ್ಕೆ ಮಾಡಬೇಕು. ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಅವರು ಕೂಡ ಜೆಡಿಎಸ್ ಭರವಸೆ ನಾಯಕರಾಗಿದ್ದು, ಮುಂದಿನ ನಾಯಕತ್ವವನ್ನು ಅವರೇ ವಹಿಸಿಕೊಂಡು ಪಕ್ಷವನ್ನು ಸಮರ್ಥವಾಗಿ ಮುನ್ನಡೆಸಲಿದ್ದಾರೆ ಎಂದು ಭವಿಷ್ಯ ನುಡಿದರು.

ಶಾಸಕ ಎಂ.ಅಶ್ವಿನ್ ಕುಮಾರ್ ಮಾತನಾಡಿದರು.

ಇದಕ್ಕೂ ಮುನ್ನ ಬನ್ನೂರಿನ ಶ್ರೀಗಣೇಶ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಬಳಿಕ ಆರಂಭಗೊಂಡ ಯುವ ಚೈತನ್ಯ ಯಾತ್ರೆಗೆ ಅದ್ಧೂರಿ ಸ್ವಾಗತ ದೊರೆಯಿತು. ಸಂತೆಮಾಳ ವೃತ್ತ ಮಾರ್ಗವಾಗಿ ಹನುಮನಾಳು ಗ್ರಾಮದ ಮೂಲಕ ತುರುಗನೂರು ಗ್ರಾಮದ ಬಳಿಯ ಶ್ರೀನಡುಗದ್ದೆ ಮಲ್ಲಿಕಾರ್ಜುನಸ್ವಾಮಿ ದೇವಾಲಯ ತಲುಪಿ, ಜೀರ್ಣೋದ್ಧಾರ ಕಾಮಗಾರಿಗೆ ಭೂಮಿ ಪೂಜೆ ಸಲ್ಲಿಸಿದ ಬಳಿಕ ಚಾಮನಹಳ್ಳಿ, ಬಿಜಿಎಸ್ ವೃತ್ತ ತಲುಪಿ ಶ್ರೀಪಟ್ಟಲ್ ರಂಗನಾಥಸ್ವಾಮಿ ದೇವಾಲಯ ತಲುಪಿತು. ಪಕ್ಷದ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಯುವ ನಾಯಕನಿಗೆ ಭಾರೀ ಗಾತ್ರದ ಸೇಬಿನ ಹಾರ, ಹಳ್ಳ ಬತ್ತಿಹಾರ ಹಾಗೂ ವಿವಿಧ ಬಗೆಯ ಹೂವಿನ ಹಾರಗಳನ್ನು ಹಾಕಿ ಸ್ವಾಗತ ಕೋರಿದರು.

ಈ ವೇಳೆ ಜೆಡಿಎಸ್ ಜಿಲ್ಲಾಧ್ಯಕ್ಷ ಎನ್.ನರಸಿಂಹಸ್ವಾಮಿ, ಕ್ಷೇತ್ರ ಕಾರ್ಯಾಧ್ಯಕ್ಷ ಬಿ.ಆರ್.ಮಂಜುನಾಥ, ಜಿಪಂ ಮಾಜಿ ಸದಸ್ಯ ಎಸ್.ವಿ.ಜಯಪಾಲ ಭರಣಿ, ತಾಪಂ ಮಾಜಿ ಅಧ್ಯಕ್ಷ ಕೆ.ಕುಮಾರಸ್ವಾಮಿ, ಪುರಸಭೆ ಉಪಾಧ್ಯಕ್ಷೆ ಭಾಗ್ಯ ಲೋಕೇಶ್, ಸದಸ್ಯರಾದ ದಿವ್ಯ ಚಂದ್ರು, ಸೌಮ್ಯರಾಣಿ ಮುರುಳೀಧರ, ಕೃಷ್ಣೇಗೌಡ, ಆನಂದ, ಚಲುವರಾಜು, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಓಂ ನಾಗೇಂದ್ರ, ಮುಖಂಡರಾದ ಬೀಡನಹಳ್ಳಿ ಸತೀಶ, ಪ್ರೀತಮ್, ದೀಪು ದರ್ಶನ್, ಬೇವಿನಹಳ್ಳಿ ಸತೀಶ, ಸಿ.ಆರ್.ರಂಗಸ್ವಾಮಿ ಹಾಗೂ ಇನ್ನಿತರರಿದ್ದರು.

ಮಾ.12ಕ್ಕೆ ಪಂಚರತ್ನ ಯಾತ್ರೆ

ಮುಂದಿನ ತಿಂಗಳು ಮೈಸೂರಿನಲ್ಲಿ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ಪಂಚರತ್ನ ಯಾತ್ರೆ ನಡೆಯಲಿದ್ದು, ಮಾ.12 ರಂದು ತಿ.ನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ ಯಾತ್ರೆ ಸಂಚರಿಸಲಿದೆ. ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ. ದೇವೇಗೌಡರು ಮತ್ತು ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರು ನನಗೆ ಮೈಸೂರು ಭಾಗದ ಜವಾಬ್ದಾರಿ ನೀಡಿರುವುದರಿಂದ ಜಿಲ್ಲೆಯಲ್ಲಿ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಹಗಲಿರುಳು ಶ್ರಮಿಸುವೆ.

–ನಿಖಿಲ್ ಕುಮಾರಸ್ವಾಮಿ,
ಜೆಡಿಎಸ್ ಯುವ ಘಟಕದ ಅಧ್ಯಕ್ಷ.

ಸರಗೂರಲ್ಲಿ ರೈತ ಸಂಪರ್ಕ ಕೇಂದ್ರ ಉದ್ಘಾಟನೆ



ಸರಗೂರು, ಫೆ.3– ತಾಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಕಾಡುಪ್ರಾಣಿಗಳಿಂದಾಗುವ ಅನಾಹುತ ತಡೆಗೆ ಶೀಘ್ರ ಅಧಿಕಾರಿಗಳು ಹಾಗೂ ರೈತ ಮುಖಂಡರ ಸಭೆ ಕರೆಯಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದಲ್ಲಿ ನೂತನ ತಾಲೂಕು ರೈತ ಸಂಪರ್ಕ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಕಾಡುಪ್ರಾಣಿಗಳು–ಮಾನವ ಸಂಘರ್ಷ ಹೆಚ್ಚುತ್ತಿದ್ದು, ಪರಿಹರಿಸಬೇಕಿರುವುದು ಜನಪ್ರತಿನಿಧಿಗಳು, ಸರ್ಕಾರದ ಆದ್ಯ ಕರ್ತವ್ಯ. ಅಲ್ಲದೇ ವಿಧಾನಸಭೆ ಅಧಿವೇಶನದಲ್ಲಿ ಚರ್ಚಿಸಲು ಅನುಕೂಲವಾಗಲೆಂದು ತಾಲೂಕಿನ ಬಿ.ಮಟಕೆರೆಯಲ್ಲಿ ಸಭೆ ಕರೆದು ರೈತರಿಗೆ ಆಗುತ್ತಿರುವ ಸಮಸ್ಯೆಗಳ ಕುರಿತು ಚರ್ಚಿಸಿ, ಪರಿಹಾರ ಕಂಡುಕೊಳ್ಳಲು ಮುಂದಾಗಲಾಗುವುದು ಎಂದರು.

ತಾಲೂಕು ಕೇಂದ್ರದಲ್ಲಿ 18 ಕೋಟಿ ವೆಚ್ಚದಲ್ಲಿ ಮಿನಿ ವಿಧಾನಸೌಧ ನಿರ್ಮಾಣಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅಲ್ಲದೇ ತಾಲೂಕು ಅಭಿವೃದ್ಧಿಗೆ 500 ಕೋಟಿ ರೂ. ವಿಶೇಷ ಪ್ಯಾಕೇಜ್‌ಗೂ ಮನವಿ ಸಲ್ಲಿಸಲಾಗಿದೆ. ಹಣ ಬಿಡುಗಡೆಯಾದರೆ ಮುಂದಿನ ದಿನಗಳಲ್ಲಿ ಹಂತ–ಹಂತವಾಗಿ ತಾಲೂಕು ಅಭಿವೃದ್ಧಿಯಾಗಲಿದೆ ಎಂದರು.

ವಿಧಾನಪರಿಷತ್ ಸದಸ್ಯ ಡಾ.ಕೆ.ತಿಮ್ಮಯ್ಯ ಮಾತನಾಡಿ, ಅಧಿಕಾರಿಗಳು ರೈತರ ಕಷ್ಟಗಳಿಗೆ ಸ್ಪಂದಿಸಬೇಕು. ನಗರ, ಪಟ್ಟಣ, ಕಾರ್ಖಾನೆಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುತ್ತಿರುವ ಸರ್ಕಾರ ಅದೇ ರೀತಿ ರೈತರ ಅಭಿವೃದ್ಧಿಗೂ ಹತ್ತು–ಹಲವು ಕಾರ್ಯಕ್ರಮ ರೂಪಿಸಬೇಕು. ಬೆಲೆ ನಿಗದಿಪಡಿಸುವಾಗ ರೈತರು ಮಾಡಿರುವ ಖರ್ಚು ವೆಚ್ಚ ಗಮನದಲ್ಲಿಟ್ಟುಕೊಂಡು ಬೆಲೆ ನಿಗದಿ ಮಾಡಬೇಕು. ರೈತರ ಬೆಳೆಗೆ ನ್ಯಾಯಯುತ ಬೆಲೆ ಸಿಗಬೇಕು ಎಂದರು.

ಇದೇ ಸಂದರ್ಭ ರೈತರಿಗೆ ಕೃಷಿ ಯಂತ್ರೋಪಕರಣಗಳನ್ನು ವಿತರಿಸಲಾಯಿತು. ಈ ವೇಳೆ ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ವಿನಾಯಕ ಪ್ರಸನ್ನ, ಸದಸ್ಯರಾದ ಶ್ರೀನಿವಾಸ್, ಉಮಾ, ನೂರಾಳಸ್ವಾಮಿ, ಶಿವಕುಮಾರ್, ಸಣ್ಣತಾಯಮ್ಮ, ಎಸ್.ಎಲ್.ರಾಜಣ್ಣ, ಚಲುವಕೃಷ್ಣ, ರಂಗಸ್ವಾಮಿ, ಮುಖ್ಯಾಧಿಕಾರಿ ಕೆ.ಪಿ.ವಸಂತಕುಮಾರಿ, ಜಿಪಂ ಮಾಜಿ ಸದಸ್ಯರಾದ ಕೆ.ಚಿಕ್ಕವೀರ ನಾಯಕ, ಪಿ.ರವಿ, ಭಾಗ್ಯಲಕ್ಷ್ಮೀ, ಕಾಂಗ್ರೆಸ್ ಮುಖಂಡರಾದ ಮಂಜುನಾಥ್, ಪುಟ್ಟಶಿವ, ಕೆಂಡಗಣ್ಣಸ್ವಾಮಿ, ಚಿನ್ನಸ್ವಾಮಿ, ಶಿವರಾಜು, ಬಸವರಾಜು, ಸತೀಶ್, ರೈತ ಮುಖಂಡರಾದ ಕೆ.ಎನ್.ನಾಗಣ್ಣ, ರೈತ ಸಂಘದ ಉಪಾಧ್ಯಕ್ಷ ಗಣೇಶ, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ರಂಗಸ್ವಾಮಿ, ಕೃಷಿ ಅಧಿಕಾರಿಗಳಾದ ಮಹೇಶ್ ಕುಮಾರ್, ಆಶಾ, ಸೇರಿದಂತೆ ಇನ್ನಿತರರಿದ್ದರು.

ಸಮತೋಲನ ಆಹಾರದಿಂದ ಉತ್ತಮ ಆರೋಗ್ಯ: ಡಾ.ರಜಿತಾ

ಕಂಪಲಾಪುರ, ಫೆ.3– ಹೊರಗಿನ ಆಹಾರ ಪದಾರ್ಥಗಳನ್ನು ಕಡಿಮೆ ಮಾಡಿ ಮನೆಯ ಅಥವಾ ಸುತ್ತಮುತ್ತ ಸಿಗುವ ಸ್ವಾಭಾವಿಕ ಆಹಾರ ಪದಾರ್ಥಗಳನ್ನು ಬಳಸುವುದರಿಂದ



ಉತ್ತಮ ಆರೋಗ್ಯ ಸಾಧ್ಯ ಎಂದು ಶ್ರೀ ಕ್ಲಿನಿಕ್‌ನ ವೈದ್ಯೆ ಡಾ. ರಜಿತಾ ತಿಳಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಕಂಪ್ಲಾಪುರ ವಲಯದ ಜ್ಞಾನ ವಿಕಾಸ ಕೇಂದ್ರದ ಮಾಸಿಕ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮಕ್ಕಳು ಆದಷ್ಟು ಜಂಕ್ ಫುಡ್‌ಗಳನ್ನು ಕಡಿಮೆ ಮಾಡಬೇಕು. ಇದರಿಂದ ದೇಹದ ಮೇಲೆ ದುಷ್ಪರಿಣಾಮ ಬೀರುತ್ತದೆ. ಪ್ರಕೃತಿದತ್ತವಾದ ಆಹಾರ ಪದಾರ್ಥಗಳನ್ನು ಸೇವಿಸಿದಾಗ ದೇಹ ಸಮತೋಲನದಲ್ಲಿರುತ್ತದೆ ಎಂದರು. ವಯಸ್ಸಿಗೆ ಬಂದ ಮಕ್ಕಳನ್ನು ಸ್ನೇಹಿತರಂತೆ ಕಾಣಬೇಕು. ಅವರ ಎದುರು ಪೋಷಕರು ಉದ್ವೇಗದಿಂದ ನಡೆದುಕೊಳ್ಳಬಾರದು. ಅದರಿಂದ ಅವರು ದಾರಿ ತಪ್ಪು ಸಾಧ್ಯತೆ ಇರುತ್ತದೆ. ಶಾಲೆಗೆ ಹೋಗಿ ವಿದ್ಯೆ ಕಲಿಯುವ ಜೊತೆಗೆ ಸಂಸ್ಕಾರವನ್ನು ಕಲಿಸಬೇಕು ಎಂದ ಅವರು, ಸಂಘದ ಮಹಿಳಾ ಸದಸ್ಯರಿಗೆ ಆರೋಗ್ಯದ ಬಗ್ಗೆ ಸವಿವರವಾಗಿ ತಿಳಿಸಿಕೊಟ್ಟರು.

ಈ ಸಂದರ್ಭ ಮೇಲ್ವಿಚಾರಕಿ ರವಿಕಲಾಶೆಟ್ಟಿ, ಕೇಂದ್ರದ ಸಮನ್ವಯಾಧಿಕಾರಿ ಶಾರದಾ, ಒಕ್ಕೂಟದ ಅಧ್ಯಕ್ಷೆ ಆಶಾ, ಆನಂದ್ ಸೇರಿದಂತೆ ಸಂಘದ ಸದಸ್ಯರು ಹಾಜರಿದ್ದರು.

ಹುಣಸೂರಿನ ಗ್ರಾಪಂಗಳಲ್ಲಿ ನರೇಗಾ ದಿನ ಆಚರಣೆ



ಹುಣಸೂರು, ಫೆ.3– ಗ್ರಾಮೀಣ ಜನರ ಶ್ರೇಯೋಭಿವೃದ್ಧಿಗಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಜಾರಿಗೊಂಡು 18 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ತಾಲೂಕಿನ ಎಲ್ಲಾ ಗ್ರಾಪಂಗಳಲ್ಲೂ ನರೇಗಾ ದಿನ ಆಚರಿಸಲಾಯಿತು.

ತಾಲೂಕಿನ ಬಿಳಿಗೆರೆ, ಬನ್ನಿಕುಪ್ಪೆ, ಕೊತ್ತೇಗಾಲ, ಹಳೇಬೀಡು, ಚಿಕ್ಕಬೀಚನಹಳ್ಳಿ, ಉಯಿಗೊಂಡನಹಳ್ಳಿ ಸೇರಿದಂತೆ ಪ್ರತಿ ಗ್ರಾಪಂಗಳಲ್ಲಿ 100 ಮಾನವ ದಿನಗಳನ್ನು ಪೂರೈಸಿದ ನರೇಗಾ ಕೂಲಿ ಕಾರ್ಮಿಕರನ್ನು ಸನ್ಮಾನಿಸುವ ಮೂಲಕ ವಿನೂತನವಾಗಿ ನರೇಗಾ ದಿನ ಆಚರಿಸಲಾಯಿತು. ಈ ವಿಶೇಷ ದಿನದಂದೇ ಸರ್ಕಾರಿ ಪ್ರಾಥಮಿಕ ಹಿರಿಯ ಶಾಲಾ ಮಕ್ಕಳಿಂದ ಜಾಗೃತಿ ಜಾಥಾ, ಚಿತ್ರಕಲಾ ಸ್ಪರ್ಧೆ ಏರ್ಪಡಿಸುವ ಮೂಲಕ ನರೇಗಾದ ಬಹುಮುಖ್ಯ ಯೋಜನೆಗಳಲ್ಲಿ ಒಂದಾದ ಜಲ ಸಂರಕ್ಷಣೆ ಕುರಿತು ಮಕ್ಕಳಲ್ಲಿ ಜಾಗೃತಿ ಮೂಡಿಸಲಾಯಿತು. ಅಲ್ಲದೇ ಸ್ಪರ್ಧೆಯಲ್ಲಿ ಉತ್ತಮವಾಗಿ ಚಿತ್ರ ಬಿಡಿಸಿದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ಇದೇ ವೇಳೆ ಜನರಿಗೆ ಧರ್ಮಸ್ಥಳ ಸಂಘದ ಸಂಯೋಜಕರಿಂದ ಇ–ಶ್ರಮ್ ತಂತ್ರಾಂಶದಲ್ಲಿ ಕೂಲಿ ಕಾರ್ಮಿಕರ ನೋಂದಣಿ ಪ್ರಕ್ರಿಯೆ, ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಹಿರಿಯ ನಾಗರಿಕರಿಗೆ ಆರೋಗ್ಯ ತಪಾಸಣೆ, ಭಾರತೀಯ ಅಂಚೆ ಕಚೇರಿ ವತಿಯಿಂದ ಪೋಸ್ಟ್ ಬ್ಯಾಂಕ್‌ಗಳಲ್ಲಿ ಖಾತೆ ತೆರೆಯಲಿಚ್ಛಿಸುವ ಆಸಕ್ತರಿಗೆ ಖಾತೆ ತೆರೆಸಲಾಯಿತು.

ಈ ವೇಳೆ ಪಿಡಿಓಗಳು, ಕಾರ್ಯದರ್ಶಿಗಳು, ಜನಪ್ರತಿನಿಧಿಗಳು, ಶಾಲಾ ಮುಖ್ಯೋಪಾಧ್ಯಾಯರು, ತಾಂತ್ರಿಕ ಸಂಯೋಜಕ ಅರವಿಂದ್, ತಾಲೂಕು ಐಇಸಿ ಸಂಯೋಜಕರು, ತಾಂತ್ರಿಕ ಸಹಾಯಕ ಇಂಜಿನಿಯರ್, ಬಿಎಫ್ಟಿಗಳು, ಗ್ರಾಮ ಕಾಯಕ ಮಿತ್ರರು ಸೇರಿದಂತೆ

ಪೋಷಕರು ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಿ

ಕನಕದಾಸ ಸಾರ್ವಜನಿಕ ಟ್ರಸ್ಟ್ ಅಧ್ಯಕ್ಷ ಬಿ.ಎಂ.ರಾಮು



ನಂಜನಗೂಡು, ಫೆ.3– ಶೋಷಿತ ಸಮಾಜಗಳ ಅಭಿವೃದ್ಧಿ ಶಿಕ್ಷಣದಿಂದ ಮಾತ್ರ ಸಾಧ್ಯ. ಆದ್ದರಿಂದ ಪೋಷಕರು ಮಕ್ಕಳಿಗಾಗಿ ಆಸ್ತಿ ಮಾಡುವ ಬದಲು ನಿಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸುವ ಮೂಲಕ ಮಕ್ಕಳನ್ನೇ ಆಸ್ತಿಯನ್ನಾಗಿ ರೂಪಿಸಬೇಕು ಎಂದು ಜಿಪಂ ಮಾಜಿ ಅಧ್ಯಕ್ಷ ಹಾಗೂ ಕನಕದಾಸ ಸಾರ್ವಜನಿಕ ಟ್ರಸ್ಟ್ ಅಧ್ಯಕ್ಷ ಬಿ.ಎಂ.ರಾಮು ತಿಳಿಸಿದರು.

ನಗರದ ಕನಕ ಭವನದಲ್ಲಿ ನಡೆದ ಕನಕದಾಸ ಪ್ರಾಥಮಿಕ ಮತ್ತು ಪ್ರೌಢಶಾಲೆ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದಲ್ಲಿ ಶತಮಾನಗಳಿಂದ ಶೋಷಣೆಗೆ ಒಳಗಾಗಿ, ಶಿಕ್ಷಣದಿಂದ ವಂಚಿತರಾದ ಹಿಂದುಳಿದ ವರ್ಗ, ಎಸ್ಸಿ, ಎಸ್ಟಿ ಸೇರಿದಂತೆ ಎಲ್ಲಾ ಸಮುದಾಯಗಳಿಗೂ ಶಿಕ್ಷಣ ದೊರಕಬೇಕೆಂಬ ಸದುದ್ದೇಶದಿಂದ ಮಾಜಿ ಶಾಸಕ ದಿ.ಎನ್. ರಾಚಯ್ಯರವರು ತಮ್ಮ ಆಸ್ತಿ ಮಾರಿ ಈ ಪ್ರಾಥಮಿಕ ಮತ್ತು ಪೌಢಶಾಲೆಗಳನ್ನು ತೆರೆದರು. ಈ ಸಂಸ್ಥೆ ಮೂಲಕ ಸಾವಿರಾರು ಮಂದಿ ಶಿಕ್ಷಣ ಕಲಿತು ಸಮಾಜದಲ್ಲಿ ಉನ್ನತ ಹುದ್ದೆ ಅಲಂಕರಿಸಿದ್ದಾರೆ. ಎಲ್ಲಾ ಸಮುದಾಯಗಳು ಅಭಿವೃದ್ಧಿಯಾದಾಗ ಮಾತ್ರ ಅಭಿವೃದ್ಧಿ ಎಂಬುದಕ್ಕೆ ಅರ್ಥ ಬರುತ್ತದೆ. ಶಿಕ್ಷಣದಿಂದ ಮಾತ್ರ ಹಿಂದುಳಿದ ಸಮುದಾಯಗಳ ಏಳಿಗೆ ಸಾಧ್ಯ ಆದ್ದರಿಂದ ಪೋಷಕರು ನಿಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಅವರನ್ನೇ ಆಸ್ತಿ ಮಾಡಿ ಎಂದರು.

ಯಶಸ್ಸು ಕಠಿಣ ಪರಿಶ್ರಮ, ಸತತ ಪ್ರಯತ್ನದಿಂದ ಮಾತ್ರ ಸಾಧ್ಯ. ವಿದ್ಯಾರ್ಥಿಗಳು ಒಂದು ನಿರ್ದಿಷ್ಠ ಗುರಿ ಇಟ್ಟುಕೊಂಡು ಆ ಗುರಿ ಮುಟ್ಟಲು ಮುಂದಾಗಬೇಕು. ಕ್ರೀಡೆಗಳಲ್ಲಿ ಸೋಲು, ಗೆಲುವು ಸಹಜ. ಅಂತೆಯೇ ಜೀವನದಲ್ಲಿ ಸೋತಾಗ ಹತಾಶರಾಗದೆ ಸೋಲನ್ನೇ ಮೆಟ್ಟಿಲು ಮಾಡಿಕೊಂಡು ಸಾಧನೆಗೈಯಬೇಕು. ನಿಮ್ಮ ತಂದೆ ತಾಯಿಗಳು ನಿಮ್ಮ ಮೇಲೆ ನಂಬಿಕೆ ಇಟ್ಟುಕೊಂಡಿದ್ದಾರೆ. ತಂದೆ ತಾಯಿಗಳ ಕನಸು ಭಗ್ನಗೊಳಿಸದೆ ಉತ್ತಮ ಶಿಕ್ಷಣ ಪಡೆದು ದೇಶದ ಅಭಿವೃದ್ಧಿಗೆ ಕೊಡುಗೆ ನೀಡಿ ಎಂದು ಸಲಹೆ ನೀಡಿದರು.

ಸಾಹಿತಿ ಕಳಲೆ ಜವರನಾಯಕ ಮಾತನಾಡಿದರು. ಕಾರ್ಯಕ್ರಮದಲ್ಲಿ ಕ್ರೀಡಾ ಚಟುವಟಿಕೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ವಿದ್ಯಾರ್ಥಿಗಳು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮ ಪ್ರೇಕ್ಷಕರನ್ನು ರಂಜಿಸಿದವು. ಸಮಾರಂಭದಲ್ಲಿ ಎಂ.ಹುಚ್ಚಯ್ಯ, ಕೆ.ಎನ್. ನಂಜಯ್ಯ, ನೀಲಿಸಿದ್ದು, ಚಂದ್ರಶೇಖರ್, ಬಸವರಾಜು, ಶಿವಕುಮಾರ್, ಶಾಲಾ ಮುಖ್ಯೋಪಧ್ಯಾಯ ಮಂಜುಪ್ರಸಾದ್, ಶಿಕ್ಷಕರಾದ ಉಷಾ, ಶಿವಣ್ಣ, ಮಹದೇವು, ಸೇರಿದಂತೆ ವಿದ್ಯಾರ್ಥಿಗಳು ಮತ್ತು ಪೋಷಕರು ಇದ್ದರು.

ಆಕಸ್ಮಿಕ ಬೆಂಕಿ: ಲಕ್ಷಾಂತರ ರೂ.ಮೌಲ್ಯದ ಸಾಮಾಗ್ರಿ ಭಸ್ಮ

ಹುಣಸೂರು, ಫೆ.3– ಆಕಸ್ಮಿಕ ಬೆಂಕಿ ತಗುಲಿ ಲಕ್ಷಾಂತರ ರೂ. ಬೆಲೆಬಾಳುವ ಕಟ್ ಸೈಜ್ ಸಾಮಗ್ರಿಗಳು ಭಸ್ಮವಾಗಿರುವ ಘಟನೆ ನಗರದ ಬೋಟಿ ಬಜಾರ್‌ನ ಸಾಮಿಲ್‌ನಲ್ಲಿ ಗುರುವಾರ ರಾತ್ರಿ ನಡೆದಿದೆ.

ನಗರದ ಸಾಮಿಲ್ ಮಾಲೀಕ ಮುಷೀರ್ ಅಹಮದ್ ಅವರಿಗೆ ಸೇರಿದ ಸಾಮಿಲ್‌ನಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಸುಮಾರು 10 ಲಕ್ಷ ರೂ.ಗಳಿಗೂ ಹೆಚ್ಚು ಮೌಲ್ಯದ ಕಟ್ ಸೈಜ್ ಸಾಮಗ್ರಿಗಳು ಭಸ್ಮವಾಗಿದೆ ಎಂದು ಅಂದಾಜಿಸಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಶಾಸಕ ಹೆಚ್.ಪಿ.ಮಂಜುನಾಥ್ ಪರಿಶೀಲನೆ ನಡೆಸಿ ಮುಷೀರ್ ಅಹಮದ್‌ಗೆ ಲಕ್ಷ ರೂ. ಪರಿಹಾರ ಧನ ನೀಡಿದರು. ಈ ವೇಳೆ ಬಷೀರ್ ಅಹಮದ್, ಅಯೂಬ್ ಖಾನ್, ಮಹಮ್ಮದ್ ಸಲಾವುದ್ದೀನ್(ಅಮೀನ್), ಶಫೀಖ್ ಅಹಮದ್, ಪುರುಷೋತ್ತಮ್, ಕಾಮೇಶ, ಶಂಕರ ಹಾಗೂ ಇನ್ನಿತರರಿದ್ದರು.

ವರುಣಾ, ತಿ.ನರಸೀಪುರದಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವಿಗೆ ಶ್ರಮಿಸಿ

ಕಾರ್ಯಕರ್ತರಿಗೆ ಬಿಜೆಪಿ ಹಿರಿಯ ಮುಖಂಡ ತೋಟದಪ್ಪ ಬಸವರಾಜು ಮನವಿ



ತಿ.ನರಸೀಪುರ, ಫೆ.3– ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನಪರ ಯೋಜನೆಗಳನ್ನು ನಾಗರಿಕರಿಗೆ ಮನದಟ್ಟು ಮಾಡಿ ಕೊಡುವ ಮೂಲಕ ವರುಣಾ ಹಾಗೂ ತಿ.ನರಸೀಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಈ ಬಾರಿ ಬಿಜೆಪಿ ಅಭ್ಯರ್ಥಿ ಗೆಲುವಿಗೆ ಶ್ರಮಿಸುವಂತೆ ಕಾರ್ಯಕರ್ತರಿಗೆ ಬಿಜೆಪಿ ಹಿರಿಯ ಮುಖಂಡ ತೋಟದಪ್ಪ ಬಸವರಾಜು ಮನವಿ ಮಾಡಿದರು.

ಪಟ್ಟಣದ ಜಿಎಸ್‌ಎಫ್ ಕಾಲೋನಿ ನಾಗರಿಕರು ಏರ್ಪಡಿಸಿದ್ದ ಬಿಜೆಪಿ ಜಿಲ್ಲಾ ಎಸ್‌ಟಿ ಮೋರ್ಚಾ ಉಪಾಧ್ಯಕ್ಷ ಮುದ್ದುಕೃಷ್ಣ ಅವರ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ದೇಶದಲ್ಲಿ ಉತ್ತಮ ಆಡಳಿತ ನೀಡುತ್ತಿರುವ ಪ್ರಧಾನಿ ಮೋದಿ ಕೊರೊನಾ ಸಂದರ್ಭ ತೆಗೆದುಕೊಂಡ ದಿಟ್ಟ ನಿರ್ಧಾರದಿಂದ ಎಲ್ಲಾ ಪ್ರಜೆಗಳು ಆರೋಗ್ಯವಾಗಿದ್ದಾರೆ ಎಂದ ಅವರು, ಕೊರೊನಾದಿಂದ ಇತರೆ ರಾಷ್ಟ್ರಗಳ ಆರ್ಥಿಕ ಪರಿಸ್ಥಿತಿ ಕುಸಿದಿದೆ. ಆದರೆ ನಮ್ಮ ದೇಶದ ಆರ್ಥಿಕ ಪರಿಸ್ಥಿತಿ 5ನೇ ಸ್ಥಾನಕ್ಕೇರಿದೆ ಎಂದರು.

ಆಹಾರ ಉತ್ಪಾದನೆಯಲ್ಲೂ ಭಾರತ 2ನೇ ಸ್ಥಾನದಲ್ಲಿದೆ. ಅದೇ ರೀತಿ ರಾಜ್ಯದಲ್ಲೂ ಮುಖ್ಯಮಂತ್ರಿ ಬಸವರಾಜು ಬೊಮ್ಮಾಯಿ ಜನತೆಗೆ ಹಲವಾರು ಕಾರ್ಯಕ್ರಮ ನೀಡುವ ಮೂಲಕ ಬಿಜೆಪಿ ಪಕ್ಷ ಬಲಪಡಿಸುತ್ತಿದ್ದಾರೆ. ಮಾಜಿ ಸಿಎಂ ಯಡಿಯೂರಪ್ಪನವರ ನಾಯಕತ್ವದಲ್ಲಿ ಮುಂಬರುವ ಚುನಾವಣೆಯಲ್ಲಿ ಬಿಜೆಪಿ 150ಕ್ಕೂ ಹೆಚ್ಚು ಸ್ಥಾನ ಗೆದ್ದು ಅಧಿಕಾರ ಹಿಡಿಯುವುದು ನಿಶ್ಚಿತ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕ್ಷೇತ್ರ ಬಿಜೆಪಿ ಅಧ್ಯಕ್ಷ ಕೆ.ಸಿ. ಲೋಕೇಶ್ ನಾಯಕ್, ಸ್ಥಳೀಯರ ಒತ್ತಾಯ, ಪಕ್ಷ ಸಂಘಟನೆ ಉದ್ದೇಶ ಹಾಗೂ ಜಿಲ್ಲಾ ಎಸ್‌ಟಿ ಮೋರ್ಚಾ ಅಧ್ಯಕ್ಷ ಅಣ್ಣಿನಾಯಕ್ ಮನವಿ ಮೇರೆಗೆ ಪಟ್ಟಣದ ಜಿಎಸ್‌ಎಫ್ ಕಾಲೋನಿಯ ಮುದ್ದುಕೃಷ್ಣ ಅವರನ್ನು ಜಿಲ್ಲಾ ಎಸ್‌ಟಿ ಮೋರ್ಚಾ ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿದ್ದು, ಮುಂಬರುವ ಚುನಾವಣೆಯಲ್ಲಿ ಪಕ್ಷ ಸಂಘಟಿಸಿ, ಈ ಬಾರಿ ಈ ಕ್ಷೇತ್ರದಲ್ಲಿ ಕಮಲ ಅರಳಿಸುವಂತೆ ಮನವಿ ಮಾಡಿದರು.

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಸ್‌ಟಿ ವರ್ಗದ ಪ್ರತ್ಯೇಕ ನಿಗಮ ಸ್ಥಾಪಿಸಿ ಸವಲತ್ತುಗಳನ್ನು ನೀಡಲಾಗಿದೆ. ಅಲ್ಲದೆ ತಳವಾರ ಹಾಗೂ ಪರಿವಾರ ಎಂಬ ಜಾತಿ ಗೊಂದಲಕ್ಕೆ ಕಡಿವಾಣ ಹಾಕಿ, ನಾಯಕ ಜನಾಂಗ ಎಂದು ಗುರುತಿಸಿ ಎಲ್ಲರಿಗೂ ಎಸ್‌ಟಿ ಸರ್ಟಿಫಿಕೇಟ್‌ಗಳನ್ನು ನೀಡಲಾಗುತ್ತದೆ. ವಾಲ್ಮೀಕಿ ಜಯಂತಿಗೆ ರಜೆ ಘೋಷಿಸಲಾಗಿದೆ ಹಾಗೂ ಎಸ್‌ಟಿ ಜನಾಂಗಕ್ಕೆ ಶೇ.7 ರಷ್ಟು ಮೀಸಲಾತಿ ನೀಡುವ ಮೂಲಕ ಜನಾಂಗದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಬಿಜೆಪಿ ಪಕ್ಷವನ್ನು, ನಾವು ಮುಂಬರುವ ಚುನಾವಣೆಯಲ್ಲಿ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಕೆಲಸ ಮಾಡಬೇಕೆಂದು ಕಾರ್ಯಕರ್ತರಿಗೆ ಕರೆ ನೀಡಿದರು.

ನೂತನ ಬಿಜೆಪಿ ಎಸ್‌ಟಿ ಮೋರ್ಚಾ ಉಪಾಧ್ಯಕ್ಷ ಮುದ್ದುಕೃಷ್ಣ ಅವರನ್ನು ಜಿಎಸ್‌ಎಫ್ ಕಾಲೋನಿ ಯುವಕರ ಬಳಗದಿಂದ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯದರ್ಶಿ ವೆಂಕಟರಮಣಶೆಟ್ಟಿ, ಎಸ್ಸಿ ಮೋರ್ಚಾ ಉಪಾಧ್ಯಕ್ಷ ಮಂಜು, ಮೂಗೂರು ಶಕ್ತಿ ಕೇಂದ್ರದ ಅಧ್ಯಕ್ಷ ಅರವಿಂದ್, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಚಾಮನಾಯ್ಕ, ಮುಖಂಡರಾದ ವಾಸು, ಅನಿಲ್, ಚಿರಂಜೀವಿ, ಗ್ಯಾಸ್ ಸ್ವಾಮಿ, ಕುಮಾರ್, ಪ್ರಸನ್ನ ಮತ್ತಿತರರಿದ್ದರು.

ಅಪ್ರತಿಮ ದೇಶಭಕ್ತ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ



ಭೇರ್ಯ, ಫೆ.3– ಬ್ರಿಟಿಷರ ವಿರುದ್ಧ ಪರಾಕ್ರಮ ತೋರಿದ ಅಪ್ರತಿಮ ದೇಶಭಕ್ತ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಎಂದು ಜಿಲ್ಲಾ ಕುರುಬರ ಸಂಘದ ನಿರ್ದೇಶಕ ಗಂಧನಹಳ್ಳಿ ಹೇಮಂತ್ ತಿಳಿಸಿದರು.

ತಾಲೂಕಿನ ಗಂಧನಹಳ್ಳಿಯಲ್ಲಿ ನಡೆದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣರ 192ನೇ ಪುಣ್ಯಸ್ಮರಣೆ ಉದ್ಘಾಟಿಸಿ ಮಾತನಾಡಿದ ಅವರು, ಸ್ವಾತಂತ್ರ್ಯದ ಕಹಳೆ ಊದಿದ ಮೊದಲ ಕನ್ನಡಿಗ ರಾಯಣ್ಣ, ಸ್ವಾಮಿ ಭಕ್ತಿ ಹಾಗೂ ದೇಶಭಕ್ತಿಗೆ ಹೆಸರಾಗಿದ್ದಾರೆ. ಯುವಪೀಳಿಗೆ ಸಂಗೊಳ್ಳಿ ರಾಯಣ್ಣನ ದೇಶಭಕ್ತಿ ಅರಿಯಬೇಕು. ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಡಿದ ರಾಯಣ್ಣರ ದೇಶಭಕ್ತಿ ಹಾಗೂ ವಿಚಾರಧಾರೆಗಳನ್ನು ಮೈಗೂಡಿಸಿಕೊಳ್ಳಬೇಕು ಎಂದ ಅವರು, ಬ್ರಿಟಿಷರು ಕಿತ್ತೂರು ಸಂಸ್ಥಾನಕ್ಕೆ ಕಪ್ಪ ಕೊಡಬೇಕೆಂದು ಆದೇಶ ಹೊರಡಿಸಿದಾಗ ಕಿತ್ತೂರು ರಾಣಿ ಚೆನ್ನಮ್ಮ ಅದನ್ನು ವಿರೋಧಿಸಿ ಬ್ರಿಟಿಷರ ವಿರುದ್ಧ ಯುದ್ಧಕ್ಕೆ ನಿಂತರು. ಈ ವೇಳೆ ಅವರ ಜೊತೆ ಕಿತ್ತೂರು ಸಂಸ್ಥಾನದ ಉಳಿವಿಗೆ ಹೋರಾಡಿದ ಸಂಗೊಳ್ಳಿ ರಾಯಣ್ಣ 1831 ಜ.26ರಂದು ಪ್ರಾಣ ತ್ಯಾಗ ಮಾಡಿದರು ಎಂದರು.

ಸಂಗೊಳ್ಳಿ ರಾಯಣ್ಣ ಹುಟ್ಟಿದ್ದು, ಆ.15, ಸಾವನ್ನಪ್ಪಿದ್ದು ಜ.26 ಈ ಎರಡೂ ದಿನಗಳು ದೇಶಕ್ಕೆ ಸ್ವಾತಂತ್ರ್ಯ ಬಂದ ಹಾಗೂ ಸಂವಿಧಾನ ಆಚರಣೆಗೆ ಬಂದ ದಿನಗಳಾಗಿ ಮಹತ್ವ ಪಡೆದುಕೊಂಡಿವೆ. ಹೀಗಾಗಿ ರಾಯಣ್ಣರ ಸ್ಮರಣೆ ಕನ್ನಡಿಗರ ಮನಗಳಲ್ಲಿ ಶಾಶ್ವತವಾಗಿ ನೆಲೆಸಲಿ ಎಂದು ರಾಯಣ್ಣನ ಗುಣಗಾನ ಮಾಡಿ ಅವರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಮುಖಂಡ ಜಿ.ಎಸ್.ವೆಂಕಟೇಶ್, ಯಾಜಮಾನ ಜಿ.ಎನ್.ರಘು, ಗ್ರಾಪಂ ಮಾಜಿ ಸದಸ್ಯರಾದ ಮಂಜುನಾಥ, ಲಕ್ಷ್ಮಣ, ಲಕ್ಕೂಗೌಡ, ಕನಕದಾಸ ಯುವಕ ಸಂಘದ ಪದಾಧಿಕಾರಿಗಳಾದ ಜಿ.ಎನ್.ಮಂಜುನಾಥ ಅರಸ್, ಕೆಂಪರಾಜು, ಶ್ರೀಧರ್, ಜಯರಾಜ್, ಜಿ.ಹೆಚ್.ಸಂತೋಷ, ಅರುಣ್, ಚಂದನ್, ಸಚ್ಚಿ, ಅಪ್ಪು, ಅಂಗಡಿ ಮಧು, ಯುವರಾಜ್, ಮಾರುತಿ, ಗಣೇಶ್, ರವಿಶೆಟ್ಟಿ, ಸೂರಿ, ದುಷ್ಯಂತ್, ಚಿರು, ಶಿಕ್ಷಕ ವಸಂತ್ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಹುಟ್ಟುಹಬ್ಬದ ಶುಭಾಶಯಗಳು........



Promotional Feature

ಬನ್ನೂರಿಗೆ ಕಾರ್ಯಕ್ರಮ ನಿಮಿತ್ತ ಶುಕ್ರವಾರ ಆಗಮಿಸಿದ್ದ ಜಾತ್ಯಾತೀತ ಜನತಾದಳದ ರಾಜ್ಯ ಯುವ ಘಟಕದ ಅಧ್ಯಕ್ಷರಾದ ನಿಖಿಲ್ ಕುಮಾರಸ್ವಾಮಿ ಅವರನ್ನು ಬೋಗಾದಿ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷರಾದ ಲಕ್ಷ್ಮೀ ನಾಗರಾಜು ಬೋಗಾದಿ ಮತ್ತು ಚೇತನ್ ಅವರು ಆತ್ಮೀಯವಾಗಿ ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಟಿ.ನರಸೀಪುರ ಶಾಸಕ ಅಶ್ವಿನ್ ಕುಮಾರ್ ಉಪಸ್ಥಿತರಿದ್ದರು.

2nd Year Fond Remembrance



Today is the anniversary of the day that we lost you & for a time it felt as though our life had ended too. And though we are full of sadness that you are no longer here, your influence still guides us & we still feel you near. Missing you every second "Amma". And love you more than life.

Smt. SUSHEELA BHAGYAMANI
W/o Sri. SUNANDA RAJ
14.11.1963-04.02.2021

From your grieving daughters
Ramya.S and Vinutha.S

